# ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ

ಅರ್ಪಿಸಿದ ಸಂಪ್ರಬಂಧ

ಶೀರ್ಷಿಕೆ

## ಡಾ। ನಾ. ಮೊಗಸಾಲೆಯವರ "ಅನಂತ" ಮತ್ತು "ಕನಸಿನ ಬಳ್ಳಿ" ಕಾದಂಬರಿಗಳ ಸಾಮಾಜಿಕ ಮತ್ತು ಪ್ರಾದೇಶಿಕತೆಯ ಒಂದು ಅಧ್ಯಯನ

ವಿದ್ಯಾರ್ಥಿಯ ನೋಂದಣಿ ಸಂಖ್ಯೆ

15070103004 1

# ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ

ಅರ್ಪಿಸಿದ ಸಂಪ್ರಬಂಧ

ಶೀರ್ಷಿಕೆ

## ಡಾ। ನಾ. ಮೊಗಸಾಲೆಯವರ "ಅನಂತ" ಮತ್ತು "ಕನಸಿನ ಬಳ್ಳಿ" ಕಾದಂಬರಿಗಳ ಸಾಮಾಜಿಕ ಮತ್ತು ಪ್ರಾದೇಶಿಕತೆಯ ಒಂದು ಅಧ್ಯಯನ

ವಿದ್ಯಾರ್ಥಿಯ ನೋಂದಣಿ ಸಂಖ್ಯೆ

150701030041

# ಮಾರ್ಗದರ್ಶಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2015–16ರ ಸಾಲಿನ ಎಂ.ಫಿಲ್. ಪದವಿಗಾಗಿ ಡಾ। ನಾ. ಮೊಗಸಾಲೆಯವರ "ಅನಂತ" ಮತ್ತು "ಕನಸಿನ ಬಳ್ಳಿ" ಕಾದಂಬರಿಗಳ ಸಾಮಾಜಿಕ ಮತ್ತು ಪ್ರಾದೇಶಿಕತೆಯ ಒಂದು ಅಧ್ಯಯನ ಎಂಬ ಸಂಪ್ರಬಂಧವನ್ನು ವಿದ್ಯಾರ್ಥಿಯು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ.

ಈ ಸಂಪ್ರಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಲ್ಲಿದ್ದು ಇದರ ಯವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ವಿದ್ಯಾರ್ಥಿಯ ನೋಂದಣಿ ಸಂಖ್ಯೆ

150701030041

# ಸಂಶೋಧಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2015–16ರ ಸಾಲಿನ ಎಂ.ಫಿಲ್. ಪದವಿಗಾಗಿ ಡಾ। ನಾ. ಮೊಗಸಾಲೆಯವರ "ಅನಂತ" ಮತ್ತು "ಕನಸಿನ ಬಳ್ಳಿ" ಕಾದಂಬರಿಗಳ ಸಾಮಾಜಿಕ ಮತ್ತು ಪ್ರಾದೇಶಿಕತೆಯ ಒಂದು ಅಧ್ಯಯನ ಎಂಬ ಸಂಪ್ರಬಂಧವನ್ನು ಮಾರ್ಗದರ್ಶಕರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿರುತ್ತೇನೆ.

ಈ ಸಂಪ್ರಬಂಧ ನನ್ನ ಸ್ವಂತ ಬರವಣಿಗೆಯಲ್ಲಿದ್ದು ಇದರ ಯವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ವಿದ್ಯಾರ್ಥಿಯ ನೋಂದಣಿ ಸಂಖ್ಯೆ

150701030041

# ಪರಿವಿಡಿ

# ಅಧ್ಯಾಯ-1

## ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಕಾದಂಬರಿ, ಸಣ್ಣಕಥೆ ಪಾಶ್ಚಾತ್ಯ ಸಾಹಿತ್ಯದಿಂದ ನಮಗೆ ಕನ್ನಡಕ್ಕೆ ಬಂದವು ಎಂದು ಹೇಳಬಹುದಾದಷ್ಟು ಮಟ್ಟಿಗೆ ಪ್ರಭಾವಿತವಾದವು. ಇಂಗ್ಲೀಷ್ ಸಾಹಿತ್ಯದ ಪ್ರಭಾವ ಬೀಳವು ಮೊದಲೇ 'ಕಾದಂಬರಿ' ಎನ್ನಬಹುದಾದ ಮೂರು ಕೃತಿಗಳು ರಚಿತವಾದವು ಎಂದು ಸಾಹಿತ್ಯದ ಚರಿತ್ರಕಾರರು ಹೇಳುತ್ತಾರೆ. ಯಾದವನ 'ಕಲಾವತೀ ಪರಿಣಯ' (ಸು 1815), ಮುಮ್ಮಡಿ ಕೃಷ್ಣರಾಜರ 'ಸೌಗಂಧಿಕಾ ಪರಿಣಯ' [1821] ಮತ್ತು ಕೆಂಪು ನಾರಾಯಣನ 'ಮುದ್ರಾಮಂಜೂಷ' [1823] ಮೊದಲ ಎರಡು ಅದ್ಭುತ ರಮ್ಯ ಕಥೆಗಳು. ದೇವತೆಗಳ, ಮಾಟ ಮಂತ್ರಗಳ ಪ್ರವೇಶ ಉಂಟು. 'ಕಲಾವತೀ ಪರಿಣಯ' ದಲ್ಲಿ ಒಳ್ಳೆಯ ಕಥಾನಕವಿದೆ, ಪಾತ್ರಗಳ ನಿರೂಪಣೆಯಲ್ಲಿ ಸಹಜತೆಯೂ ಇಲ್ಲದಿಲ್ಲ. 'ಸೌಗಂಧಿಕಾ ಪರಿಣಯ' ದ ಭಾಷೆ ಹೊಸಗನ್ನಡಕ್ಕೆ ಹತ್ತಿರವಿದೆ.

ಆಧುನಿಕತೆ ಕನ್ನಡದಲ್ಲಿ ಕಾವ್ಯಕ್ಕಿಂತಲೂ ಮೊದಲು ಕಾದಂಬರಿಯಲ್ಲಿ ಕಾಣಿಸಿ ಕೊಂಡಿತೆನ್ನುವುದು ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಮಹತ್ತ್ವದ್ದಾಗಿದೆ. 1875 ರಿಂದ 1930 ರವರೆಗಿನ ಕಾಲವನ್ನು ಕನ್ನಡ ಕಾದಂಬರಿಯ ಉದಯದ ಕಾಲವೆಂದು ಗುರುತಿಸಲಾಗಿದೆ. ಈ ಘಟನೆಯ ಹಿಂದಿನ ಮುಖ್ಯ ಪ್ರೇರಣೆ ಇಂಗ್ಲಿಷ್ ಶಿಕ್ಷಣದಿಂದ ನೇರವಾಗಿ, ಬಂಗಾಲಿ ಹಾಗೂ ಮರಾಠಿಗಳಂಥ ಭಾರತೀಯ ಭಾಷೆಗಳಿಂದ ಸುತ್ತಾಗಿ ಹರಿದು ಬಂದ ಪಾಶ್ಚಾತ್ಯ ಪ್ರಭಾವವೆಂಬುದು ಸಾಹಿತ್ಯ ಚರಿತ್ರೆಯಲ್ಲಿ ಅನೇಕ ಸಲ ದಾಖಲಾದ ಮಾತು. ಆದರೆ ಈ ಪ್ರಭಾವದ ಸ್ವರೂಪ ಮಾತ್ರ ಇನ್ನೂ ನಮಗೆ ಸ್ಪಷ್ಟವಾಗಿಲ್ಲ. ಯಾಕೆಂದರೆ, ಇದು ಸಾಹಿತ್ಯಕಕ್ಷೆಗೆ ಸೀಮಿತವಾದ ಪ್ರಶ್ನೆಯಾಗಿರದೆ ರಾಜಕೀಯ ಹಾಗೂ ಸಾಂಸ್ಕೃತಿಕ ಮುಖಾಮುಖಿಯ ಸಮಸ್ಯೆಯೂ ಆಗಿದೆ.

ಕಾದಂಬರಿ ಅತ್ಯಂತ ಸ್ವತಂತ್ರವಾದ, ಸ್ವಚ್ಛಂದವಾದ ನಿರ್ಮಾಣದಿಂದಾದ ಸಾಹಿತ್ಯ ಪ್ರಕಾರ ಕಾದಂಬರಿಯನ್ನು ಕರತಲರಂಗಭೂಮಿ ಎಂದು ಔಚಿತ್ಯ ಪೂರ್ಣವಾಗಿ ಕರೆಯಲಾಗಿದೆ. ಕಾದಂಬರಿ ಎಂದರೆ ಘಟನೆಗಳು ಮತ್ತು ಕ್ರಿಯೆಗಳೊಡನೆ ಅನುಭವಿಸಿದ ಮತ್ತು ಮಾಡಿದ ಸಂಗತಿಗಳು. ಇವು ಜನ ಜೀವನದಲ್ಲಿ ಉಂಟಾಗಿ ಕಾದಂಬರಿಯ ಪಾತ್ರಗಳಾಗುತ್ತವೆ. ಇನ್ನು ಕಾದಂಬರಿಯಲ್ಲಿ ಪಾತ್ರಗಳ ಸಂಭಾಷನೆ, ಶೈಲಿ ಜೀವನದ ಬಗೆಗಿನ ಒಂದು ನಿಶ್ಚಿತ ದೃಷ್ಟಿ ಬದುಕಿನ ಕೆಲವು ಸಮಸ್ಯೆಗಳು ಅವಶ್ಯಕವಾಗಿ ನಿರೂಪಿಸಲ್ಪಟ್ಟಿರುತ್ತವೆ. ಕಾದಂಬರಿ ಪ್ರಮುಖವಾಗಿ ಶ್ರವ್ಯ ಮಾಧ್ಯಮವಾಗಿರುವುದರಿಂದ

ನಾಟಕಕ್ಕೆ ಬೇಕಿರುವ ರಂಗ ಪರಿಕರ ಪ್ರೇಕ್ಷಕನ, ಅಭಿನಯದ ಅಗತ್ಯ ಇದಕ್ಕಿರುವುದಿಲ್ಲ. ನಿರಂತರ ಓಘ, ನವಿರಾದ ನಿರೂಪಣೆ ವಸ್ತುವನ್ನು ಸಂಬದ್ಧವಾಗಿ, ಪರಿಣಾಮಕಾರಿಯಾಗಿ ನಿರೂಪಿಸುವ ಮನಸ್ಥಿತಿ ಕಾದಂಬರಿಕಾರನಿಗಿದ್ದರೆ, ಅದು ನಿಜವಾದ ಕಾದಂಬರಿಯಾಗುತ್ತದೆ. ವಿಶ್ವ ಸಾಹಿತ್ಯದಲ್ಲಿ ಕಾದಂಬರಿಗೆ ಅದರದೇ ಆದ ವಿಶಿಷ್ಟ ಸ್ಥಾನವಿದ್ದು, ಜನಪ್ರಿಯ ಓದಿನ ಮಾಧ್ಯಮವಾಗಿದೆ.

ಕಾದಂಬರಿಯ ಸ್ವರೂಪದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಲ್ಲಿ ಲೇಖಕರು ತಮ್ಮದೇ ಆದ ಮಾರ್ಗಗಳನ್ನು ಹುಡುಕಿಕೊಂಡರು. ಕೆಲವರು ಕಾಲ್ಪನಿಕತೆಯನ್ನೇ ಹೆಚ್ಚಾಗಿ ಅವಲಂಬಿಸಿದರೆ ಇನ್ನು ಕೆಲವರು ವಾಸ್ತವ – ಕಾಲ್ಪನಿಕ ಅಂಶಗಳ ಸಮನ್ವಯ ಸಾಧಿಸಲು ಯತ್ನಿಸಿದರು. ಹೀಗಿದ್ದರೂ, ಶ್ರೇಷ್ಠ ದರ್ಜೆಯ ಸೃಜನ, ಶೀಲತೆಯನ್ನು ಇವರಾರೂ ಮರೆಯಲಿಲ್ಲ. ಇದು ಬಹುಶಃ ಈ ಸಂಧಿ ಕಾಲದಲ್ಲಿ ಸಾಧ್ಯವೂ ಇರಲಿಲ್ಲ. ಸೃಜನ ಶೀಲ ಲೇಖಕ ಅಂದು ಒಳಗಾಗಿದ್ದ ಸಂದಿಗ್ಧವನ್ನು ಮಾಸ್ತಿಯವರು ಮಾರ್ಮಿಕವಾಗಿ ವರ್ಣಿಸಿದ್ದಾರೆ. "ಸ್ವತಂತ್ರ ನಿರ್ಮಾಣದ ಪ್ರೇರಣೆ ಮರಳಿ ಮೂಡಿದ್ದು ನಮಗೆ ಆಂಗ್ಲ ಸಾಹಿತ್ಯದ ಪರಿಚಯ ದೊರೆತಾಗಲೇ, ಆದರೆ ಈ ಶಕ್ತಿ ಮೂಡುವ ಹೊತ್ತಿಗೆ ಸರಿಯಾಗಿ ನಮ್ಮಲ್ಲಿ ನಾವು ಒಂದು ಅಧೀನ ಜನಾಂಗವಾದ ಕಾರಣ ಎಲ್ಲದರಲ್ಲಿಯೂ ಅಧೀನರಾಗಿ ನಡೆದುಕೊಳ್ಳುವ ಮನೋಭಾವ ಬೆಳೆದು ಬಿಟ್ಟಿತು. ದೇಶದಲ್ಲಿ ಸ್ವಾತಂತ್ರ್ಯದ ಅಭಿಲಾಷೆ ರೂಪುಗೊಂಡದ್ದೇ ನವೀನ ಸ್ವತಂತ್ರ್ಯ ಸಾಹಿತ್ಯದ ನಿರ್ಮಾಣವೂ ಮೊದಲಾಯಿತು"(1).

**ವಾಸ್ತವ ಮಾರ್ಗದ ಪ್ರಥಮ ಕಾದಂಬರಿ :**

**ಇಂದಿರಾಬಾಯಿ :**

ಗುಲ್ವಾಡಿ ವೆಂಕಟರಾವ್ 1844 ರಲ್ಲಿ ಜನನ. ಬಿ.ಎ. ಪದವೀಧರರಾದ ಇವರು ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. 1898 ರಲ್ಲಿ 'ಇಂದಿರಾಬಾಯಿ' ಅಥವಾ 'ಸದ್ಧರ್ಮ ವಿಜಯ' ಪ್ರಕಟವಾಯಿತು. 1907ರಲ್ಲಿ ಭಾಗೀರಥಿ, ಸೀಮಂತಿನಿ ಎಂಬ ಕಾದಂಬರಿಗಳನ್ನು ಪ್ರಕಟಿಸಿದರು. ಹೊಸ ಶಿಕ್ಷಣ ಪದ್ಧತಿ ಮತ್ತು ಸ್ತ್ರೀಯರ ಏಳಿಗೆಗೆ ಸತತ ಶ್ರಮಿಸಿದರು. ಇವರ ಇಂದಿರಾಬಾಯಿ ಹಳತು ಮತ್ತು ಹೊಸ ಬದುಕಿನ ಸಂಘರ್ಷವನ್ನು ಚಿತ್ರಿಸುತ್ತದೆ. ಬಾಲ ವಿಧವೆಯಾದ ಇಂದಿರೆಯಕತೆ, ಕಡೆಯಲ್ಲಿ ಭಾಸ್ಕರ ಎಂಬುವವನನ್ನು ಮರುಮದುವೆ ಆಗುತ್ತಾಳೆ, ಕನ್ನಡದ ವಾಸ್ತವವಾದಿ ಕಾದಂಬರಿಗೆ ಇದೊಂದು ಉತ್ತಮ ಉದಾಹರಣೆಯಾಗಿದೆ.

ಇಂದಿರಾಬಾಯಿಗೆ 'ಸದ್ಧರ್ಮ ವಿಜಯ' ಎಂಬ ಇನ್ನೊಂದು ಹೆಸರು ಕೊಡುವಲ್ಲಿ ಗುಳವಾಡಿಯವರಿಗೆ ನೈತಿಕ ಉದ್ದೇಶವೊಂದಿದ್ದಿತೆನ್ನುವುದು ಸ್ಪಷ್ಟವಿದೆ. "ಸತ್ಯತೆ, ಹೃದಯ ನಿರ್ಮಲತೆ

ಇವೆರಡು ಸಾಧನಗಳೇ ನಮಗೆ ಇಹ ಪರದಲ್ಲಿಯೂ ಸಾರ್ಥಕಗಳಾಗಿವೆ. ಇವುಗಳನ್ನು ಬಿಟ್ಟು, ಸರ್ವ ಪ್ರಯತ್ನಗಳ ನಿರರ್ಥಕವೇ. ಇದನ್ನು ಸಾದೃಶ್ಯಗೊಳಿಸುವುದೇ ಈ ಪುಸ್ತಕದ ಉದ್ದೇಶವು"(2) ಎಂದು ಹೇಳಿ ಗ್ರಂಥ ಕರ್ತರೆ ತಮ್ಮ ನೈತಿಕ ನಿಲುವನ್ನು ಸೂಚಿಸಿದ್ದಾರೆ.

ಇಂದಿರೆಗೆ ಎಂಟು ವರ್ಷದಲ್ಲಿ ವಿಠ್ಠಲರಾಯನೊಡನೆ ವಿವಾಹವಾಗುತ್ತದೆ. ಲಂಪಟನಾದ ವಿಠ್ಠಲರಾಯ ರೋಗಗಳಿಗೆ ತುತ್ತಾಗಿ ಸೂಳೆಯೊಬ್ಬಳ ಮನೆಯಲ್ಲಿ ಸಾವನ್ನಪ್ಪುತ್ತಾನೆ. "ಇಂದಿರೆ-ಭಾಸ್ಕರ ಅವರ ಕಲ್ಯಾಣವೂ ಕಾದಂಬರಿಯಲ್ಲಿ ಸಂಭಾವ್ಯತೆಯ ನಿಯಮಗಳನ್ನು ಮುರಿಯುವುದಿಲ್ಲ. ಭಾಸ್ಕರನು ಇಂದಿರೆಯನ್ನು ಮದುವೆಯಾಗುವುದರಲ್ಲಿ ಕಾದಂಬರಿ ಕೊನೆಗೊಳ್ಳುತ್ತದೆ"(3).

ಮೊದಲನಿಂದಲೂ ಇಂದಿರೆಯ ಪಾತ್ರದಲ್ಲಿ ಕಾದಂಬರಿಕಾರರು ವೈಶಿಷ್ಟ್ಯವನ್ನು ಕಲ್ಪಿಸಿದ್ದಾರೆ. ತನ್ನ ಮಿತಿಗಳೊಳಗೆಯೆ ಅವಳು ಚಿಕ್ಕವಳಿದ್ದಾಗಲೇ ತನ್ನ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ತಾಯಿಯ ಅಸಹೆಯನ್ನೂ ಲೆಕ್ಕಿಸದೆ ಗೆಳತಿ ಶಾರದೆಯಿಂದ ಪುಸ್ತಕಗಳನ್ನು ತಂದು ಓದುತ್ತಾಳೆ. ಇದರಿಂದಾಗಿ ತಕ್ಕಮಟ್ಟಿಗೆ ಆಧುನಿಕತೆ ಅವಳಿಗೆ ಸಾಧ್ಯವಾಗುತ್ತದೆ. ಇದೂ ಅಲ್ಲದೆ ಧೈರ್ಯ, ಸ್ಥೈರ್ಯಗಳು ಸ್ವಭಾವದಲ್ಲಿಯೇ ಇದೆ. ವಿಠ್ಠಲರಾಯ ತೀರಿಕೊಂಡ ಘಟನೆಗೆ ಇಂದಿರೆಯು ಪ್ರತಿಕ್ರಿಯಿಸುವುದನ್ನು ಉದಾಹರಣೆಗೆ ನೋಡಬಹುದು. "ಇಂದಿರೆಯ ಹಣೆಯ ಮೇಲಿನ ಕುಂಕುಮದ ಬೊಟ್ಟನ್ನು ಅಂಬಾಬಾಯಿ ಉಪಾಯದಿಂದ ಉಜ್ಜಿ ತೆಗೆದಾಗ 'ಇಂದಿರೆ ಆ ಚಮತ್ಕಾರವನ್ನು ನೋಡಿ ತಿಳಿದು ಏಕವ್ವಾ, ನಾನೇ ಉಜ್ಜಿ ತೆಗೆಯುತ್ತಿದ್ದೆನಷ್ಟೇ ನನಗಿನ್ನೇಕೆ ಬೊಟ್ಟು? ಎಂದು ಶಾಂತವಾಗಿಯೇ ಉತ್ತರಿಸುತ್ತಾಳೆ"(4). ಸಂತ ಮಂಡಳಿಯ ಅಧ್ಯಕ್ಷ ರಂಗಪ್ಪನ ಕೈಯಿಂದ ಪಾರಾಗುವ ಘಟನೆಯಂತೂ ಅವಳ ಸಮಯ ಪ್ರಜ್ಞೆ, ಧೈರ್ಯಗಳನ್ನು ಧಾರಾಳವಾಗಿಯೇ ನಿದರ್ಶಿಸುತ್ತದೆ. ಅಮೃತರಾಯನ ಪ್ರೋತ್ಸಾಹದಿಂದ ಸಾತಾರೆಯಂಥ ದೂರದ ಊರಿಗೆ ಹೋಗಿ ವಿದ್ಯೆಗಳಿಸುವುದೂ ಸಾಹಸದ ಕೃತಿಯೆ, ಭಾಸ್ಕರನನ್ನು ಕೂಡ ಅವಳು ಯುಕ್ತಿಯಿಂದಲೇ ಗೆಲ್ಲುತ್ತಾಳೆ.

ಇಂದಿರಾಬಾಯಿ ಸಂಪೂರ್ಣವಾಗಿ ವಾಸ್ತವಕ್ಕೆ ಕಟ್ಟು ಬಿದ್ದ ಕೃತಿಯಲ್ಲ, ಆದರೆ, ವಾಸ್ತವ ಮಾರ್ಗದ ಕನ್ನಡ ಕಾದಂಬರಿಯ ಮೂಲ ಪ್ರೇರಣೆಯನ್ನು ಇಂಥ ಕೃತಿಗಳಲ್ಲಿಯೇ ಹುಡುಕ ಬೇಕಾಗುತ್ತದೆ. ಇಂದಿರಾಬಾಯಿ ತನ್ನ ಸತ್ವವನ್ನು ಪಡೆದುಕೊಳ್ಳುವುದು ಆಧುನಿಕ ಸಮಾಜ ಪ್ರಜ್ಞೆಯ ಮೂಲಕ ಈ ಸಮಾಜ ಪ್ರಜ್ಞೆ ಪಾತ್ರ, ಘಟನೆ, ಭಾಷೆಗಳ ಮೂಲಕವೇ ಅಭಿವ್ಯಕ್ತಿ ಪಡೆಯುವುದು ಈ ಕಾದಂಬರಿಯ ಮಹತ್ವದ ಸಾಧನಯಾಗಿದೆ. ವಾಸ್ತವ ಮಾರ್ಗದ ಶ್ರೇಷ ಕಾದಂಬರಿಕಾರರಲ್ಲೊಬ್ಬರಾದ ಶಿವರಾಮ ಕಾರಂತರ ಇಂದಿರಾಬಾಯಿಯ ಬಗ್ಗೆ ಹೇಳುವ ಮಾತುಗಳು ಮೌಖಿಕವಾಗಿವೆ. ಕಳೆದ

ಶತಮಾನದ ಕೊನೆಯಲ್ಲಿ ಗುಳವಾಡಿ ವೆಂಕಟರಾಯರು ಬರೆದ ಇಂದಿರಾಬಾಯಿ ಎಂಬ ಕಾದಂಬರಿ ನನಗೆ ಬಹಳ ಮುಖ್ಯ ಎನಿಸುತ್ತದೆ. ಸಮಾಜದಲ್ಲಿ ಕ್ರಾಂತಿಯನ್ನು ಮೂಡಿಸಬೇಕು ಎಂಬ ಉದ್ದೇಶ ಅವರದ್ದಲ್ಲ ಸಾಮಾಜಿಕ ತಳಮಳವನ್ನು ಬಿಂಬಿಸಬೇಕು ಅನ್ನುವುದು ಅವರ ಮನೋಭಾವ. ಹೀಗಾಗಿ ಅವರ ಇಂದಿರಾಬಾಯಿ ಆಗಿನ ಕಾಲಕ್ಕೆ ಒಂದು ಪ್ರಬುದ್ದ ಕಾದಂಬರಿಯೆಂದೇ ಹೇಳಬೇಕಾಗುತ್ತದೆ.

1933 ರಲ್ಲಿ ಪ್ರಕಟವಾದ ಹ.ಪೀ.ಜೋಶಿಯವರ 'ಮಾವಿನ ತೋಪು' ಕಾದಂಬರಿಯ ವಸ್ತುವೂ ದಾಂಪತ್ಯ ವಿರಸವೇ ಆಗಿತ್ತು. 'ಪೂರ್ವರಂಗ'ದಲ್ಲಿ ಇದನ್ನು ಜೋಶಿಯವರೇ ಸ್ಪಷ್ಟವಾಗಿ ಸೂಚಿಸಿದ್ದಾರೆ. ರಾಧಾಬಾಯಿಯ ಅನಾರೋಗ್ಯದಿಂದಾಗಿ ಹದಗೆಟ್ಟ ಅವಳ ವೈವಾಹಿಕ ಜೀವನ ವಿಧವೆ ಪದ್ದಕ್ಕ, ಅಣ್ಣಾರಾಯ, ಭುಜಂಗರಾಯರೊಡನೆ ಇಟ್ಟುಕೊಂಡು ಬರುವ ಲೈಂಗಿಕ ಸಂಬಂಧಗಳು, ಬನೂನ ಅತೃಪ್ತ ಕಾಮ ಜೀವನ ಹಾಗೂ ದುರಂತ, ಗುರುಭಟ್ಟ ಮತ್ತು ಮಂಡಲಿಯ ವಾಚಿಕ ಲೈಂಗಿಕತೆಯ ವೈಕೃತ್ಯ, ಹೀಗೆ ಕಾದಂಬರಿಯಲ್ಲಿ ಲೈಂಗಿಕತೆ ಹಲವಾರು ಕೂಪಗಳಲ್ಲಿ ಕಾಣಿಸಿ ಕೊಳ್ಳುತ್ತದೆ. ಇವುಗಳನ್ನು ಅನುಭವಿಸಿದ ಅಕ್ಕವ್ವ ತನ್ನ ಮುಗ್ಧತೆಯನ್ನು ಕಳೆದುಕೊಂಡು ವಾಸ್ತವವನ್ನು ಬಿಡುಗಣ್ಣಿನಿಂದ ಒಪ್ಪಿಕೊಳ್ಳುವಂತೆ ಮಾಡುವುದೇ ಕಾದಂಬರಿಯ ನೈತಿಕ ಕ್ರಿಯೆಯಾಗಿದೆ. ಜೋಶಿಯವರ ದೃಷ್ಟಿ ವ್ಯಂಗ್ಯದಿಂದ ಕೂಡಿದ್ದು ಅವರ ಯಾವ ನೈತಿಕ ನಿರ್ಣಯಗಳನ್ನು ಕೊಡುವುದಿಲ್ಲ. ಜೀವನದ ರೀತಿಗಳನ್ನು ವಾಸ್ತವವಾಗಿ ನಮ್ಮದುರಿಗಿಡುತ್ತಾರೆ.

ಶಿವರಾಮ್ ಕಾರಂತರ 'ಮೂಕಜ್ಜಿಯ ಕನಸುಗಳು', 1978ರಲ್ಲಿ ಮೂಕಜ್ಜಿಯ ಕನಸುಗಳು ಕಾದಂಬರಿಗೆ 'ಜ್ಞಾನಪೀಠ' ಪ್ರಶಸ್ತಿ ದೊರೆತಿದೆ. ಸಾಂಪ್ರದಾಯಿಕ ನಂಬುಗೆಗಳನ್ನು ತರ್ಕದ ನೆಲೆಯಲ್ಲಿ ಪ್ರಶ್ನಿಸುತ್ತಲೇ ಮೂಕಜ್ಜಿಯ ಕನಸುಗಳು ಮಾನವ ಸಂಸ್ಕೃತಿಯ ಸಂದರ್ಭದಲ್ಲಿ ಸೃಷ್ಟಿ ಶಕ್ತಿಯ ಆದಿಮತ್ವವನ್ನು ಪ್ರಸ್ಥಾಪಿಸಲು ಯತ್ನಿಸುತ್ತದೆ.

ಕಾದಂಬರಿಯ ಕೇಂದ್ರ ಸ್ಥಾನದಲ್ಲಿ ಮೂಕಜ್ಜಿ ಇದ್ದಾಳೆ. ಆದರೆ ಅವಳು ಅದರ ನಾಯಕಿಯಲ್ಲ ಕಾರಂತರೇ ಹೇಳುವ ಹಾಗೆ, "ಈ ಕಾದಂಬರಿಗೆ ಕಥಾ ನಾಯಕನಿಲ್ಲ, ನಾಯಕಿಯಿಲ್ಲ, ಸಾಂಪ್ರದಾಯಿಕತೆಯಿಂದ ಹದಗಟ್ಟಿದ್ದ ಮನಸ್ಸುಗಳನ್ನು ತುಸು ತುಸುವಾಗಿ ಕಾಯಿಸಿ, ಕರಗಿಸುವ ಕೆಲಸ ಅವಳದ್ದು"(5). ಮೂಕಜ್ಜಿಯ ಪಾತ್ರದ ವಾಸ್ತವ ಅಂಶಗಳನ್ನು ಒಪ್ಪಿಕೊಂಡ ಹಾಗೆ ಅವಳ ಅತೀಂದ್ರಿಯ ಶಕ್ತಿಗಳನ್ನು ಒಪ್ಪಿಕೊಳ್ಳುವುದು ಓದುಗರಿಗೆ ಸಾಧ್ಯವಾಗದೇ ಹೋಗಬಹುದು ಎನ್ನುವುದರ ಅರಿವು ಕಾರಂತರಿಗಿದೆ. "ಅಂಥ ಅಜ್ಜಿಯೊಬ್ಬಳು ಇದ್ದಾಳೆಯೊ ಎಂಬ ಸಂಶಯ ಬಂದರೆ, ನಮ್ಮ ಸಂಸ್ಕೃತಿಯ ನಂಬಿಕೆಗಳ ನೇಕವನ್ನು ಕುರಿತಾದ ಸಂಶಯ ಪಿಶಾಚಿಯ ರೂಪವೇ ಅವಳೆಂದು ತಿಳಿದರಾಯಿತು"(6)

ಎಂದು ಹೇಳಿ, ಈ ಸಮಸ್ಯೆಗೆ ಅವರು ಪರಿಹಾರ ಸೂಚಿಸುತ್ತಾರೆ. ಆದರೆ ಈ ಕಾದಂಬರಿಯಲ್ಲಿ ಮೂಕಜ್ಜಿಯ ಕಾರ್ಯ ಸಾಂಪ್ರದಾಯಿಕ ನಂಬುಗೆಗಳನ್ನು ಪ್ರಶ್ನಿಸುವುದಕ್ಕಷ್ಟೇ ಸೀಮಿತವಾಗಿಲ್ಲ. ಅವಳಿಗೆ ತನ್ನದೇ ಆದ ದರ್ಶನವೂ ಇದೆ.

ತನ್ನ ಅತೀಂದ್ರಿಯ ಶಕ್ತಿಗಳಿಂದಾಗಿ ಮೂಕಜ್ಜಿ ಪ್ರತ್ಯೇಕತೆಯನ್ನು ಪಡೆಯುತ್ತಾಳೆ. ಆದರೆ ಅವಳಿಗೆ ತನ್ನ ಕುಟುಂಬದಲ್ಲಿ ಸಾಮಾಜಿಕ ಪರಿಸರದಲ್ಲಿ ಆಳವಾದ ಬೇರುಗಳಿವೆ. ಹಾಗೂ ಅವಳ ವಿಚಾರಗಳೆಲ್ಲ ಸಾಂಪ್ರದಾಯಿಕ ವಿನ್ಯಾಸಗಳನ್ನೆ ಅನುಸರಿಸುತ್ತವೆ. ತನ್ನ ಹತ್ತನೆಯ ವಯಸ್ಸಿನಲ್ಲಿ ಮದುವೆಯಾಗಿ, ಮದುವೆಯಾದ 6 ತಿಂಗಳಿನಲ್ಲಿಯೇ ಗಂಡನನ್ನು ಕಳೆದುಕೊಂಡ ಮೂಕಾಂಬಿಕೆ ತನ್ನ ತಂದೆಯ ಮನೆಯಲ್ಲಿಯೇ ಮತ್ತೆ ಆಶ್ರಯ ಪಡೆಯುತ್ತಾಳೆ. ಅವಳ ತಂದೆ ಮತ್ತು ಚಿಕ್ಕಪ್ಪ ತೀರಿದ ನಂತರವೂ ಚಿಕ್ಕಪ್ಪನ ಮೊಮ್ಮಗ ಸುಬ್ರಾಯ ಅವಳೊಡನೆ ತುಂಬ ಗೌರವ ವಿಶ್ವಾಸಗಳೊಂದಿಗೆ ನಡೆದುಕೊಳ್ಳುತ್ತಾನೆ.

ಮೂಕಜ್ಜಿಯ ಸ್ವತಂತ್ರ ವಿಚಾರ ಹಾಗೂ ಸ್ಪಷ್ಟ ಮಾತುಗಳಿಂದಾಗಿ ಅವಳ ಸಮೀಪ ಬರಲು ಜನ ಅಂಜುತ್ತಾರೆ. ಆದರೆ ಅವಳಲ್ಲಿ ನೊಂದವರ ಬಗೆ ಪ್ರೀತಿ, ಸಹಾನುಭೂತಿಗಳಿಗೆ ಕೊರತೆಯಿಲ್ಲ. ಸಮೀಪದ ಸಂಬಂಧಿ ತಿಪ್ಪಜ್ಜಿಯ ಕೊನೆಯ ದಿನಗಳಲ್ಲಿ ಅವಳನ್ನು ನೋಡುವುದಕ್ಕೆಂದು ತನ್ನ ಇಳಿ ವಯಸ್ಸು ಹಾಗೂ ದೂರಗಳನ್ನು ಕಡೆಗಣಿಸಿ ಧಾವಿಸುತ್ತಾಳೆ. ಗಾಣದ ರಾಮಣ್ಣ ಮತ್ತು ಅವನನ್ನು ಬಿಟ್ಟು ಹೋದ ಹೆಂಡತಿ, ನಾಗಿಯರನ್ನು ಮತ್ತೆ ಕೊಡಿಸುವುದರಲ್ಲಿಯೂ ಅವಳ ಮಾನವೀಯತೆಯ ನಿದೇರ್ಶನವನ್ನು ಕಾಣಬಹುದು.

ಆದರೆ ಮೂಕಜ್ಜಿಗೆ ಅಸಾಮಾನತೆ ಬರುವುದು ಅವಳ ಅತೀಂದ್ರಿಯ ಶಕ್ತಿಗಳಿಂದಾಗಿಯೇ ಎನ್ನುವುದು ಸ್ಪಷ್ಟವಿದೆ. ಸಾಂಪ್ರ ದಾಯಿಕ ಕುಟುಂಬದಲ್ಲಿಯೇ ಬೆಳೆದು ಬಂದರೂ ಸಾಂಪ್ರದಾಯಿಕ ನಂಬುಗೆಗಳನ್ನು ಅವಳು ಸಂಶಯದಿಂದಲೇ ನೋಡುತ್ತಾಳೆ. ದೈವದ ಅನೇಕತ್ವದಲ್ಲಿ ಅವಳಿಗೆ ವಿಶ್ವಾಸವಿಲ್ಲ. ದೇವನಿದ್ದಾನೋ ಇಲ್ಲವೋ ಎನ್ನುವ ಪ್ರಶ್ನೆ ಕೂಡ ಅವಳ ಮಹತ್ವದ್ದಾಗಿ ಕಾಣುವುದಿಲ್ಲ. ಅವತಾರಗಳ ಕಲ್ಪನೆಯನ್ನು ಅವಳು ತಿರಸ್ಕರಿಸುತ್ತಾಳೆ. ಅವಳು ಒಪ್ಪಿಕೊಳ್ಳುವ ಅವತಾರಗಳೆಂದರೆ ಸೃಷ್ಟಿಯನ್ನು ತುಂಬಿಕೊಂಡಿರುವ ಅಸಂಖ್ಯಾತ ಗಂಡು, ಹೆಣ್ಣುಗಳು ಹಾಗೂ ಉಳಿದ ಜೀವರಾಶಿ.

ಕರ್ಮದ ಸಿದ್ಧಾಂತ ಮೂಕಜ್ಜಿಗೆ ತರ್ಕಸಮ್ಮತವಾಗಿ ಕಾಣುವುದಿಲ್ಲ. ನಿಜವಾದ ವೈರಾಗ್ಯದ ಬಗ್ಗೆ ಅವಳಲ್ಲಿ ಗೌರವವಿದೆ. ಆದರೆ ಸಾತ್ವಿಕ ಜೀವನ ನಡೆಸುವುದಕ್ಕೆ ಸಂಸಾರ ಅಡ್ಡ ಬರುತ್ತದೆಯೆನ್ನುವ

ವಾದವನ್ನು ಅವಳು ಒಪ್ಪಿಕೊಳ್ಳುವುದಿಲ್ಲ. ಜಾತಿ ಪದ್ಧತಿಯ ಬಗೆಗಿನ ಅವಳ ವಿಚಾರಗಳೂ ಕ್ರಾಂತಿಕಾರಕವಾದವುಗಳು. ಗಂಡು ಹೆಣ್ಣು ಇವೆರಡೆ ನಿಜವಾದ ಜಾತಿ, ಉಳಿದುದೆಲ್ಲ ಮನುಷ್ಯನ ಕಲ್ಪನೆಗಳು ಎನ್ನುವುದು ಅವಳ ದೃಢವಾದ ನಂಬುಗೆ.

"ಮೂಕಜ್ಜಿಯ ಸಾಂಸ್ಕೃತಿಕ ಪ್ರತಿಕ್ರಿಯೆಗಳು ನಮಗೆ ಮಹತ್ವದೆನಿಸುವುದಕ್ಕೆ ಮುಖ್ಯ ಕಾರಣ ಅವು ಪಾಶ್ಚಾತ್ಯ ಶಿಕ್ಷಣದ ಪ್ರಭಾವದಲ್ಲಿ ಹುಟ್ಟಿಕೊಂಡಿರದೆ ನಮ್ಮ ಸಂಸ್ಕೃತಿಯ ಒಳಗಿನಿಂದಲೇ ಸಹಜ ಪ್ರತಿಕ್ರಿಯೆಗಳೆಂದು ಬಂದಿರುವುದು. ಈ ದೃಷ್ಟಿಯಿಂದ ಮೂಕಜ್ಜಿಯ ಆಧುನಿಕತೆ ಅವಳ ಕತೆ ಹೇಳುವ ಸುಬ್ರಾಯನ ಆಧುನಿಕತೆಯಿಂದ ಭಿನ್ನವಾದುದು"(7).

ಮೂಕಜ್ಜಿಯ ಮೂಲಕ ಕಾರಂತರು ಮನುಷ್ಯನ ಆಚಾರ, ವಿಚಾರಗಳನ್ನು ವಸ್ತುನಿಷ್ಠವಾಗಿ ನೋಡುವ ಅವಕಾಶವನ್ನೊದಗಿಸುವ ಪರಿ ಪ್ರೇಕ್ಷ್ಯವೊಂದನ್ನು ಸೃಷ್ಟಿಸಿದ್ದಾರೆ.

ಎಂ.ಕೆ.ಇಂದಿರಾ ಅವರ ಫಣಿಯಮ್ಮ ಕಾದಂಬರಿ ಹಲವಾರು ದೃಷ್ಟಿಗಳಿಂದ ಮಹತ್ವದ ಕೃತಿಯಾಗಿದೆ. ಅದರ ಹೆಸರೇ ಸೂಚಿಸುವಂತೆ ಅದು ಫಣಿಯಮ್ಮನೆಂಬ ಒಬ್ಬ ಅನಾಮಧೇಯ ವಿಧವೆಯ ಕತೆ. ಫಣಿಯಮ್ಮನ ಜೀವನ ಚರಿತ್ರೆ. ಫಣಿಯಮ್ಮ 1840 ರಲ್ಲಿ ಹುಟ್ಟಿ 1952 ರಲ್ಲಿ ಮರಣ ಹೊಂದಿದ, ಶತಮಾನಕ್ಕಿಂತಲೂ ಹೆಚ್ಚು ಕಾಲ ಜೀವಿಸಿದ, ಒಬ್ಬ ಚಾರಿತ್ರಿಕ ವ್ಯಕ್ತಿ ಸುಮಾರು ನೂರು ಪುಟಗಳ ಗಾತ್ರದಲ್ಲಿ ಆ ವ್ಯಕ್ತಿಯ ಅರ್ಥಪೂರ್ಣ ಅನುಭವಗಳನ್ನು ಮಾತ್ರ ರೇಖಿಸಿ ಸಮಗ್ರತೆಯ ಕಲ್ಪನೆಯನ್ನು ಸೃಷ್ಟಿಸುವುದು ಸುಲಭ ಸಾಧ್ಯವಲ್ಲ. ಆದರೆ, ಇದನ್ನು ಇಂದಿರಾರವರು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಇಂದಿರಾ – ಫಣಿಯಮ್ಮ ಸಂಬಂಧ ಮಾಸ್ತಿ – ಸುಬ್ಬಣ್ಣರ ಸಂಬಂಧವನ್ನು ನೆನಪಿಗೆ ತಂದು ಕೊಡುವಂಥದು. ಸುಬ್ಬಣ್ಣನಂತೆ ಫಣಿಯಮ್ಮ ಕೂಡ ನಿಜವಾದ ವ್ಯಕ್ತಿ. ಮಾಸ್ತಿಯವರಂತೆ ಎಂ.ಕೆ.ಇಂದಿರಾರವರು ಕೂಡ ತನ್ನ ಕಥಾನಾಯಕಿಯನ್ನು ಅವಳ ಕೊನೆಯ ದಿನಗಳಲ್ಲಿ ನೋಡಿದವರು. ಹೀಗಾಗಿ ಫಣಿಯಮ್ಮ ಒಬ್ಬ ಅಸಾಮಾನ್ಯ ಹೆಣ್ಣೆಂದೇ ಕಾದಂಬರಿಯಲ್ಲಿ ಮೂಡಿ ಬಂದಿದ್ದರೂ ಅವಳಿಗೆ ವಾಸ್ತವದಲ್ಲಿ ಗಟ್ಟಿಯಾದ ನೆಲೆಯಿದೆ ಎನ್ನುವುದರ ಅರಿವನ್ನಿಟ್ಟು ಕೊಳ್ಳುವುದು ಒಳ್ಳೆಯದು. ಇಲ್ಲವಾದರೆ ಆದರ್ಶೀಕರಣದ ಆಪಾದನೆಗೆ ಅಸ್ಪದವುಂಟಾಗಬಹುದು.

"ಫಣಿಯಮ್ಮನ ಜೀವನದ ಮೂರು ಘಟ್ಟಗಳನ್ನು ಕುಮಾರಿ, ವಿವಾಹಿತೆ, ವಿಧವೆ – ಎಂ.ಕೆ.ಇಂದಿರಾ ರವರು ಗುರುತಿಸುತ್ತಾರೆ. ಇವುಗಳಲ್ಲಿ ಮೊದಲಿನವೆರಡು ಬೇಗ ಮುಗಿದು ಹೋಗುವುದರಿಂದ ಮೂರನೆಯ ಘಟ್ಟವೇ ಕಾದಂಬರಿಯ ಅವಕಾಶವನ್ನು ತುಂಬಿ ಕೊಳ್ಳುತ್ತದೆ"(8).

ಫಣಿಯಮ್ಮ ಹುಟ್ಟಿದ್ದು ತೀರ್ಥಹಳ್ಳಿಯ ಸಮೀಪ ಮಲೆನಾಡಿನ ಹಳ್ಳಿ ಹೆಬ್ಬಲಿಗೆಯಲ್ಲಿ, ಅಂಚೆ ಮನೆಯೆಂದೇ ಹೆಸರಾದ ಮನೆತನದ ತಮ್ಮಯ್ಯ - ಸಣ್ಣಮ್ಮರ ಮಗಳಾಗಿ, ಫಣಿಯಮ್ಮ 10 ವರ್ಷದವಳಾದಾಗ ಮೇಳಿಗೆಯ ನೀಲಕಂಠಭಟ್ಟರ 15 ವರ್ಷದ ಮಗ ನಂಜುಂಡನೊಡನೆ ಅವಳ ಮದುವೆಯಾಗುತ್ತದೆ. ಆದರೆ ಮದುವೆಯಾದ ಮೊದಲನೆಯ ವರ್ಷದಲ್ಲಿ ಹಾವು ಕಚ್ಚಿ ನಂಜುಂಡ ಅಸುನಿಗುವುದರಿಂದ ಕೌಮಾರ್ಯ, ವಿವಾಹ, ವೈಧವ್ಯಗಳೆಲ್ಲವೂ ಒಮ್ಮೆಲೆ ಫಣಿಯಮ್ಮನ ಪಾಲಿಗೆ ಬರುತ್ತದೆ. "ಸುಮಾರು ಶತಮಾನದಷ್ಟುಕಾಲ ಫಣಿಯಮ್ಮ ತನ್ನ ವಿಧವಾಜೀವನವನ್ನು ಹೇಗೆ ಎದುರಿಸಿದಳು ಎನ್ನುವುದೇ ಕಾದಂಬರಿಯ ಮುಖ್ಯ ವಸ್ತು" (9).

# "ಅನಂತ" ಮತ್ತು "ಕನಸಿನ ಬಳಿ" ಕಾದಂಬರಿಗಳ ಕಥಾವಸ್ತು, ಉದ್ದೇಶ ಮತ್ತು ವ್ಯಾಪ್ತಿಗಳ ಬಗ್ಗೆ ಒಂದು ಮುನ್ನೋಟ

**ಅನಂತ ಕಾದಂಬರಿಯ ಕಥಾವಸ್ತು ಉದ್ದೇಶ ಮತ್ತು ವ್ಯಾಪ್ತಿ :**

ಅನಂತ ಕಾದಂಬರಿಯು ಡಾ। ಮೊಗಸಾಲೆಯವರ ಎರಡನೆಯ ಕಾದಂಬರಿ, ಪ್ರಕಟವಾದದ್ದು, 1968ರಲ್ಲಿ, ಎರಡನೇ ಬಾರಿಗೆ ಬೆಂಗಳೂರಿನ ಭಾಗ್ಯಲಕ್ಷ್ಮಿ ಪ್ರಕಾಶನದವರು 1983ರಲ್ಲಿ ಪುನರ್ ಮುದ್ರಿಸಿದರು. ಅನಂತ ಕಾದಂಬರಿಯನ್ನು ಡಾ। ।ಮೊಗಸಾಲೆಯವರು ವಿದ್ಯಾರ್ಥಿಯಾಗಿದ್ದಾಗ, ಆಯುರ್ವೇದ ಡಿಪ್ಲೋಮಾ ಕೋರ್ಸಿನ ಕೊನೆಯ ವರ್ಷದವರಾಗಿದ್ದಾಗ ರಚಿಸಿದ ಕೃತಿಯಾಗಿದೆ. ಅಷ್ಟು ಎಲೆಯ ವಯಸ್ಸಿನಲ್ಲಿ ಬರೆದ ಕೃತಿಯಾದರೂ ಇದೊಂದು ಎಳೆಸು ಕೃತಿ ಎನ್ನಲಾಗದು. 'ತೀರ ಸರಳ ಕೃತಿ ಎನ್ನಬಹುದು ಕಾರಣ ಇಲ್ಲಿ ಇಟ್ಟುಕೊಂಡಿರುವ ಕಥಾ ಹಂದರವೇ ಸರಳವಾದದ್ದು'. 'ಅಕ್ಕನ ಮಗಳನ್ನು ಯಾಕೆ ಮದುವೆಯಾಗಬಾರದು'? ಎಂದು ಪ್ರಶ್ನಿಸುವುದೇ ಇಲ್ಲಿನ ಉದ್ದೇಶ. ಆದರಿಂದ ಇದೊಂದು 'ಏಕಾಂಶ ವಸ್ತುವಿನ ಕಾದಂಬರಿ'.

**ಅನಂತ ಕಾದಂಬರಿಯ ಕಥಾವಸ್ತು :**

ಕಾಸರಗೋಡು ತಾಲ್ಲೂಕಿನ ಆನೆಕಲ್ಲು ಹತ್ತಿರ ಗ್ರಾಮದ ಹವ್ಯಕ ಬ್ರಾಹ್ಮಣ ಜಮೀನುದಾರ ದಂಪತಿಗಳು, ಮಹಾಬಲಭಟ್ಟ ಮತ್ತು ಸರಸ್ವತಿ, ಇವರ ಮಗಳು ಪಾರ್ವತಿ, ಮಗ ಅನಂತ, ಪಾರ್ವತಿ ಪುತ್ತೂರಿನ ಸಮೀಪ ಗ್ರಾಮದ ಈಶ್ವರ ಭಟ್ಟರೊಂದಿಗೆ ವಿವಾಹವಾಗಿರುತ್ತದೆ. ಈಶ್ವರಭಟ್ಟ ಮತ್ತು ಪಾರ್ವತಿಗೆ ನಾಲ್ಕು ಮಕ್ಕಳು. ಭಾರತಿ, ಶಂಕರ, ವಸಂತಿ, ವಾಣಿ, ಅನಂತ ತನ್ನ ಬಾಲ್ಯದಲ್ಲಿ ಅಕ್ಕ ಪಾರ್ವತಿಯ ಮನೆಯಲ್ಲೇ ಇದ್ದು, ಶಾಲೆ ಓದಿದವನು, ಭಾರತಿಯೂ ಅವನೊಟ್ಟಿಗೇ ಕೆಲವು ಕಾಲ ಶಾಲೆಗೆ ಹೋದವಳು. ಹೀಗಾಗಿ ಎಳವೆಯ ಸಲುಗೆ ಸಂಬಂಧಗಳು ಹರೆಯದಲ್ಲಿ ಅನುರಾಗವಾಗಿ ಮಾರ್ಪಡುತ್ತದೆ. ಅನಂತ ತನ್ನ ಉನ್ನತ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಹೋಗಿ ಅಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿರುತ್ತಾನೆ. ಭಾರತೀಯ ಸಹಜ ನಡವಳಿಕೆ, ಮುಗ್ಧತೆ, ನೈಸರ್ಗಿಕ ಚೆಲುವುಗಳಿಂದ ಅನಂತ ಭಾರತಿಯನ್ನು ಪ್ರೀತಿಸುತ್ತಿರುತ್ತಾನೆ. ಮೈಸೂರಿನ ಕಡೆ ಅಕ್ಕನ ಮಗಳನ್ನು ಮಾವ ಮದುವೆಯಾಗುವ ಪದ್ದತಿ ಇದೆ. ಆದರೆ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕಾಸರಗೋಡಿನ ಕಡೆ ಅದರಲ್ಲೂ ಹವ್ಯಕ ಬ್ರಾಹ್ಮಣರಲ್ಲಿ ಇದು ಸಂಪ್ರದಾಯಕ್ಕೆ ವಿರುದ್ದವಾದದ್ದು. ಸೊಸೆ, ಮಗಳ ಸಮಾನ, "ಸೊಸೆಯನ್ನು ಮದುವೆ ಆಗುವುದು ಪಾಪದ ಕೆಲಸ. ಅಧರ್ಮ ಎಂಬ ಮೂಢನಂಬಿಕೆ, ಸಂಕುಚಿತ ಮನೋಭಾವ, ಅತಿಭಾವುಕತೆ, ಅತಿ ಧರ್ಮ ಶ್ರದ್ದೆಯನ್ನು ಬೆಳೆಸಿಕೊಂಡಿರುತ್ತಾರೆ"(10). ಆದರೆ

ಅನಂತನ ಪ್ರಕಾರ ಮಾವನ ಮಗಳನ್ನು ಮದುವೆಯಾಗುವಾಗ, ಅಕ್ಕನ ಮಗಳನ್ನು ಏಕೆ ಮದುವೆಯಾಗಬಾರದು. ಅನಂತ ಚಿಕ್ಕ ವಯಸ್ಸಿನಿಂದ ಕಥೆಯನ್ನು ಬರೆಯುತ್ತಿರುತ್ತಾನೆ. ಅವನು ಶಾಲಾ ದಿನಗಳಲ್ಲಿ ಬರೆದ ಕಥೆ ಪತ್ರಿಕೆಗಳಲ್ಲೂ ಪ್ರಕಟವಾಗಿರುತ್ತದೆ. ತಮ್ಮ ಸಂಪ್ರದಾಯಕ್ಕೆ ವಿರುದ್ದ ಎಂದು ತಿಳಿದಿದ್ದ ವಿಷಯವನ್ನೇ ಇಟ್ಟುಕೊಂಡು ಕಥೆ ಬರೆದಿರುತ್ತಾನೆ. ಆ ವಿಷಯವನ್ನು ಭಾರತಿಗೂ ತಿಳಿಸಿ ಅವಳ ಅಭಿಪ್ರಾಯ ಪಡೆಯಲು ಮತ್ತು ತನ್ನ ಬಗ್ಗೆ ಭಾರತಿಗೆ ಪ್ರೀತಿ ಇದೆಯ, ಅವಳಿಗೆ ತಮ್ಮ ಮದುವೆಯ ಬಗ್ಗೆ ಏನು ಅಭಿಪ್ರಾಯವಿದೆ ಅವಳು ಒಪ್ಪುತ್ತಾಳೆಯೆ ಎಂಬುದನ್ನು ತಿಳಿಯಲು ಅನಂತ ತಾನು ಬರೆದ ಕಥೆಯ ಬಗ್ಗೆ ತಿಳಿಸುತ್ತಾನೆ. ಆದರೆ ಭಾರತಿಯ ನಿಲುವು ಬೇರೆಯಾಗಿರುತ್ತದೆ.

ಭಾರತಿಗೂ ಅನಂತನ ಮೇಲೆ ಪ್ರೀತಿ ಇರುತ್ತದೆ. ಆದರೆ ತಮ್ಮ ಸಂಪ್ರದಾಯದಂತೆ ಮಾವನ ಜೊತೆ ಮದುವೆ ಅಸಾಧ್ಯ ಎನ್ನುವುದು ಸಹ ಭಾರತಿಗೆ ತಿಳಿದಿರುತ್ತದೆ. ಭಾರತಿಯು ಅನಂತ ತನ್ನ ಪ್ರೀತಿ ವ್ಯಕ್ತಪಡಿಸಿ ಅವಳ ಅಭಿಪ್ರಾಯ ಕೇಳಿದಾಗ ಭಾರತಿಯು ಆಗದ ಮಾತು ಮಾವ ನಮ್ಮ ಮದುವೆ, ಇದಕ್ಕೆ ತಂದೆ ತಾಯಿಯಾಗಲಿ, ಅಜ್ಜಿ ತಾತರಾಗಲಿ ನಮ್ಮ ಸಮುದಾಯವಾಗಲೀ ಒಪ್ಪುವುದಿಲ್ಲ ಎಲ್ಲರನ್ನು ಧಿಕ್ಕರಿಸಿ ಮದುವೆ ಅಸಾಧ್ಯವೆಂದು ತನ್ನ ಮನದ ನೋವನ್ನು ತಿಳಿಸಿರುತ್ತಾಳೆ. ಭಾರತಿಗೆ ಅವಳ ತಂದೆ, ಕೃಷ್ಣಭಟ್ಟರ ಮುಖಾಂತರ ಒಂದು ವರನನ್ನು ಗೊತ್ತು ಮಾಡಿರುತ್ತಾರೆ. ಕಡಬದ ನರಸಿಂಹ ಎಂಬ ಹುಡುಗನು ಭಾರತಿಯನ್ನು ಮದುವೆಗೆ ಒಪ್ಪಿರುತ್ತಾನೆ. ನರಸಿಂಹನಿಗೆ 35 ವರ್ಷ ಅವನಿಗೆ ಮದುವೆಯಾಗಿ ಹೆಂಡತಿ ಸತ್ತು ಹೋಗಿರುತ್ತಾಳೆ. ಆದರೂ ಈಶ್ವರಭಟ್ಟರು ಭಾರತಿಯನ್ನು ಕೊಡಲು ಒಪ್ಪಿರುತ್ತಾರೆ. ಇದು ಅನಂತನಿಗೂ ತಿಳಿಯುತ್ತದೆ. ಅವನು ತನ್ನ ಸ್ನೇಹಿತ ವೆಂಕಟರಮಣನಿಗೆ ತನ್ನ ಮತ್ತು ಭಾರತಿಯ ವಿಷಯವನ್ನು ತಿಳಿಸಿ ತನ್ನ ತಂದೆಯ ಜೊತೆ ಮಾತಾಡಿ ತನ್ನ ಮದುವೆ ಮಾಡಿಸಬೇಕು ಅವರನ್ನು ಒಪ್ಪಿಸಬೇಕು ಎಂದು, ಅವನ ಮೇಲೆ ತನ್ನ ಮತ್ತು ಭಾರತಿಯ ಪ್ರೀತಿ ಉಳಿಸಿ ಮದುವೆಯಾಗುವಂತೆ ಮಾಡು ಎಂದು ಎಲ್ಲ ವಿಷಯ ತಿಳಿಸುತ್ತಾನೆ. ಅದಕ್ಕೆ ಹಿಂಜರಿಯುತ್ತಲೇ ವೆಂಕಟರಮಣ ಒಪ್ಪಿರುತ್ತಾನೆ. ಭಾರತಿಗೆ ತನ್ನ ಮಾವ ಅನಂತನಿಗೆ ಮೋಸ ಮಾಡಲು ಆಗದೆ ಅವನನ್ನು ಮರೆಯಲು ಸಾಧ್ಯವಿಲ್ಲ. ಹಾಗೆ ತನ್ನ ತಂದೆ ತಾಯಿ ಸಂಪ್ರದಾಯವನ್ನು ಧಿಕ್ಕರಿಸಲು ಸಾಧ್ಯವಾಗದೆ ತಂದೆ ನೋಡಿದ ಹುಡುಗ ನರಸಿಂಹನನ್ನು ಮದುವೆಯಾಗಲು ಸಹ ಭಾರತಿಯ ಮನಸ್ಸು ಒಪ್ಪುವುದಿಲ್ಲ. ತನ್ನ ಮನಸ್ಸಿನ ತೋಳಲಾಟವನ್ನು, ಯಾರೊಂದಿಗೂ ಸಹ ಹೇಳಿಕೊಳ್ಳಲಾಗದೆ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇತ್ತ ಅನಂತ ತನ್ನ ಊರಲ್ಲಿ ಭಾರತಿ ಮತ್ತು ತನ್ನ ಮದುವೆ ಪ್ರಸ್ತಾಪ ಮಾಡಲು ತನ್ನ ತಂದೆಯ ಜೊತೆ ವೆಂಕಟರಮಣನನ್ನು ತನ್ನ ಮನೆಗೆ ಕರೆಸಿ ಕೊಂಡಿರುತ್ತಾನೆ. ವೆಂಕಟರಮಣ ಊಟ ಮಾಡುತ್ತ ವಿಷಯ ಪ್ರಸ್ತಾಪ ಮಾಡಬೇಕು ಎನ್ನುವಷ್ಟರಲ್ಲಿ ಕೃಷ್ಣಭಟ್ಟರು ಭಾರತಿಯ ಸಾವಿನ ವಿಷಯ ಹೊತ್ತು ಬಂದಿರುತ್ತಾರೆ. ವಿಷಯ ಎಲ್ಲರಿಗೂ

ತಿಳಿಯುತ್ತದೆ. ವೆಂಕಟರಮಣ ಹೇಳ ಹೋರಟ ವಿಷಯ ಅವನಲ್ಲೆ ಉಳಿಯುತ್ತದೆ. ಭಾರತಿಯ ಅಂತ್ಯ ಕ್ರಿಯೆ ಮುಗಿದ ಮೇಲೆ ಅನಂತ ಮೊದಲೇ ನಿರ್ಧರಿಸಿರುತ್ತಾನೆ. ಭಾರತಿಯನ್ನು ಮದುವೆಯಾಗುವುದು ಇಲ್ಲವಾದರೆ ಜೀವನ ಪೂರ್ತಿ ಅವಳ ನೆನಪಲ್ಲೆ ಉಳಿಯುವುದು ಸಮಾಜ ಸೇವೆ ಮಾಡುತ್ತ ಎಂದು, ಕೊನೆಗೆ ಅವನ ನಿರ್ಧಾರವೇ ಗಟ್ಟಿಯಾಗುತ್ತದೆ. ಮತ್ತೆ ಮೈಸೂರಿನ ಕಡೆ ಹೆಜ್ಜೆ ಹಾಕುತ್ತಾನೆ. ತಿರುಗಿಯು ಸಹ ನೋಡುವುದಿಲ್ಲ ಯಾರ ಮಾತು ಅವನ ಕಿವಿಗೆ ತಾಗುವುದಿಲ್ಲ ಹೀಗೆ ಕತೆ ಮುಕ್ತಾಯವಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದು ಎಷ್ಟರ ಮಟ್ಟಿಗೆ ಒಂದು ಜ್ವಲಂತ ಸಮಸ್ಯೆ ಎನ್ನುವುದು ಹೊರಗಿನವರಾದ ನಮ್ಮಂಥವರಿಗೆ ತಿಳಿಯದು. ಆದರೆ ಲೇಖಕರ ದೃಷ್ಟಿಯಲ್ಲಿ ಅದು ಮುಖ್ಯ ಸಮಸ್ಯೆಯೇ ಎರಡನೆಯ ಮುದ್ರಣದ [1982] ಮುನ್ನುಡಿಯಲ್ಲಿ ಲೇಖಕರೆ ಹೇಳುತ್ತಾರೆ. 'ಕಾದಂಬರಿ ರಚಿಸುವಾಗ ನಾನೂ ಹದಿಹರೆಯದ ಹುಡುಗನಾಗಿದ್ದುದರಿಂದ ಆಗ ಇದು ನನಗೆ ಮಹತ್ತ್ವದ್ದಾಗಿ ಕಂಡಿರಬಹುದು. ಆದರೂ ಈಗ ಕಾದಂಬರಿಯ ಹೊರಗೆ ನಿಂತು ನೋಡಿದಾಗ ವ್ಯವಸ್ಥೆಯ ವಿರುದ್ದ ನಮ್ಮ ಹೋರಾಟ ಎಷ್ಟು ಸಫಲವಾಗುತ್ತದೆ ಎನ್ನುವ ಪ್ರಶ್ನೆ ಸದಾ ನನ್ನನ್ನು ಕಾಡುತ್ತದೆ' ಎಂದು ತಮ್ಮ ಅನಿಸಿಕೆಯನ್ನು ತಿಳಿಸಿದ್ದಾರೆ.

ಆದರೆ ವಾಸ್ತವವಾಗಿ 'ಅನಂತ' ದಲ್ಲಿ ಹೋರಾಟ ಪ್ರಾರಂಭವಾಗುವಷ್ಟರಲ್ಲೇ ಮುಗಿದು ಹೋಗಿ ಬಿಡುತ್ತದೆ. ಅಲ್ಲಿ ಚಿತ್ರಿತವಾಗಿರುವುದೇನಿದ್ದರೂ ಹೋರಾಟದ ಪೂರ್ವರಂಗ ಅಷ್ಟೇ. ಬಹಿರಂಗ ಹೋರಾಟಕ್ಕೆ ಅಂದರೆ ಸಂಪ್ರದಾಯ ವಿರುದ್ದ ಸಿಡಿಯುವುದಕ್ಕೆ ತಯಾರಾದ ಎರಡು ಜೀವಗಳ [ಅನಂತ – ಭಾರತಿ] ಮನದೊಳಗಿನ ಈ ಕುರಿತ ತಲ್ಲಣಗಳೇ ಇಲ್ಲಿನ ಮುಖ್ಯವಸ್ತು. ಕಥಾವಸ್ತು ಎಷ್ಟೇ ಸರಳವಾಗಿದ್ದರೂ ಈ ತಲ್ಲಣಗಳು ಸಾಕಷ್ಟು ಸಶಕ್ತವಾಗಿಯೇ ಮೂಡಿ ಬಂದಿವೆ.

ಹಾಗೆ ನೋಡಿದರೆ 'ಹೋರಾಟ' ಡಾ। ಮೊಗಸಾಲೆಯವರ ಬಹುತೇಕ ಕಾದಂಬರಿಗಳ ಮುಖ್ಯವಸ್ತು. ಇದು ಬಹುಶ: ಅವರಿಗೇ ತಿಳಿದಿಲ್ಲವೆಂದು ಕಾಣುತ್ತದೆ. ಕೆಲವು ಕೃತಿಗಳಲ್ಲಿ ಈ ಹೋರಾಟ ಪಾತ್ರಗಳ ಅಂತರಂಗದಲ್ಲಿ ಮೌನಯುದ್ದವಾಗಿ ನಡೆದರೆ ಇನ್ನು ಕೆಲವುದರಲ್ಲಿ ಅದು ಬಹಿರಂಗವಾಗಿ ನಡೆಯುತ್ತದೆ.. ಮತ್ತೆ ಕೆಲವು ಕಾದಂಬರಿಗಳಲ್ಲಿ ಈ ಎರಡೂ ಬಗೆಯ ಹೋರಾಟಗಳು ಕಂಡು ಬರುತ್ತದೆ.

ಕತೆಯ ಹಂದರ ಸರಳವಾದದ್ದೂ, ಅದು ಎತ್ತುವ ಪ್ರಶ್ನೆ ಕೂಡ ಅಷ್ಟೇನೂ ಮಹತ್ವದಲ್ಲ ಎನಿಸಿದರೂ ಕೂಡ ಕಾದಂಬರಿಯನ್ನು ಕಟ್ಟಿರುವ ರೀತಿ ಆ ಕಿರಿಯ ವಯಸ್ಸಿಗೆ ಅಸಾಧ್ಯ ಅಥವಾ

ಅಪರೂಪವೆನ್ನಿಸುವಂಥಾದ್ದು, ಕಾದಂಬರಿಯಲ್ಲಿ ಸಂಭಾಷಣೆಯಲ್ಲೆಲ್ಲಾ ಸ್ಥಳೀಯ ಹವ್ಯಕರ ದೇಸೀ ಭಾಷೆಯನ್ನು ಬಳಸಲಾಗಿದೆ. ವಿವರಣೆ ಮತ್ತು ನಿರೂಪಣೆಗಾಗಿ ಸಾಮಾನ್ಯ ಗ್ರಾಂಥಿಕ ಭಾಷೆ ಬಳಸಲಾಗಿದೆ. ಹವ್ಯಕರ ದೇಸೀ ಭಾಷೆಯನ್ನು ಬಳಸುವ ಧೈರ್ಯವನ್ನು ಹತ್ತೊಂಬತ್ತರ ಹುಡುಗನೊಬ್ಬ ತೋರಿ ತನ್ನ ಕಾದಂಬರಿಯನ್ನು ರಚಿಸಿದ್ದೇ ಅವರಲ್ಲಿದ್ದ ಸ್ವಂತಿಕೆಯನ್ನು ತೋರುತ್ತದೆ.

ಕಥಾ ಬೆಳವಣಿಗೆಯಲ್ಲಿ ಸಂಯಮ, ಸನ್ನಿವೇಶಗಳನ್ನು ಚಿತ್ರಿಸುವಲ್ಲಿನ ಜಾಣ್ಮೆ ಮೆಚ್ಚುವಂಥದು. ಕತೆಯ ಮುಖ್ಯ ಅಂಶ ಪ್ರಣಯವೇ ಆದರೂ ಕಥನದ ಬೆಳವಣಿಗೆ ಮತ್ತು ನಿರೂಪಣೆಯಲ್ಲಿ ಎಲ್ಲಿಯೂ ರೊಮ್ಯಾಂಟಿಸಂನ ಭಾವತೀವ್ರತೆ ಹಾಗೂ ಮೆಲೋಡ್ರಮ್ಯಾಟಿಕ್ ಲಹರಿ ಇಲ್ಲದಿರುವುದು ಗಮನಿಸಬೇಕಾದ ಅಂಶ. ಹಾಗೆ ನೋಡಿದರೆ 1950-70ರ ಅವಧಿಯ ಕಾದಂಬರಿಗಳಲ್ಲಿ ಭಾವಾವೇಶದ ಏಕಮುಖೀಯವಾದ, ಕಪ್ಪು-ಬಿಳುಪಿನ ಚಿತ್ರಣವೇ ಹೆಚ್ಚಾಗಿ ಕಂಡು ಬರುತ್ತದೆ. ಅಲ್ಲಿನ ಸರಳ ರೇಖಾತ್ಮಕ ನಿರೂಪಣೆಗೆ ಮಾರು ಹೋಗದೆ ಕತೆಗೆ ಕೆಲವು ತಿರುವುಗಳನ್ನು ಕೊಟ್ಟು ಕಾದಂಬರಿಗೆ ವಾಸ್ತವತೆಯನ್ನು ತಂದಿದ್ದಾರೆ. ಅನಂತ-ಭಾರತಿಯರ ಪ್ರೀತಿಯ ವಿಷಯ ಕೊನೆಗೂ ಗುಪ್ತವಾಗಿ ಉಳಿಯುವುದೇ ಬದುಕಿನ ಅನೂಹ್ಯತೆಯನ್ನು ಧ್ವನಿಸುವಂತಿದೆ. ವಿಷಯದ ಸರಳೀಕರಣ ಇಲ್ಲವೇ ವೈಭವೀಕರಣವಾಗಿದೆ ಎನಿಸುವುದಿಲ್ಲ. ಅಂತರ್ ಪ್ರತಿಭೆ ಡಾ। ಮೊಗಸಾಲೆ ಅವರನ್ನು ಸಾಹಿತ್ಯಿಕವಾಗಿ ಚಿಕ್ಕಂದಿನಿಂದಲೇ ಸರಿಯಾದ ದಿಕ್ಕಿನಲ್ಲಿ ನಡೆಸಿತು ಎನಿಸುತ್ತದೆ.

**ಕನಸಿನ ಬಳ್ಳಿ ಕಾದಂಬರಿಯ ಕಥಾವಸ್ತು, ಉದ್ದೇಶ ಮತ್ತು ವ್ಯಾಪ್ತಿ :**

1972 ರಲ್ಲಿ ಧಾರವಾಡದ ಸಮಾಜ ಪುಸ್ತಕಾಲಯದಿಂದ ಪ್ರಕಟವಾಗಿತ್ತು. ಕಾದಂಬರಿಯ ಶೀರ್ಷಿಕೆಯೇ ಊಹಾತ್ಮಕ ಕಲ್ಪನೆಯನ್ನು ಸೂಚಿಸುತ್ತದೆ. ಈ ಕಾದಂಬರಿಯ ನಾಯಕ ಸದಾನಂದ. ತಾಯಿ ಸರೋಜಮ್ಮ ತಂದೆ ನರ್ಸಪ್ಪಯ್ಯ ಬೆಂಗಳೂರಿನಲ್ಲಿ ಮೇಜಿಸ್ಟ್ರೇಟ್ ಆಗಿ ಕೆಲಸ ನಿರ್ವಹಿಸುತ್ತಿರುತ್ತಾರೆ. ಸದಾನಂದ ಮೈಸೂರಿನ ಜನರಲ್ ಆಸ್ಪತ್ರೆಯಲ್ಲಿ ಸರ್ಜನ್ ಆಗಿ ಕೆಲಸ ನಿರ್ವಹಿಸುತ್ತಿರುತ್ತಾನೆ, ಇವನ ತಮ್ಮ ರಾಘವ ಇಂಜಿನಿಯರಿಂಗ್ ಆಗಿ ಕಲ್ಕತ್ತಲೆಯಲ್ಲಿ ಕೆಲಸ ಮಾಡುತ್ತಿರುತ್ತಾನೆ. ನರ್ಸಪ್ಪಯ್ಯ ತಂದೆ ರಾಮ ಹೊಳ್ಳರು ಇವರಿಗೆ ಪಿತ್ರಾರ್ಜಿತ ಆಸ್ತಿ ಇರುತ್ತದೆ. ನರ್ಸಪ್ಪಯ್ಯ ಕೆಲಸದ ನಿಮಿತ್ತ ಬೆಂಗಳೂರಿನಲ್ಲಿದ್ದು ಕೋಳ್ಯೂರಿನ ಆಸ್ತಿಯನ್ನು ನೋಡಿಕೊಂಡಿರಲು ಸುಬ್ರಾಯಕಾರಂತ ಎಂಬುವರಿಗೆ ವಹಿಸಿಕೊಟ್ಟಿರುತ್ತಾರೆ. ಸುಬ್ರಾಯ ಕಾರಂತರ ಹೆಂಡತಿ ತುಂಗಮ್ಮ, ಮಕ್ಕಳು, ಪಾರ್ವತಿ, ಶಿವರಾಮ ಮತ್ತು ರಮೇಶ. ರಾಮಹೊಳ್ಳರ ತಂಗಿ ಕಾವೇರಮ್ಮ, ಇವರ ನೆನಪೇ ನರ್ಸಪ್ಪಯ್ಯನಿಗೆ ಇರುವುದಿಲ್ಲ ಬೆಂಗಳೂರಿನಲ್ಲಿ ನೆಲಸಿ ಎಲ್ಲಾ ಸಂಬಂಧಗಳನ್ನು ಸಹ ಮರೆತಿರುತ್ತಾರೆ. ತಮ್ಮ ಹಳ್ಳಿಗೆ ಹೋಗುವುದಾಗಲೀ ತಮ್ಮ ಆಸ್ತಿಯ ಬಗ್ಗೆಯಾಗಲೀ ಅವರಿಗೆ ಯಾವುದೇ ರೀತಿ ಆಸೆ

ಇರುವುದಿಲ್ಲ. ಕಾರಣ ಅವರ ಹೆಂಡತಿ ಸರೋಜಮ್ಮ, ಬೆಂಗಳೂರಿನಲ್ಲೆ ಹುಟ್ಟಿ ಬೆಳೆದವರು ಅವರ ವಿದ್ಯಾಭ್ಯಾಸವು ಇಲ್ಲೇ ಮುಗಿಸಿದ್ದರು. ಅವರಿಗೆ ಹಳ್ಳಿಯಾಗಲಿ ಅಲ್ಲಿನ ವಾತಾವರಣವಾಗಲೀ ಇಷ್ಟವಾಗುತ್ತಿರಲಿಲ್ಲ. ವಸಂತಿ ಸಹ ಮೈಸೂರಿನ ಆದೇ ಸರ್ಕಾರಿ ಆಸ್ಪತ್ರೆಯಲ್ಲಿ ನರ್ಸ್ ಆಗಿರುತ್ತಾಳೆ. ವಸಂತಿ ತಂದೆ ರಾಮರಾಯರು ಹೈಸ್ಕೂಲಿನ ಅಧ್ಯಾಪಕರು ಇವರ ಮೊದಲ ಹೆಂಡತಿ ಲಕ್ಷ್ಮಿ ಮೋಹನನಿಗೆ ಜನ್ಮವಿತ್ತು, ಲಕ್ಷ್ಮಿ ನಿಧನರಾದರು. ರಾಮರಾಯರ ಎರಡನೇ ಹೆಂಡತಿ ಗೌರಿ ಇವರ ಮಗಳೇ ವಸಂತಿ. ರಾಮರಾಯರಿಗೆ ಎಳೆ ಹರೆಯದ ಹೆಂಡತಿಯ ಮೇಲೆ ಮುದ್ದಾಗಿದ್ದ ಮಗಳು ವಸಂತಿಯ ಮೇಲಿನ ಪ್ರೀತಿ ಮಗುವಿನ ಸರಸ ಆಟಗಳಿಂದ ರಾಯರು ಮಗಳ ಪಕ್ಷಪಾತಿಗಳಾಗಿದ್ದರು. "ಗೌರಿಯು ಮೋಹನನ್ನು ತನ್ನ ಮಗನಂತೆ ನೋಡಿಕೊಂಡಿದ್ದರೂ ಮೋಹನನಿಗೆ ಅಪ್ಪ ತನ್ನ ಚಿಕ್ಕಮ್ಮ ಮತ್ತು ತಂಗಿಯನ್ನೇ ಹೆಚ್ಚಾಗಿ ಪ್ರೀತಿಸುತ್ತಾರೆಂದು ದಿನದಿನಕ್ಕೆ ಅನಿಸತೊಡಗಿತು. ಅದು ಕ್ರಮೇಣ ಬೆಳೆದಂತೆ ವಸಂತಿಯ ಮೇಲೆ ದ್ವೇಷದ ರೂಪವನ್ನು ತಾಳುತ್ತಾ ಬೆಳೆದು ಬಂತು"(11). ಗೌರಿಗೆ ಒಂದೆರಡು ಹೆಣ್ಣು ಮಕ್ಕಳಿಗೇ ಜನ್ಮವಿತ್ತಳೇ ಹೊರತು ಅವರಿಗೆ ಗಂಡು ಮಗು ಆಗಲಿಲ್ಲ. "ರಾಯರು ಮೋಹನನು ತನ್ನ ಉತ್ತರಾಧಿಕಾರಿಯೆಂಬಂತೆ ಅವನ ವಿದ್ಯೆಭ್ಯಾಸಕ್ಕೆ ಹೆಚ್ಚು ಮಹತ್ವ ಕೊಟ್ಟರು. ರಾಯರು ವಿದ್ಯಾ ಪಕ್ಷಪಾತಿಗಳಾದುದರಿಂದ ವಸಂತಿಯನ್ನು ಶಾಲೆಗೆ ಹೋಗಲು ಯಾರ ಅಡ್ಡಿ ಇರಲಿಲ್ಲ"(12). ವಸಂತಿ ಮ್ಯಾಟ್ರಿಕ್ಯುಲೇಷನ್ ಓದುತ್ತಿರುವಾಗ ಹಠಾತ್ತನೆ ರಾಯರಿಗೆ 'ಮೆನೆಂಜೈಟಸ್' ತಗುಲಿತು. ಆಸ್ಪತ್ರೆಯಲ್ಲಿದ್ದುಕೊಂಡು ಕೆಲ ದಿವಸ ಚಿಕಿತ್ಸೆ ಪಡೆದರು. ರಾಯರ ಕಾಯಿಲೆ ವಾಸಿಯಾಗಲಿಲ್ಲ, ಕೊನೆಗೊಂದು ದಿನ ಮೂರು ಹೆಣ್ಣು ಮಕ್ಕಳು, ಮಗ, ಎಳೆಹರೆಯದ ಹೆಂಡತಿ ಎಲ್ಲರನ್ನು ಬಿಟ್ಟು ಅಗಲಿದರು. ತಂದೆಯ ಅಕಸ್ಮಾತ್ ಮರಣದಿಂದ ತತ್ತರಿಸಿ ಹೋದ ಮೋಹನ ತನ್ನ ವಿದ್ಯಾಭ್ಯಾಸವನ್ನು ಅರ್ಧದಲ್ಲೇ ನಿಲ್ಲಿಸಿ ನೌಕರಿಗೆ ಸೇರಿದ. ವಸಂತಿಯ ಓದು ಒಂದು ಹಂತಕ್ಕೆ ಬಂತು ಅವಳ ಮದುವೆಗೆ ವರಾನ್ವೇಷಣೆಯಲ್ಲಿ ತೊಡಗಿದ. ದೊಡ್ಡ ಸಂಸಾರವಾದ್ದರಿಂದ ನಿಭಾಯಿಸುವುದು ಮೋಹನನಿಗೆ ಕಷ್ಟವಾಗತೊಡಗಿತು. ವಸಂತಿಯ ಮದುವೆ ಬೇಗ ಮಾಡಿದರೆ ಒಳ್ಳೆಯದು ಎಂದು ಅನಿಸತೊಡಗಿತು. ಗೌರಿಗೆ ಮೋಹನನಂತೂ ವಸಂತಿಯನ್ನು ದಾಟಿಸುವ ಆಲೋಚನೆಯಲ್ಲಿ ಇದ್ದಾನಷ್ಟೆ ಹೊರತು ತಕ್ಕ ವರಾನ್ವೇಷಣೆಯಲಿಲ್ಲ ಎಂದು ಅನಿಸಿತ್ತು. ಇದೇ ವಿಷಯಕ್ಕೆ ಚಿಕ್ಕಮ್ಮ – ಮಗನಿಗೆ ಭಾರೀ ಚರ್ಚೆಯೂ ನಡೆಯುತ್ತದೆ. ವಸಂತಿ ಮಧ್ಯೆ ಬಂದು ಮನೆಯ ಕಷ್ಟ ಎಲ್ಲಾ ನನಗೆ ಗೊತ್ತಮ್ಮ, ನಾನೇ ನೌಕರಿ ಹಿಡಿದು ಅಣ್ಣನಿಗೆ ನೆರವಾಗುತ್ತೇನೆ ಎಂದು ಹೇಳಿದಾಗ, ಅದಕ್ಕೆ ಮೋಹನನಿಗೆ ವಸಂತಿ ತನ್ನನ್ನು ಅಣಕಿಸುವಂತೆ ಅನಿಸಿತು. ಅವನು ಅದಕ್ಕೆ ಒಪ್ಪುವುದಿಲ್ಲ, ನೀನು ದುಡಿದು ನಾನು ತಿನ್ನಬೇಕಂತಲೋ? ಅಪ್ಪ ಸತ್ತ ಮೇಲೆ ಸರಿಯಾಗಿ ನೋಡಿಕೊಳ್ಳಲಿಲ್ಲ ಎಂಬ ಅಪವಾದಕ್ಕೆ ಗುರಿ ಮಾಡಲು ನೌಕರಿ ಹಿಡಿದು ದುಡಿಯುತ್ತೀಯ ಎಂದು ಹೇಳುತ್ತಾನೆ. ಕೊನೆಗೆ ಮೋಹನ ವಸಂತಿಗೆ ಎಚ್.ಎಂ.ಟಿ.ಯಲ್ಲಿ ನೌಕರನಾಗಿದ್ದ ಸುಂದರನೊಂದಿಗೆ ವಿವಾಹವನ್ನು ಮಾಡುತ್ತಾನೆ. ಮದುವೆಯ

ನಂತರ ಸುಂದರ ವಸಂತಿಯನ್ನು ಕರೆದು ಕೊಂಡ ಊಟಿಗೆ ಹನಿಮೂನ್‌ಗೆ ಹೋಗಿರುತ್ತಾರೆ. ಅಲ್ಲೇ ಸ್ವಿಮ್ಮಿಂಗ್ ಫೂಲ್ ನಲ್ಲಿ ಈಜಲು ಹೋದ ಸುಂದರ ಮೇಲೆ ಬರಲಿಲ್ಲ. ಸುಂದರ ವಿಧಿವಶನಾಗಿದ್ದ. ಆಗ ವಸಂತಿಗೆ ಮದುವೆ ಆಗಿ ಬರೇ ಹತ್ತು ದಿನಕ್ಕೆ ವೈಧವ್ಯ ಬಂದಿತು. ನಂತರ ಎರಡು ವರ್ಷ ನರ್ಸ್ ಶಿಕ್ಷಣ ಪೂರೈಸಿ ಜನರಲ್ ಅಸ್ಪತ್ರೆಯಲ್ಲಿ ನೌಕರಿ ಮಾಡುತ್ತಿದ್ದಳು. ಇಲ್ಲೇ ವಸಂತಿಗೆ ಡಾ। ಸದಾನಂದನ ಪರಿಚಯವಾಗಿತ್ತು. ಡಾ। ಸದಾನಂದನದು ಆಕರ್ಷಕ ವ್ಯಕ್ತಿತ್ವ, ಕೆಲಸದಲ್ಲೂ ನಿಷ್ಠಾವಂತ. ವಸಂತಿಯ ಸರಳ ನಡೆ ನುಡಿ, ಅವಳ ಕತೆ ಎಲ್ಲಾ ಸದಾನಂದನಿಗೆ ತಿಳಿದಿರುತ್ತದೆ. ತಾನು ಏಕೆ ವಸಂತಿಯನ್ನು ಮದುವೆಯಾಗಬಾರದು ಎಂಬ ನಿರ್ಧಾರಕ್ಕೆ ಬಂದು ವಸಂತಿಯ ಒಪ್ಪಿಗೆಯನ್ನು ಪಡೆಯುತ್ತಾನೆ. ತಂದೆ ತಾಯಿಗೆ ತನ್ನ ಮತ್ತು ವಸಂತಿಯ ವಿಷಯ ತಿಳಿಸಿ ತಾನು ಅವಳನ್ನು ಮದುವೆಯಾಗುತ್ತೇನೆ ಎಂದಾಗ ತಂದೆ ತಾಯಿ ಒಪ್ಪುವುದಿಲ್ಲ. ಕೊನೆಗೆ ಸದಾನಂದ ತನ್ನ ಸರ್ಕಾರಿ ನೌಕರಿಗೆ ರಾಜೀನಾಮೆ ಕೊಟ್ಟು ತನ್ನ ತಂದೆಯ ಜಮೀನು ಇದ್ದ ಕೋಳ್ಯೂರು ಗ್ರಾಮಕ್ಕೆ ಬರುತ್ತಾನೆ. ಅಲ್ಲಿ ಕಾರಂತರು ಅವನನ್ನು ಆತ್ಮೀಯತೆಯಿಂದ ನೋಡಿಕೊಳ್ಳುತ್ತಾರೆ. ಸದಾನಂದನ ಎಲ್ಲಾ ಯೋಜನೆಗಳಿಗೂ ಕಾರಂತರ ಸಹಾಯ ಹಸ್ತ ಇದ್ದೆ ಇರುತ್ತದೆ. ಕೋಳ್ಯೂರು ತಲುಪಿದ ಮೇಲೆ ಸದಾನಂದ ತಮ್ಮ ಜಮೀನಿನಲ್ಲಿ ಅನೇಕ ಹೊಸ ರೀತಿಯ ಕೃಷಿ ಚಟುವಟಿಕೆಗಳನ್ನು ಮಾಡುತ್ತಾನೆ. ಅಲ್ಲಿ ಸ್ವಂತ ಕ್ಲಿನಿಕ್ ತೆಗೆದು ಜನರಿಗೆ ಸಹಾಯಕನಾಗಿ ನಿಲ್ಲುತ್ತಾನೆ. ಸದಾನಂದ ಎಲ್ಲಾ ಕೆಲಸಗಳಿಗೂ ಅವನ ತಮ್ಮ ರಾಘವ ಸಹಾಯ ಮಾಡುತ್ತಿರುತ್ತಾನೆ. ಕಾರಂತರಿಗೆ ಜ್ವರ ಬಂದು ಏನೇ ಔಷಧಿ ಕೊಟ್ಟರು ವಾಸಿ ಆಗದೆ ಕೊನೆಯುಸಿಳೆಯುತ್ತಾರೆ. ಸಾಯುವ ಸಂದರ್ಭದಲ್ಲಿ ಸದಾನಂದನಿಗೆ ಪಾರ್ವತಿಯನ್ನು ಕೈ ಹಿಡಿಯುವಂತೆ ಹೇಳಿರುತ್ತಾರೆ. ಆದರೆ ಸದಾನಂದನಿಗೆ ಆ ಭಾವನೆ ಪಾರ್ವತಿಯಲ್ಲಿರುವುದಿಲ್ಲ. ಕಾರಂತರ ಮರಣದಿಂದ ಸದಾನಂದ ಒಬ್ಬ ಆತ್ಮೀಯರನ್ನು ಕಳೆದುಕೊಂಡ ನೋವಿನಲ್ಲಿರುತ್ತಾನೆ. ಅದೇ ಸಮಯಕ್ಕೆ ರಾಘವನಿಗೆ ಕಲ್ಕತ್ತದಲ್ಲಿ ಉಂಟಾದ ಮೋಟಾರ್ ಅವಘಡಲ್ಲಿ ಬಲಗಾಲು ಸಂಪೂರ್ಣ ತುಂಡಾಗಿ ಹೋಗಿದೆ ಎಂದು ಈಗ ಗುಣಮುಖನಾಗಿದ್ದಾನೆ. ಬೆಂಗಳೂರಿಗೆ ಕರೆತಂದಿದ್ದೇನೆ ಎಂದು ತಂದೆ ಟೆಲಿಗ್ರಾಂ ನೋಡಿ ತಕ್ಷಣ ಬೆಂಗಳೂರಿಗೆ ಬಂದು ಎಲ್ಲಾ ವಿಷಯ ತಿಳಿದ ಮೇಲೆ ತಮ್ಮನನ್ನು ಒಪ್ಪಿಸಿ, ತನ್ನ ಜೊತೆಯಲ್ಲೇ ಕೋಳ್ಯೂರುಗೆ ಕರೆತರುತ್ತಾನೆ. ರಾಘವನಿಗೆ ಅಣ್ಣ ಮಾಡಿರುವ ಎಲ್ಲಾ ಯೋಜನೆಗಳನ್ನು ನೊಡಿ, ಅಣ್ಣನ ಜೊತೆಯಲ್ಲೇ ತನ್ನಿಂದ ಆದ ಸಹಾಯ ಮಾಡಿಕೊಂಡು ಇರಬೇಕು ಅನ್ನಿಸುತ್ತದೆ. ಅಲ್ಲಿನ ಪರಿಸರವೂ ಅವನಿಗೆ ತುಂಬಾ ಹಿಡಿಸಿರುತ್ತದೆ ಕೊನೆಗೆ ಅಣ್ಣ ತಮ್ಮ ಒಂದು ನಿರ್ಧಾರಕ್ಕೆ ಬರುತ್ತಾರೆ. ತಂದೆ ತಾಯಿಯು ತಮ್ಮ ಜೊತೆಯಲ್ಲಿ ಬಂದು ಇರುವುದು ಎಂದು, ಕೊನೆಗೆ ಒಲ್ಲದ ಮನಸ್ಸಿನಿಂದ ಸದಾನಂದ ತಾಯಿ ಬರಲು ಒಪ್ಪುತ್ತಾರೆ. ಸದಾನಂದ ಆ ಹುಡುಗಿ ಬಿಟ್ಟು ಬೇರೆ ಮದುವೆಯಾಗಲಾರ ಎಂಬುದನ್ನು ತಿಳಿದ ತಂದೆ ತಾಯಿ ಕೊನೆಗೆ ರಾಘವನ ಉಸ್ತುವಾರಿಕೆಯಲ್ಲಿ ವಸಂತಿಯನ್ನು ಸದಾನಂದ ಮದುವೆಯಾಗಲು ಒಪ್ಪಿಗೆ ನೀಡುತ್ತಾರೆ. ಅದೇ ಸಂತೋಷದಲ್ಲಿ

ಸದಾನಂದ ವಸಂತಿಗೆ ವಿಷಯ ತಿಳಿಸಲು ಮೈಸೂರಿಗೆ ಹೊರಟಿರುತ್ತಾನೆ. ಆದರೆ ಸದಾನಂದ ಬಂದಾಗ ವಸಂತಿ 15 ದಿನದ ಹಿಂದೆ ಹೃದಯಘಾತದಿಂದ ಸಾವನ್ನಪ್ಪಿರುವ ವಿಷಯ ಆಸ್ಪತ್ರೆಯ ಸಿಬ್ಬಂದಿಯಿಂದ ತಿಳಿದು ಜೀವನ ಏಕೆ, ಏನು ಇಲ್ಲ! ವಸಂತಿಯೇ ಇಲ್ಲವಾದ ಮೇಲೆ ತನ್ನ ಜೀವನದಲ್ಲಿ ಸಂತೋಷ ಎಲ್ಲಿದೆ ಎಂಬ ಬೇಸರಿಕೆಯಿಂದ ಒಲ್ಲದ ಮನಸ್ಸಿನಿಂದ ಕೋಳ್ಯೂರಿಗೆ ಬರುತ್ತಾನೆ. ತನ್ನ ಭೂಮಿಗೆ ಕಾಲಿರಿಸುತ್ತಿದ್ದ ಹಾಗೆ ತೋಟದಿಂದ ಬಾಳೆ ಎಲೆ ಕಡಿದುಕೊಂಡು ಹೋಗುತ್ತಿದ್ದ ಪಾರ್ವತಿ ಅವನಿಗೆ ಎದುರಾದಳು ಅವಳೇ ಮುಗಳು ನಕ್ಕು "ಬಂದಿರಾ" ಎಂದು ಕೇಳಿದಳು ಸುತ್ತಲೂ ನಿರಾಶೆ ಕವಿದಿದ್ದರೂ, ಪಾರ್ವತಿಯ ಹೊಳೆಯುವ ಕಣ್ಣುಗಳಿಗೆ ದೃಷ್ಟಿ ಇಟ್ಟು "ಹೂ" ಎಂದ ಸದಾನಂದನಿಗೆ ಪಾರ್ವತಿಯ ಕಣ್ಣುಗಳಲ್ಲಿರುವ ಪ್ರೀತಿ ನಿರಾಶೆಯಲ್ಲೂ ಆಶೆಯನ್ನು ಕೊನರಿಸಿತು, ಜೀವನ ಮುಗಿದಿಲ್ಲ ಇದೆ ಎಂಬ ಆಶೆಯು ಅವನಲ್ಲಿ ಮೂಡಿತು.

ಇಲ್ಲಿ ಇನ್ನೊಂದು ಗಮನ ಸಳೆಯುವ ಪಾತ್ರವೆಂದರೆ ಕಾವೇರಜ್ಜಿಯದು ಈಕೆ ಮುಪ್ಪಿನ ಮಾಗಿದ ಜೀವ. ಈ ಪಾತ್ರ ತನ್ನ ಪರಿಪಕ್ವತಿ, ಸರಳವಾದ ಜೀವನ ಸಿದ್ಧಾಂತದಿಂದಾಗಿಯೇ ನಮ್ಮನ್ನು ತಟ್ಟುತ್ತದೆ.

ಪಾರ್ವತಿಯದು ತುಂಬಾ ಲವಲವಿಕೆಯ ಪಾತ್ರ ಇವಳೂ ಚೆಲುವೆ, ಮುಗ್ಧೆ, ಇವಳನ್ನು ಸದಾನಂದನಿಗೆ ಧಾರೆ ಎರೆದು ಕೊಟ್ಟರೆ ಒಳ್ಳೆಯದಾಗುತ್ತದೆಂಬ ಆಸೆ ತಂದೆ ಕಾರಂತರದು. ಆದರೆ ವಸಂತಿಯಲ್ಲಿ ಮನಸ್ಸು ನೆಟ್ಟಿದ್ದ ಸದಾನಂದ ಅದನ್ನು ಗಮನಿಸಿರಲಿಲ್ಲ ಪಾರ್ವತಿಗೆ ಇದ್ಯಾವುದೂ ತಿಳಿಯದಿರುವುದರಿಂದ ಆಕೆಯ ಸಂತೋಷ ಅಭಾದಿತವಾಗಿತ್ತು. ಕೊನೆಗೆ ವಸಂತಿ ಇಲ್ಲವೆಂದಾಗ ಪಾರ್ವತಿಯ ಮುಗ್ಧ ಚೆಲುವು ಸದಾನಂದನಿಗೆ ಹೊಸ ಭರವಸೆ ಹುಟ್ಟಿಸುತ್ತದೆ.

ವಸಂತಿಯು ಆಕಸ್ಮಿಕವಾಗಿ ಸತ್ತಳೆಂಬ ಒಂದು ಅಂಶ ಮಾತ್ರ ನಾಟಕೀಯವೆನಿಸುತ್ತದೆ. ಆದರೆ ವಾಸ್ತವದಲ್ಲಿ ಆಗಾಗುವುದಿಲ್ಲವೆಂದು ಹೇಳಲಾಗುವುದಿಲ್ಲ. ಆದ್ದರಿಂದ ಇದನ್ನು 'ಇದ್ದೀತು' ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಉಳಿದಂತೆ ಸರೋಜಮ್ಮನ ಡೌಲು ನರ್ಸಪ್ಪಯ್ಯನವರ ಒಣಗಮ್ಮತ್ತು, ಕಾರಂತರ ಸ್ನೇಹ ಶೀಲತೆ ಇವೆಲ್ಲ ಚೆನ್ನಾಗಿಯೇ ಚಿತ್ರಿತವಾಗಿದೆ. ಸದಾನಂದ ಮತ್ತು ರಾಘವನ ನಡುವಿನ ಸಂಬಂಧ, ಅಣ್ಣನ ಎಲ್ಲಾ ಕೆಲಸಗಳಿಗೂ ದೂರದಿಂದಲೇ ತನ್ನ ಸಹಾಯ ನೀಡುವ ಗುಣ, ತಮ್ಮನ ಬಗ್ಗೆ ಅಣ್ಣನ ಕಾಳಜಿ, ಸದಾನಂದ ರಾಘವನು ಅಂಗವಿಕಲನದಾಗ ತನ್ನ ಜೊತೆಯಲ್ಲಿ ಇರಲು ಹಳ್ಳಿಗೆ ಕರೆತರುವುದು. ಸಹೋದರರ ಬಗೆಗಿನ ಪ್ರೀತಿ, ವಿಶ್ವಾಸ ಕಾಣಬಹುದು. ವೈದ್ಯನೊಬ್ಬ ಹೇಗೆ

ವ್ಯವಸಾಯದಲ್ಲಿ ತೊಡಗಿ, ಹೊಸ ಯೋಜನೆಗಳಿಂದ ಕೃಷಿ ಅಭಿವೃದ್ಧಿ ಪಡಿಸುತ್ತಾನೆ. ಅದರಲ್ಲಿ ಯಶಸ್ವಿಯಾಗುತ್ತಾನೆ ಎಂಬುದನ್ನು ಕಾಣಬಹುದು.

ಕಾಸರಗೋಡು ಪರಿಸರದ ಚಿತ್ರಣ ಸಹಜ ಹಾಗೂ ವಾಸ್ತವಿಕ ರಿತಿಯಲ್ಲಿದೆ. ದಕ್ಷಿಣ ಕನ್ನಡದ ಗ್ರಾಂಥಿಕ ಶೈಲಿಯ ಸಂಭಾಷಣೆ ಇದೆ. ಸಾರ್ವಜನಿಕ ಚಟುವಟಿಕೆಗಳಲ್ಲಿ ಮುಖ್ಯಪಾತ್ರದ ತೊಡಗಿಕೊಳ್ಳುವಿಕೆ ವಿವೇಕಯುತವಾಗಿದೆ. ಸದಾನಂದ ಅನೇಕ ಯೋಜನೆಗಳಿಂದ ಹಳ್ಳಿಗರಿಗೆ ಸಹಾಯಕನಾಗಿ ನಿಲ್ಲುವ ರೀತಿ ಮೆಚ್ಚುವಂತಹದು.

ಅಡಿ ಟಿಪ್ಪಣಿ

(1). ಡಾ। ಜಿ.ಎಸ್. ಆಮೂರ ರವರ ಕನ್ನಡ ಕಥನ ಸಾಹಿತ್ಯ: ಕಾದಂಬರಿ ಪುಟ–23

(2). ಡಾ। ಜಿ.ಎಸ್. ಆಮೂರ ರವರ ಕನ್ನಡ ಕಥನ ಸಾಹಿತ್ಯ: ಕಾದಂಬರಿ ಪುಟ–26

(3). ಡಾ। ಜಿ.ಎಸ್. ಆಮೂರ ರವರ ಕನ್ನಡ ಕಥನ ಸಾಹಿತ್ಯ: ಕಾದಂಬರಿ ಪುಟ–30

(4). ಡಾ। ಜಿ.ಎಸ್. ಆಮೂರ ರವರ ಕನ್ನಡ ಕಥನ ಸಾಹಿತ್ಯ: ಕಾದಂಬರಿ ಪುಟ–31

(5). ಡಾ। ಜಿ.ಎಸ್. ಆಮೂರ ರವರ ಕನ್ನಡ ಕಥನ ಸಾಹಿತ್ಯ: ಕಾದಂಬರಿ ಪುಟ–150

(6). ಡಾ। ಜಿ.ಎಸ್. ಆಮೂರ ರವರ ಕನ್ನಡ ಕಥನ ಸಾಹಿತ್ಯ: ಕಾದಂಬರಿ ಪುಟ–150

(7). ಡಾ। ಜಿ.ಎಸ್. ಆಮೂರ ರವರ ಕನ್ನಡ ಕಥನ ಸಾಹಿತ್ಯ: ಕಾದಂಬರಿ ಪುಟ–154

(8). ಡಾ। ಜಿ.ಎಸ್. ಆಮೂರ ರವರ ಕನ್ನಡ ಕಥನ ಸಾಹಿತ್ಯ: ಕಾದಂಬರಿ ಪುಟ–239

(9). ಡಾ। ಜಿ.ಎಸ್. ಆಮೂರ ರವರ ಕನ್ನಡ ಕಥನ ಸಾಹಿತ್ಯ: ಕಾದಂಬರಿ ಪುಟ–239

(10). ಡಾ। ನಾ. ಮೊಗಸಾಲೆಯವರ ಮೊಗಸಾಲೆ ಕಾದಂಬರಿ ಸಂಪುಟ–1 ಪುಟ–197

(11). ಡಾ। ನಾ. ಮೊಗಸಾಲೆಯವರ ಮೊಗಸಾಲೆ ಕಾದಂಬರಿ ಸಂಪುಟ–1 ಪುಟ–261

(13). ಡಾ। ನಾ. ಮೊಗಸಾಲೆಯವರ ಮೊಗಸಾಲೆ ಕಾದಂಬರಿ ಸಂಪುಟ–1 ಪುಟ–261

# ಅಧ್ಯಾಯ-2

**ಲೇಖರ ಕಿರು-ಪರಿಚಯ:**



ಮೊಗಸಾಲೆಯವರು' ಹುಟ್ಟಿದ್ದು 27-08-1944 ರಲ್ಲಿ, ಕೇರಳದಲ್ಲಿನ ಕಾಸರಗೋಡಿನ 'ಕೋಳ್ಯೂರು' ವೆಂಬ ಕುಗ್ರಾಮದಲ್ಲಿ ಓದಿದ್ದು ಉಡುಪಿಯಲ್ಲಿ ಆಯುರ್ವೇದ ವೈದ್ಯ ಶಾಸ್ತ್ರವನ್ನು 1965 ರಿಂದ ವೃತ್ತಿ ನಡೆಸುತ್ತಿರುವುದು ಕಾರ್ಕಳ ತಾಲ್ಲೂಕಿನ ಕಾಂತಾವರ ಎನ್ನುವ ಹಳ್ಳಿಯಲ್ಲಿ 1967ರಲ್ಲಿ ವಿವಾಹವಾದರು. ಅವರ ಪತ್ನಿ ಪ್ರೇಮಲತೆ ಮೂರು ಜನ ಗಂಡು ಮಕ್ಕಳು - ನಿರಂಜನ [ಸಂಘಟಕ] ಸುದರ್ಶನ [ವಿಜ್ಞಾನಿ] ಮತ್ತು ಪ್ರಸನ್ನ [ವೈದ್ಯ].

**ಡಾ। ನಾ.ಮೊಗಸಾಲೆಯವರ ಪ್ರಕಟಿತ ಕೃತಿಗಳು :**

16 ಕಾದಂಬರಿಗಳು, 11 ಕವನ ಸಂಕಲನ, 6 ಸಣ್ಣ ಕಥೆಗಳು, 3 ಲೇಖನ ಸಂಕಲನಗಳು, 10 ಸಂಪಾದನಾ ಕೃತಿಗಳು, 6 ವೈದ್ಯಕೀಯ ಕೃತಿಗಳು, 1 ಗೀತಾ ನಾಟಕ, 3 ಪತ್ರಿಕೆಗಳಲ್ಲಿ 7 ವರ್ಷ, 'ಆರೋಗ್ಯ ಸಲಹೆ' ಅಂಕಣ ನಿರ್ವಹಣೆ.

**ಕಾದಂಬರಿಗಳ ಪಟ್ಟಿ :**

| | | |
|---|---|---|
| 1) ಮಣ್ಣಿನ ಮಕ್ಕಳು - 1965, | 2) ಅನಂತ - 1968, | 3) ಕನಸಿನ ಬಳ್ಳಿ - 1970, |
| 4) ನನ್ನದಲ್ಲಿದ್ದು - 1977, | 5) ಪಲ್ಲಟ - 1978, | 6) ಹದ್ದು - 1980, |
| 7) ಪ್ರಕೃತಿ - 1984, | 8) ನೆಲಮುಗಿಲುಗಳ ಮಧ್ಯೆ - 1985, | |
| 9) ದಿಗಂತ - 1988, | 10) ದೃಷ್ಟಿ - 1991, | 11) ಉಪ್ಪು - 1995, |
| 12) ತೊಟ್ಟಿ - 1977, | 13) ಪಂಥ - 2002, | 14) ಅರ್ಥ - 2002, |
| 15) ಉಲ್ಲಂಘನೆ - 2008, | 16) ಮುಖಾಂತರ - 2014. | |

**ಕವನ ಸಂಕಲನಗಳ ಪಟ್ಟಿ :**

1) ವರ್ತಮಾನದ ಮುಖಗಳು – 1974, 2) ಪಲ್ಲವಿ – 1979

3) ಮೊಗಸಾಲೆಯ ನೆನಪುಗಳು – 1983, 4) ಪ್ರಭವ – 1989

5) ಸ್ವಂತಕ್ಕೆ ಸ್ವಂತಾವತಾರ – 1991, 6) ನೆಲದ ನೆರಳು – 1999,

7) ಇದಲ್ಲ ಇದಲ್ಲ – 2003, 8) ಅರುವತ್ತರ ತೇರು [ಸಮಗ್ರ ಕಾವ್ಯ] – 2003,

9) ಇಹಪರದ ಕೊಳ – 2006, 10) ಕಾಮನೆಯ ಬೆಡಗು 2010,

11) ದೇವರು ಮತ್ತೆ ಮತ್ತೆ – 2014.

**ಸಣ್ಣ ಕಥೆಗಳು :**

1) ಆಶಾಂಕುರ – 1965, 2) ಹಸಿರು ಬಿಸಿಲು – 1965,

3) ಸುಂದರಿಯ ಎರಡನೇ ಅವತಾರ – 2004, 4) ಸಿತಾಪುರದ ಕಥೆಗಳು – 2007,

5) ಸೀತಾಪುರದಲ್ಲಿ ಗಾಂಧೀಜಿ – 2011, 6) ಸನ್ನಿದಿಯಲ್ಲಿ ಸೀತಾಪುರ – 2014.

**ಲೇಖನ ಸಂಕಲನಗಳು :**

1) ಮೊಗಸಾಲೆಯವರ ಒಲವು ನಿಲುವು – 2004,

2) ಬಿಸಿಲು ಕೋಲು – 2011, [ವ್ಯಕ್ತಿ ಚಿತ್ರ ಲೇಖನಗಳ ಸಂಗ್ರಹ], 3) ರೀತಿ ನೀತಿಗಳ ನಡುವಿನ ಪ್ರೀತಿ 2011 [ಭಾಷಣಗಳ ಸಂಗ್ರಹ]

**ಸಂಪಾದನಾ ಕೃತಿಗಳು :**

1) ವಾಣಿ 2) ಪ್ರಸ್ತುತ 3) ಮುದ್ರಣ, 4) ಕಾಂತಶ್ರೀ 5) ಮನೋರಮಾ

6) ರತ್ನಾಕರ 7) ಸ್ವರ್ಣ ನಂದಾದೀಪ, 8) ದರ್ಪಣ 9) ಕೋಳ್ಯೂರು,

10) ನುಡಿಹಾರ 1, 2, 3 ಮತ್ತು 4 ಸಂಪುಟಗಳು.

**ವೈದ್ಯಕೀಯ ಕೃತಿಗಳು :**

1) ನಿಮ್ಮ ಕೈಯಲ್ಲೇ ನಿಮ್ಮ ಆರೋಗ್ಯ 1989,

2) ಆರೋಗ್ಯ ಅನಾರೋಗ್ಯದ ನಡುವೆ 2000,

3) ಆರೋಗ್ಯ ಅನಾರೋಗ್ಯಕ್ಕೆ, ಆಯ್ಕೆ ಇದೆಯೇ 2002,

4) ದಾಂಪತ್ಯ ಯೋಗ [ಲೈಂಗಿಕ ವಿಜ್ಞಾನ] 2003,

5) ಹೆಣ್ಣು ಹೆಣ್ಣನ್ನು ಅರಿಯುವ ಬಗೆ 2004,

6) ಪ್ರತಿ ಕ್ಷಣವೂ ನಿಮ್ಮದೇ [ಔಷಧ ರಹಿತ ಚಿಕಿತ್ಸೆಯ ಆತ್ಮಕಥನ, ಯೋಗ ಚಿಕಿತ್ಸೆ] 2004.

**ಗೀತಾನಾಟಕ :**

1) ಪುರೂರವ – 1967

**ಅಂಕಣ ಬರಹ :**

1) ಉತ್ತರ ಕನ್ನಡ ಕನ್ನಡ ಜನಾಂತರಂಗ ಮಂಗಳೂರಿನ ಕರಾವಳಿ ಅಲೆ ಪತ್ರಿಕೆಗಳಲ್ಲಿ ಆರೋಗ್ಯ ಸಲಹೆ [1997 ರಿಂದ 2005]

2) ಕನ್ನಡ ಪ್ರಭ ಪತ್ರಿಕೆಯಲ್ಲಿ 'ಸಂಜೆ ಬಿಸಿಲಿನ ಅನುಭಾವ'–2011

ಡಾ। ನಾ.ಮೊಗಸಾಲೆಯವರು ಈಗ ತಮ್ಮ ಎಪ್ಪತ್ತರ ಹೊಸ್ತಿಲಲ್ಲಿರುವಾಗ ಅವರ ಕಾದಂಬರಿಗಳು ಸಂಪುಟ ರೂಪದಲ್ಲಿ ಮುದ್ರಣಗೊಳ್ಳುತ್ತಿವೆ. ಸಮಕಾಲೀನ ಕನ್ನಡ ಕಾದಂಬರಿ ಹಾಗೂ ಕಾವ್ಯ ಕ್ಷೇತ್ರದಲ್ಲಿ ಇಂದು ಈ ಲೇಖಕರು ಮುಟ್ಟಿರುವ ಎತ್ತರವನ್ನು ಬಲ್ಲ ನಮಗೆ ಅವರ ಆರಂಭದ ಕೃತಿಗಳತ್ತ ಬೀರುವ ವಿಶ್ಲೇಷಣಾತ್ಮಕ ಹಿನ್ನೋಟ ಅವರ ಇಂದಿನ ಎತ್ತರ ಒಂದು ಕ್ರಮಬದ್ಧ ಶಿಸ್ತಿನ ಬೆಳವಣಿಗೆಯೇ ಅಥವಾ ಮಧ್ಯದಲ್ಲಿ ಭಿನ್ನ ರೀತಿಯಲ್ಲಿ ಕವಲೊಡೆದು ಸೃಜನ ಶೀಲ ಸಾಮರ್ಥ್ಯದಾಂಗುಡಿ ಇಟ್ಟದ್ದೋ ಎಂಬುದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಕಾವ್ಯ ಕ್ಷೇತ್ರದಲ್ಲಿ ಇವರಲ್ಲಿ ಇಂಥದೊಂದು ವಿಸ್ಮಯಕರ ಬೆಳವಣಿಗೆ ಕಾಣುತ್ತದೆ. 'ವರ್ತಮಾನದ ಮುಖಗಳು', 'ಪ್ರಭವ' ದಂತಹ ಆರಂಭದ ಕವನ ಸಂಕಲನಗಳಲ್ಲಿ ಆಂತರಿಕ ತುಮುಲಗಳು ಹಾಗೂ ವಾತಾವರಣದಕ್ಕೆ ಪ್ರತಿ ಸ್ಪಂದನೆಯನ್ನು ಕೊಟ್ಟುಕೊಂಡೇ ಬರೆದ ಕವಿ, ಈಚೀನ 'ಇಹಪರದ ಕೊಳ' ಹಾಗೂ 'ಕಾಮನೆಯ ಬೆಡಗು' ಸಂಕಲನಗಳಲ್ಲಿ ಒಬ್ಬ ಅನುಭಾವಿಯಾಗಿ ಹೊರ ಹೊಮ್ಮಿದ ಬಗ್ಗೆ ಆಶ್ಚರ್ಯಕರವಾಗಿರುವಂತೆಯೇ ಸಂತೋಷಕರವಾದದ್ದೂ ಕೂಡ. 'ಉಲ್ಲಂಘನೆ'ಯಂಥ ಶ್ರೇಷ್ಠ ಕೃತಿಯನ್ನು ಕಾದಂಬರಿಕಾರ ಮೊಗಸಾಲೆಯಲ್ಲು ಅಂಥ ಅನಿರೀಕ್ಷಿತ ಹೊರಳುವಿಕೆ ಉಂಟಾಗಿದೆಯೇ? ಒಬ್ಬ ಸೃಜನಶೀಲ ಲೇಖಕನ ಬೆಳವಣಿಗೆಯ ಅಧ್ಯಯನಕ್ಕೆ ಇಂಥ ಪ್ರಶ್ನೆಗಳನ್ನು ಹಾಕಿಕೊಳ್ಳುವುದಗತ್ಯ.

**ಡಾ। ನಾ.ಮೊಗಸಾಲೆಯವರ ಕಥೆ / ಕಾದಂಬರಿಗಳಲ್ಲಿ ಎರಡು ಮುಖ್ಯ ಲಕ್ಷಣಗಳನ್ನು ಗುರುತಿಸಬಹುದು.**

ಇವರು ನೇರವಾಗಿ ಕಾರಂತ, ಭೈರಪ್ಪ, ವ್ಯಾಸರಾಯ ಬಲ್ಲಾಳರಂತೆ ತಾತ್ವಿಕ ಜಿಜ್ಞಾಸೆಗೆ ತೊಡಗುವುದು ಕಡಿಮೆ. ಅದನ್ನು ಅವರೇ ಒಂದೆರಡು ಮುನ್ನುಡಿಗಳಲ್ಲಿ ಸ್ಪಷ್ಟ ಪಡಿಸಿದ್ದಾರೆ ಕೂಡ. ಅದೇನಿದ್ದರೂ ಆಯಾ ಕೃತಿಗಳಲ್ಲಿನ ಪಾತ್ರಗಳ ಒಂದೆರಡು ಮಾತುಗಳ ಮೂಲಕ ಮಿಂಚುತ್ತದೆ ಅಷ್ಟೆ. ಜಿಜ್ಞಾಸೆಯನ್ನು ದೀರ್ಘವಾಗಿ ಚರ್ಚೆಗಳ ಮೂಲಕ, ಭೈರಪ್ಪನವರ "ವಂಶವೃಕ್ಷ", "ದೂರ ಸರಿದವರು" ಕೃತಿಗಳಲ್ಲಿ ಆಗುವಂತೆ, ಕಾರಂತರ "ಮೈಮನಗಳ ಸುಳಿಯಲ್ಲಿ", "ಮೂಕಜ್ಜಿಯ ಕನಸುಗಳು", "ಅಳಿದ ಮೇಲೆ", ಕೃತಿಗಳಲ್ಲಿ ಆಗುವಂತೆ ಅವರ ಕಾದಂಬರಿಗಳಲ್ಲಿ ಕಾಣಬಹುದು. ಓದುಗನನ್ನು ಕಾದಂಬರಿ ಓದುತ್ತಿರುವಾಗಲೇ ಯೋಚಿಸುತ್ತಾ ಕೂರುವಂತೆ ಮಾಡುವುದು "ಡಾ। ನಾ.ಮೊಗಸಾಲೆಯವರ ರೀತಿಯಲ್ಲ, ಕಥೆಯ ಬೆಳವಣಿಗೆಯಾಗುತ್ತಾ ಹೋಗಿ ಮುಕ್ತಾಯವಾದಾಗ ನಡೆದ ಅಷ್ಟೂ ಘಟನೆ ಮತ್ತು ಫಲಿತಾಂಶವನ್ನು ಎದುರಿಗಿಟ್ಟುಕೊಂಡು ಓದುಗ ಯೋಚಿಸಬೇಕು ಎನ್ನುವುದು ಈ ಲೇಖಕರ ಉದ್ದೇಶವಾಗಿರುವಂತೆ ಕಾಣುತ್ತದೆ"(1). ಇದೇ ಮಾರ್ಗವನ್ನನುಸರಿಸಿದ ಇನ್ನೂ ಕೆಲವು ಯಶಸ್ವೀ ಕಾದಂಬರಿಕಾರರಿದ್ದಾರೆ. ರಂ.ಶಾ. ರಾವ್‌ಬಹದ್ದೂರ್, ತೇಜಸ್ವಿಯವರಲ್ಲಿ ಕಥೆಯ ಘಟನೆಗಳು ಮತ್ತು ಅದು ಪ್ರಚೋದಿಸುವ ಚಿಂತನೆಗಳು ಒಟ್ಟೊಟ್ಟಿಗೆ ಸಾಗುತ್ತವೆ.

ಇವರ ಬಹುತೇಕ ಕೃತಿಗಳೂ ದಟ್ಟ ಗ್ರಾಮೀಣ ಪರಿಸರದಲ್ಲಿ ನಡೆಯುತ್ತವೆ. ಸಹಜವಾಗಿ ಲೇಖರಿಗೆ ಚೆನ್ನಾಗಿ ಗೊತ್ತಿರುವ ಪರಿಸರದಲ್ಲಿ. "ಡಾ। ಮೊಗಸಾಲೆಯವರ ಬಹುತೇಕ ಕಾದಂಬರಿಗಳ ಮುಖ್ಯ ವಸ್ತು 'ಹೋರಾಟ', ಇದು ಬಹುಶ: ಅವರಿಗೇ ತಿಳಿದಿಲ್ಲವೆಂದು ಕಾಣುತ್ತದೆ. ಕೆಲವು ಕೃತಿಗಳಲ್ಲಿ ಈ ಹೋರಾಟದ ಪಾತ್ರಗಳ ಅಂತರಂಗದಲ್ಲಿ ಮೌನ ಯುದ್ದವಾಗಿ ನಡೆದರೆ ಇನ್ನು ಕೆಲವುದರಲ್ಲಿ ಅದು ಬಹಿರಂಗವಾಗಿ ನಡೆಯುತ್ತದೆ. ಮತ್ತೆ ಕೆಲವು ಕಾದಂಬರಿಗಳಲ್ಲಿ ಈ ಎರಡೂ ಬಗೆಯ ಹೋರಾಟಗಳು ಕಂಡು ಬರುತ್ತದೆ"(2). 'ಅನಂತ', 'ನನ್ನದಲ್ಲಿದ್ದು' ಇವುಗಳಲ್ಲಿರುವುದು ಪಾತ್ರಗಳ ಅಂತರಂಗದ ಹೋರಾಟ, 'ಮಣ್ಣಿನ ಮಕ್ಕಳು' ಮತ್ತು 'ಉಲ್ಲಂಘನೆ' ಯಂಥ ಕೃತಿಗಳಲ್ಲಿ ಅದು ಬಹಿರಂಗದಲ್ಲಿ ವ್ಯಕ್ತವಾಗುವ ಹೋರಾಟ, 'ಕನಸಿನ ಬಳ್ಳಿ', 'ತೊಟ್ಟಿ', ಯಂಥ ಕಾದಂಬರಿಗಳಲ್ಲಿ ಈ ಎರಡೂ ಬಗೆಯ ಹೋರಾಟ ಚಿತ್ರಿತವಾಗಿದೆ.

ತಾತ್ವಿಕ ಜಿಜ್ಞಾಸೆಯೊಂದನ್ನು ಮಂಡಿಸುವುದು ಅಥವಾ ಮಂಡಿಸದಿರುವುದು ಕಾದಂಬರಿಯೊಂದರ ಗುಣಾತ್ಮಕ ಭಾಗವಾಗಿರಲೇಬೇಕಿಲ್ಲ ಎನ್ನುವುದಿದೆ, ಆದರೆ ಯಾವುದೇ ಕಥೆ /

ಕಾದಂಬರಿ ಒಂದನ್ನು 'ಧ್ವನಿ'ಸಬೇಕು. ಅದು ಓದುಗರನ್ನು ಚಿಂತನೆಗೆ ಹೆಚ್ಚಬೇಕು. ಹಾಗಗದಿದ್ದರೆ ಆ ಕೃತಿ ಓದುಗನಿಗೆ ಏನನ್ನೂ ಕಾಣಿಸುವುದಿಲ್ಲ ಎಂದರ್ಥ. ಅಂಥ ಕೃತಿ ಓದುಗನಿಗೆ ಮುಖ್ಯ ವೆನಿಸುವುದಿಲ್ಲ.

ಕರ್ನಾಟಕದ ಕಾರ್ಕಳ ಸಮೀಪದ ಕಾಂತಾವರದಲ್ಲಿ ನೆಲೆ ನಿಂತು, 'ಕಾಂತಾವರದಲ್ಲಿ ರೈತ ಯುವಕ ವೃಂದ' [1966], 'ಕಾಂತಾವರ' ಕನ್ನಡ ಸಂಘ' [1976], 'ಅಲ್ಲಮ ಪ್ರಭು ಪೀಠ', ಮೂಡಬಿದ್ರೆಯ 'ವರ್ಧಮಾನ ಪ್ರಶಸ್ತಿ ಪೀಠ' [1979] ದ ಮೂಲಕ ಸಾಹಿತ್ಯ ಪರಿಚಾರಿಕೆಯನ್ನು ವೃತವಾಗಿಸಿಕೊಂಡ ಸಂಘಟಿಕ. "ಜೀವಮಾನದುದ್ದಕ್ಕೂ ಹಳ್ಳಿಯನ್ನೇ ಆಶ್ರಯಿಸಿ ಹಳ್ಳಿಯ ಮಂದಿಯ ಮನಗೆದ್ದ ವೈದ್ಯ, ಬಹು ಸಂಸ್ಕೃತಿಯನ್ನು ಜೀವವೈವಿಧ್ಯತೆಯನ್ನು ಉಳಿಸಲು ಹೆಣಗಾಡುತ್ತಿರುವ ಸಾಹಸಿ ಡಾ। ನಾ.ಮೊಗಸಾಲೆಯವರು" (3).

**ಡಾ। ನಾ.ಮೊಗಸಾಲೆಯವರಿಗೆ ಸಂದಿರುವ ಪ್ರಶಸ್ತಿ ಮತ್ತು ಸನ್ಮಾನಗಳು :**

- ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಮೂರು ಬಾರಿ ಅವರ ಸಾಹಿತ್ಯ ಕೃತಿಗಳಿಗೆ ಪುಸ್ತಕ ಬಹುಮಾನ ಬಂದಿದೆ.
- 'ನನ್ನದಲ್ಲಿದ್ದು' ಕಾದಂಬರಿಗೆ – [1977] ಮತ್ತು 'ಇದಲ್ಲ ಇದಲ್ಲ' ಕವನ ಸಂಗ್ರಹ [2003] ಇವುಗಳಿಗೆ 'ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ' ಸಂದಿದೆ.
- ಸಾಹಿತ್ಯಕ – ಸಾಂಸ್ಕೃತಿಕ ಸಾಧನೆಗಳಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ [2004] ದೊರಕಿದೆ.
- ಉಲ್ಲಂಘನೆ ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ 2008ರ ಸಾಲಿನ ಶ್ರೇಷ್ಠ ಕಾದಂಬರಿ ಎಂಬ ಬಹುಮಾನವೂ ಬಂದಿದೆ.
- ಖಾಸಗಿಯಾದ ಹತ್ತಾರು ಪ್ರಶಸ್ತಿಗಳಿಂದ ಅವರು ಪುರಸ್ಕೃತರಾಗಿದ್ದಾರೆ.

  ಕಡೆಂಗೋಡ್ಲು, ದಿನಕರ ದೇಸಾಯಿ, ಡಿ.ಎಸ್.ಕರ್ಕಿ, ಮಾಸ್ತಿ, ಶಿವರಾಮ ಕಾರಂತ ಮೊದಲಾದವರ ಹೆಸರಿನ ಹದಿನೈದಕ್ಕೂ ಹೆಚ್ಚು ಪ್ರಶಸ್ತಿಗಳು ಬಂದಿವೆ. ಉಲ್ಲಂಘನೆ ಕಾದಂಬರಿಗೆ ಶಿವಮೊಗ್ಗ ಕರ್ನಾಟಕ ಸಂಘವು ಡಾ। ಕುವೆಂಪು ಪ್ರಶಸ್ತಿ, ಮೈಸೂರಿನ ಚದುರಂಗ ಪ್ರತಿಷ್ಠಾನವು ಚದುರಂಗ ಪ್ರಶಸ್ತಿ, ಬೆಂಗಳೂರಿನ ಸೂರ್ಯ ನಾರಾಯಣ ಚಡಗ ಪ್ರತಿಷ್ಠಾನವು ಚಡಗ ಪ್ರಶಸ್ತಿ ನೀಡಿ ಗೌರವಿಸಿದೆ.

**ಸಾಧನೆಗಳು :**

ಕಾಂತಾವರ ಕನ್ನಡ ಸಂಘದಿಂದ 'ಮುದ್ದಣ' ಕಾವ್ಯ ಪ್ರಶಸ್ತಿ, 'ಕಾಂತಾವರ ಪುರಸ್ಕಾರ', 'ಸುವರ್ಣರಮಗ ಸನ್ಮಾನ್' ಮತ್ತು 'ವರ್ಧಮಾನ ಪ್ರಶಸ್ತಿ' ಪೀಠದಿಂದ 'ವರ್ಧಮಾನ ಸಾಹಿತ್ಯ ಪುರಸ್ಕಾರಗಳು – ನೀಡುವಲ್ಲಿ ಗುರುತರ ಜವಾಬ್ದಾರಿ. ಕಾಂತಾವರ ಕನ್ನಡ ಸಂಘದಿಂದ ಐವತ್ತಕ್ಕೂ ಹೆಚ್ಚು ಗ್ರಂಥಗಳ ಪ್ರಕಟಣೆ, ' ನಾಡಿಗೆ ನಮಸ್ಕಾರ' ಮೊಲಿಕೆಯಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಗಣನೀಯ ಸಾಹಿತ್ಯಕ – ಸಾಂಸ್ಕೃತಿಕ ಕೊಡುಗೆಯಿತ್ತವರನ್ನು ಗುರುತಿಸಿ ಪರಿಚಯಿಸುವ ಗ್ರಂಥಗಳ ಪ್ರಕಾಶನ ಸರ್ಕಾರದ ಹನ್ನೆರಡು ಲಕ್ಷ ಧನ ಸಹಾಯದಿಂದ ಇಪ್ಪತ್ತೈದು ಲಕ್ಷ ರೂ.ಗಳ ವೆಚ್ಚದಲ್ಲಿ ಕಾಂತಾವರದಲ್ಲಿ ಕರ್ನಾಟಕ ಏಕೀಕರಣದ ನೇತಾರ ಕೆ.ಬಿ.ಜಿನರಾಜ ಹೆಗ್ಡೆಯವರ ಜನ್ಮ ಶತಮಾನೋತ್ಸವದ ನೆನಪಿಗೆ ಕನ್ನಡ ಭವನ ಸ್ಥಾಪನೆ – 2003. ಮಂಗಳೂರು ವಿಶ್ವ ವಿದ್ಯಾನಿಲಯವು 'ತೊಟ್ಟಿ' ಕಾದಂಬರಿಯನ್ನು ಮತ್ತು 'ಬಯಲು ಬೆಟ್ಟ' ಆತ್ಮಕತೆಯನ್ನು ಪಾಠವಾಗಿ ಗೌರವಿಸಿದ ಹಿರಿಮೆ ಸಂದಿದೆ. ಪ್ರೌಢಶಿಕ್ಷಣ ಪಠ್ಯಗಳಲ್ಲೂ ಅವರ ಕಥೆ, ಕವನ, ಕಾದಂಬರಿಗಳು, ಅಭ್ಯಾಸಕ್ಕೆ ನಿಗದಿಗೊಂಡಿವೆ. 'ಮೊಗಸಾಲೆ', 'ಆಯಸ್ಕಾಂತಾವರ' ಎಂಬ ಎರಡು ಅಭಿನಂದನ ಗ್ರಂಥಗಳು ಅವರಿಗೆ ಅರ್ಪಿಸಲ್ಪಟ್ಟಿವೆ. ಬೆಳಗೋಡು ರಮೇಶಭಟ್ಟರು 'ಮೊಗಸಾಲೆಯ ಮುಖಾಂತರ' ಎಂಬ ಮಿಶ್ರ ಸಮ್ಮಿತೆ [ಜೀವನ ಚರಿತ್ರೆ]ಯನ್ನು ಪ್ರಕಟಿಸಿದ್ದಾರೆ. ಅವರ ಕಾದಂಬರಿ, ಕಥೆ, ಕವನಗಳಲ್ಲಿ ಕೆಲವು, ಹಿಂದಿ, ಇಂಗ್ಲೀಷ್, ತೆಲುಗು, ಮರಾಠಿ ಭಾಷೆಗಳಿಗೆ ಅನುವಾದಗೊಂಡಿವೆ. ಶ್ರೀ ಮಾಧವರಾವ್ ಮೂಡುಕೊಣಾಜಿ ಅವರು 'ಮೊಗಸಾಲೆ – ಬದುಕು ಬರಹ' ಎಂಬ ಮಹಾಪ್ರಬಂಧ ರಚಿಸಿ ಮೈಸೂರು ಮುಕ್ತ ವಿ.ವಿ.ಯಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಪುತ್ತೂರಿನ ಸೆಂಟ್ ಫಿಲೋಮಿನಾ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕಿ ಶ್ರೀಮತಿ ಹರಿಣಾಕ್ಷಿ ಎಂ.ಡಿ. ಅವರು ಉಲ್ಲಂಘನೆ ಕಾದಂಬರಿಯಲ್ಲಿ 'ಮಾತೃರೂಪಿ ಸಂಸ್ಕೃತಿಯ ಸ್ತ್ರೀ ಕೇಂದ್ರಿತ ಸವಾಲುಗಳು' ಎಂಬ ಸಂಶೋಧನಾ ಪ್ರಬಂಧವನ್ನು ರಚಿಸಿ ಹಂಪಿ ವಿಶ್ವವಿದ್ಯಾಲಯದಿಂದ ಎಂ.ಫಿಲ್ ಪದವಿ ಪಡೆದಿದ್ದಾರೆ. ಉಡುಪಿ ಜಿಲ್ಲಾ ಶಿಕ್ಷಣ ಇಲಾಖೆಯ ಸಂಪನ್ಮೂಲ ವ್ಯಕ್ತಿ ಶ್ರೀ ನೀಲಾವರ ಸುರೇಂದ್ರ ಅಡಿಗರು 'ಉಲ್ಲಂಘನೆ ಸೀಮೋಲ್ಲಂಘನೆ : ಸಹೃದಯ' ಓದು ಎಂಬ ಕೃತಿ ರಚಿಸಿದ್ದಾರೆ. ವಿಮರ್ಶಕ ಶ್ರೀ ದೇಶಪಾಂಡೆ ಸುಬ್ಬರಾಯರು 'ಉಲ್ಲಂಘನೆ'ಯ ಕುರಿತಾಗಿ ವಿಮರ್ಶಾತ್ಮಕ ಕೃತಿಯೊಂದನ್ನು ಹೊರ ತಂದಿದ್ದಾರೆ. ವಿಜಯಕರ್ನಾಟಕ ಪ್ರತಿಕೆಯ ಮಂಗಳೂರು ವಿಭಾಗದ ಸ್ಥಾನೀಯ ಸಹ ಸಂಪಾದಕರಲ್ಲಿ ಒಬ್ಬರಾದ ಡಾ। ಸೀತಾಲಕ್ಷ್ಮಿ ಕರ್ಕಿಕೋಡ್ ಅವರು 'ಉಲ್ಲಂಘನೆ'ಯ ಕುರಿತು ಬಂದ ವಿವಿಧ ಲೇಖರ ಬರಹಗಳನ್ನು ಸಂಗ್ರಹಿಸಿ 'ಉಲ್ಲಂಘನೆ' ಆಕೃತಿ ಆಶಯ' ಎಂಬ ಕೃತಿಯೊಂದನ್ನು ಹೊರತಂದಿದ್ದಾರೆ.

- ಪಾಟ್ಲಾದಲ್ಲಿ ನಡೆದ ರಾಷ್ಟ್ರೀಯ ಕವಿಗೋಷ್ಠಿಯಲ್ಲಿ ಕನ್ನಡದ ಏಕೈಕ ಪ್ರತಿನಿಧಿಯಾಗಿ ಭಾಗವಹಿಸಿದ್ದರು. [2008].
- 2003ರಲ್ಲಿ ಮೂಡಬಿದ್ರೆಯಲ್ಲಿ ನಡೆದ 74ನೇಯ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಕವಿಗೋಷ್ಟಿಯ ಅಧ್ಯಕ್ಷತೆಯನ್ನು ವಹಿಸಿದ್ದರು.

"ಮೊಗಸಾಲೆಯವರು ಕಾಂತಾವರಕ್ಕೇ 'ಮೊಗಸಾಲೆ' ಯಾದರೆ ಕಾಂತಾವರವು ಮೊಗಸಾಲೆಯವರಿಗೆ 'ಅಯಸ್ಕಾಂತ' ಹಾಗೆಂದೇ ಸಾಹಿತ್ಯ ಸೃಷ್ಟಿ ಮತ್ತು ಪರಿಚಾರಿಕೆಗೆ ಅನನ್ಯ ಭಾಷ್ಯ ಬರೆದ ಹಾಗೆ ಮೊಗಸಾಲೆಯವರು ಇದ್ದಾರೆ ಎನ್ನುವುದೇ ಅವರ ವೈಶಿಷ್ಟ್ಯ" (5).

ಅಡಿ ಟಿಪ್ಪಣಿ

(1). ಡಾ। ನಾ. ಮೊಗಸಾಲೆಯವರ ಮೊಗಸಾಲೆ ಕಾದಂಬರಿ ಸಂಪುಟ-2 ಪುಟ-2

(2). ಡಾ। ನಾ. ಮೊಗಸಾಲೆಯವರ ಮೊಗಸಾಲೆ ಕಾದಂಬರಿ ಸಂಪುಟ-1 ಪುಟ-13

(3). ಡಾ। ನಾ. ಮೊಗಸಾಲೆಯವರ ಮೊಗಸಾಲೆ ಕಾದಂಬರಿ ಸಂಪುಟ-2 ಪುಟ-6

(4). ಡಾ। ನಾ. ಮೊಗಸಾಲೆಯವರ ಮೊಗಸಾಲೆ ಕಾದಂಬರಿ ಸಂಪುಟ-1 ಪುಟ-1

(5). ಡಾ। ನಾ. ಮೊಗಸಾಲೆಯವರ ಉಲಂಘನೆ ಕಾದಂಬರಿ ಪುಟ-4

# ಅಧ್ಯಾಯ-3

## ಅನಂತ ಮತ್ತು ಕನಸಿನ ಬಳ್ಳಿ ಕಾದಂಬರಿಗಳಲ್ಲಿ ಬರುವ ಪಾತ್ರ ಪರಿಚಯ

ಕಾದಂಬರಿ ಸಣ್ಣಕತೆ, ನಾಟಕಗಳಲ್ಲಿ ಪಾತ್ರಗಳು ಬಹಳ ಮುಖ್ಯ. ಪಾತ್ರಗಳ ಮೂಲಕ ಲೇಖಕ ತಾನು ಹೇಳ ಹೋರಟ ವಿಷಯವನ್ನು ಸಮಾಜಕ್ಕೆ ತಿಳಿಸಲು ಓದುಗರಿಗೆ ಮುಟ್ಟುವಂತೆ ಮಾಡಲು ಪ್ರಯತ್ನಿಸುತ್ತಾನೆ. ಪಾತ್ರಗಳ ನಿರೂಪಣೆ ಸಂಭಾಷಣೆ ಎಲ್ಲ ಲೇಖಕನ ಮನಸ್ಥಿತಿಯ ಮೇಲೆ ನಿಂತಿರುತ್ತದೆ. ಲೇಖಕನ ತಾನು ಹೇಳ ಹೋರಟ ವಿಷಯವನ್ನು ಆ ಕಥಾವಸ್ತುವನ್ನು ಪಾತ್ರಗಳ ಮೂಲಕ ಹೇಳಿಸುತ್ತಾನೆ. ಆ ಪಾತ್ರ ಒಳ್ಳೆಯದು ಕೆಟ್ಟದ್ದು ಎಂಬುದು ಮುಖ್ಯವಾಗುವುದಿಲ್ಲ ಅದರ ಸಂಭಾಷಣೆ, ಆ ಪಾತ್ರದ ಮೂಲಕ ಕಥೆಯು ಹೇಗೆ ಮುಂದುವರೆಯುತ್ತದೆ ಕಥೆಯಲ್ಲಿ ಹೇಗೆ ತಿರುವು ಪಡೆಯುತ್ತದೆ ಎಂಬುದು ಮುಖ್ಯವಾಗುತ್ತದೆ. ಪಾತ್ರಗಳು ಚಿಕ್ಕವಾಗಿದ್ದರೂ ಒಂದೊಂದು ಸಲ ಅದು ಓದುಗನ ಮನಸ್ಸಿನಲ್ಲಿ ಉಳಿಯುವಂತೆ ಆಗುತ್ತದೆ. ಸಮಾಜದ ವಸ್ತುವನ್ನೇ ತೆಗೆದುಕೊಂಡು ಕಥೆ ಹೆಣೆಯುತ್ತಾ ಹೋಗುತ್ತಾನೆ. ಬದಲಾವಣೆ ಬೇಕಿದ್ದರ ಅದು ಜನರಿಗೆ ತಿಳಿಸುವಂತೆ ತನ್ನ ಕಥೆಯ ಪಾತ್ರ ಮೂಲಕ ವ್ಯಕ್ತಪಡಿಸುತ್ತಾನೆ. ಅದು ಜನರಿಗೆ ತಲುಪುವ ಸಂದೇಶವಾಗಿರುತ್ತದೆ. ಇದು ಬರಿ ಲೇಖಕನ ಅಭಿಪ್ರಾಯದಂತೆ ಬಳಸಿ ಓದುಗರು ಯೋಚಿಸಿ ನಡೆಯುವುದು ಮುಖ್ಯವಾಗುತ್ತದೆ. ಸಮಾಜದಲ್ಲಿ ನಡೆಯುವ ಒಳ್ಳೆಯ ಮತ್ತು ಕೆಟ್ಟ ಘಟನೆಗಳು ಸಹ ಪಾತ್ರಗಳ ಮೂಲಕ ಬಿಂಬಿಸಲು ಲೇಖಕ ಪ್ರಯತ್ನಿಸುತ್ತಾನೆ.

**ಅನಂತ ಕಾದಂಬರಿಯಲ್ಲಿ ಬರುವ ಪಾತ್ರಗಳು :**

**ಅನಂತ :**

ಕಾಸರಗೋಡು ತಾಲ್ಲೂಕಿನ ಮಂಜೇಶ್ವರ ಗ್ರಾಮದ ಹವ್ಯಕ ಬ್ರಾಹ್ಮಣ ಜಮೀನುದಾರ ದಂಪತಿಗಳು ಮಹಾಬಲಭಟ್ಟ ಮತ್ತು ಸರಸ್ವತಿ ಇವರ ಮಗ ಅನಂತ. ಅನಂತ ಮೈಸೂರಿನಲ್ಲಿ ವೈದ್ಯಕೀಯ ಓದುತ್ತಿದ್ದವನು. ಅನಂತ ಬಾಲ್ಯದಲ್ಲಿ ಅಕ್ಕ ಪಾರ್ವತಿಯ ಮನೆಯಲ್ಲೇ ಇದ್ದು ಶಾಲೆ ಓದಿದವನು. ಅನಂತ ಮತ್ತು ಭಾರತಿ ಒಟ್ಟಿಗೆ ಶಾಲೆಗೆ ಹೋಗುತ್ತಿದ್ದರು. ನಂತರ ಅನಂತ ಉನ್ನತ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದಿರುತ್ತಾನೆ. ಎಳವೆಯ ಸಲುಗೆ ಸಂಬಂಧಗಳು ಹರೆಯದಲ್ಲಿ ಅನುರಾಗವಾಗಿ ಮಾರ್ಪಡುತ್ತದೆ. ಅನಂತ ಭಾರತೀಯ ಮೆಚ್ಚಲು ಕಾರಣ ಭಾರತಿಯ ಸಹಜ

ನಡವಳಿಕೆ, ಮುಗ್ಧತೆ, ನೈಸರ್ಗಿಕ ಚೆಲುವು, ಅನಂತ ಅಕ್ಕನ ಮನೆಯಲ್ಲಿ ಇದ್ದಾಗ ತಾನು ಮತ್ತು ಭಾರತಿ ಒಟ್ಟಿಗೆ ಆಟವಾಡುತ್ತಿದ್ದದು, ಒಟ್ಟಿಗೆ ಎಲ್ಲಾ ಕಡೆ ಓಡಾಡಿಕೊಂಡು ಇದ್ದರು ಅಲ್ಲಿನ ಪರಿಸರ ಕಾಡಿನ ಮಧ್ಯದ ಜಾರುಗಲ್ಲು ಎಲ್ಲ ಕಡೆ ಅನಂತ ಮತ್ತು ಭಾರತಿಯರು ಮಕ್ಕಳ ಸಹಜ ಆಟವಾಡಿಕೊಂಡು ಬೆಳೆದವರು, ಮುಂದೆ ಅನಂತ ಭಾರತಿಯನ್ನು ಮೆಚ್ಚಲು ಕಾರಣ. ಅವರಲ್ಲಿ ಇದ್ದ ಸಂಪ್ರದಾಯವೂ ಒಂದು, ಅಕ್ಕನ ಮಗಳು ಸೊಸೆ, ಮಗಳಿಗೆ ಸಮಾನ ಆದುದರಿಂದ ಮಾವ ಮದುವೆ ಆಗಬಾರದು ಎಂಬ ಸಂಪ್ರದಾಯವಿತ್ತು. ಆದರೆ ಅನಂತ ಮಾವನ ಮಗಳನ್ನು ಹೇಗೆ ಮದುವೆ ಆಗುತ್ತಾರೋ ಅದೇ ರೀತಿ ಸೊಸೆಯನ್ನು ಆಗಬಹುದು ಎಂಬ ನಂಬಿಕೆ ಅವನದು. ಅನಂತ ಚಿಕ್ಕ ವಯಸ್ಸಿನಿಂದಲೂ ಕತೆ ಬರೆಯುತ್ತಿದ್ದನು. ಅನಂತ ಶಾಲಾ ದಿನದಲ್ಲಿ ಬರೆದ ಕತೆ ಪತ್ರಿಕೆಗಳಲ್ಲೂ ಪ್ರಕಟವಾಗಿತ್ತು. ಅನಂತ ತಮ್ಮ ಸಂಪ್ರದಾಯದಲ್ಲಿ ಅಕ್ಕನ ಮಗಳನ್ನು ಮದುವೆಯಾಗಬಾರದು ಎಂಬ ವಿಷಯವನ್ನೇ ಇಟ್ಟುಕೊಂಡು ಕತೆ ಬರೆದು ಅದು ಕರ್ಮವೀರದಲ್ಲೂ ಸಹ ಬಂದಿರುತ್ತದೆ. ಅನಂತನ ಸ್ನೇಹಿತರು ಸಹ ಅದನ್ನು ಓದಿ ಮೆಚ್ಚುಗೆ ಸೂಚಿಸಿರುತ್ತಾರೆ. ಅನಂತನು ಭಾರತಿಗೆ ತಾನು ಬರೆದ ಕತೆ ಹೇಳಿ ಅವಳ ಅಭಿಪ್ರಾಯ ಕೇಳುತ್ತಾನೆ. ಮೈಸೂರಿನ ಕಡೆ ಅಕ್ಕನ ಮಗಳನ್ನು ಮದುವೆಯಾಗುವ ಪದ್ಧತಿ ಇದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆ ಕಾಸರಗೋಡು ಹವ್ಯಕರಲ್ಲಿ ಮಾತ್ರ ಇದು ಸಂಪ್ರದಾಯ ವಿರೋಧಿ ಯಾಕೆ ಎಂದು ಪ್ರಶ್ನಿಸುತ್ತಾನೆ. ಭಾರತಿಯು ಮಾವನನ್ನು ಇಷ್ಟು ಪಡುತ್ತಾಳೆ. ಆದರೆ ಮನೆಯವರ ವಿರೋಧವನ್ನು ಮಾಡಲು ಸಿದ್ದವಿಲ್ಲ. ಅನಂತ ತನ್ನ ತಂದೆ, ತಾಯಿ, ಅಕ್ಕ, ಭಾವ ಎಲ್ಲರನ್ನು ಹೇಗೆ ಒಪ್ಪಿಸಿ ಭಾರತಿಯನ್ನು ಮದುವೆಯಾಗುವುದು, ಹೇಗೆ ವಿಷಯ ಹೇಗೆ ಪ್ರಸ್ತಾಪಿಸುವುದು. ಭಾರತಿ ಮತ್ತು ತನ್ನ ಮದುವೆಯೇ ಅನಂತನಿಗೆ ದೊಡ್ಡ ಸವಾಲಾಯಿತು. ಇವರು ಹೇಳಿದರೆ ಕೇಳುತ್ತಾರೆಯೇ, ಸೊಸೆ ಮಗಳ ಸಮಾನ ನೀನು ಓದಿರುವುದು ಇದನ್ನೇ, ಸಂಪ್ರದಾಯ ಹಾಳು ಮಾಡುತ್ತಿದ್ದೀಯ ಎಂದ್ದೆಲ್ಲ ಹೇಳಬಹುದು, ಹೇಗೆ ಎಲ್ಲರನ್ನು ಒಪ್ಪಿಸಿ ಭಾರತಿಯನ್ನು ಮದುವೆಯಾಗುವುದು, ಭಾರತಿಯನ್ನು ಬಿಟ್ಟು ತಾನು ಬೇರೆ ಯಾವ ಹುಡುಗಿಯನ್ನು ಮದುವೆಯಾಗಲು ಸಾಧ್ಯವಿಲ್ಲ ಎಂದು ಅನಂತನ ಒಳ ಮನಸ್ಸು ನಿರ್ಧರಿಸಿರುತ್ತದೆ. ಕಡೆಗೆ ತನ್ನ ಬಾಲ್ಯ ಗೆಳೆಯ ವೆಂಕಟರಮಣನ ಸಹಾಯ ಪಡೆಯಲು ಯೋಚಿಸಿದ ತನ್ನ ಮತ್ತು ಭಾರತಿಯ ವಿಷಯ ತಿಳಿಸಿ ತನಗೂ ಮತ್ತು ಭಾರತಿಗೂ ಮದುವೆ ಆಗುವಂತೆ ಮಾಡುವುದಕ್ಕೆ ಮನೆಯವರಿಗೆ ತನ್ನ ತಂದೆಯ ಜೊತೆ ವೆಂಕಟರಮಣನ ಮಾತನಾಡಲು ಒಪ್ಪಿಸ ಬೇಕು ಎಂದು ತನ್ನ ಗೆಳೆಯನಿಗೆ ಇರುವ ಎಲ್ಲ ವಿಷಯ ತಿಳಿಸುತ್ತಾನೆ. ಅನಂತ ವೆಂಕಟರಮಣನ ಅನಂತನ ತಂದೆ ಇದಕ್ಕೆ ಒಪ್ಪುತ್ತಾರೆಯೇ, ಒಪ್ಪಿದರು ತಮ್ಮಿಂದ ಪಾಪಕಾರ್ಯವಾಯಿತು ಎಂದು ಕೊರಗುವುದಿಲ್ಲವ, ಏನು ಮಾಡುವುದು ಎಂದು ಯೋಚಿಸಿ ಕೊನೆಗೆ ಅನಂತನ ನೋವನ್ನು ನೋಡಲಾರದೆ ಅನಂತನ ತಂದೆಯ ಜೊತೆ ಮಾತನಾಡಲು ಒಪ್ಪಿಕೊಳ್ಳುತ್ತಾನೆ. ಆದರೆ ವಿಷಯ ತಿಳಿಯುವ ಮೊದಲೇ ಭಾರತಿಯ ನಿಧನವಾಗಿರುತ್ತದೆ. ಕಾರಣ ಭಾರತಿಗೆ ಮದುವೆ

ನಿಶ್ಚಯವಾಗಿರುತ್ತದೆ. ಅನಂತ ಮಾವನಿಗೆ ಮೋಸ ಮಾಡಲು ಆಗದೆ ಅವನನ್ನು ಮರೆಯಲೂ ಆಗದೆ ಅವನ ನಿರ್ಲಿಪ್ತ ಉತ್ತರದಿಂದ ಮೌನದಿಂದ ಭಾರತಿ ಕೆರೆ ಹಾರಿ ಸಾವನಪ್ಪುತ್ತಾಳೆ. ಅನಂತ ಭಾರತಿಯನ್ನು ಮರೆಯಲು ಸಾದ್ಯವಾಗುವುದಿಲ್ಲ, ವ್ಯವಸ್ತೆಯನ್ನು ಎದುರಿಸಲು ಸಿದ್ದನಿದ್ದ. ಆದರೆ ಅವನು ಅಂದು ಕೊಂಡ ಹಾಗೆ ಏನು ನಡೆಯದೆ ಅನಂತನ ಆಸೆ, ಆಸೆಯಾಗಿಯೇ ಉಳಿಯುತ್ತದೆ. ಅನಂತ ಮೈಸೂರಿನ ಕಡೆ ಹೆಜ್ಜೆ ಹಾಕುತ್ತಾನೆ.

ಅನಂತನು ಭಾರತಿಯನ್ನು ಇಷ್ಟಪಟ್ಟರೂ, ಅದಕ್ಕೆ ದೊಡ್ಡವರ ಒಪ್ಪಿಗೆ ಬೇಕು. ಎಲ್ಲರ ಒಪ್ಪಿಗೆಯ ಮೇಲೆ ಮದುವೆಯಾಗಬಯಸುತ್ತಾನೆ. ಅದು ಆಗದೇ ಹೋದರೆ ಭಾರತಿಯ ಮನಸ್ಸಿನಲ್ಲಿ ಏನಿದೆ ಎಂಬುದು ಸ್ಪಷ್ಟವಾದರೆ, ಅವಳ ಒಪ್ಪಿಗೆ ದೊರೆತರೆ ಯಾರನ್ನು ಲೆಕ್ಕಿಸದೆ ಮದುವೆಯಾಗುವ ನಿರ್ಧಾರವನ್ನು ತನ್ನ ಮನಸ್ಸಿನಲ್ಲಿ ಮಾಡಿರುತ್ತಾನೆ. ಆದರೆ ಭಾರತಿಯ ಸಾವು ಅವನ ಎಲ್ಲಾ ಆಸೆ, ಕನಸುಗಳನ್ನು ಒಡೆದಿರುತ್ತದೆ. ಭಾರತಿ ಸಿಗದಿದ್ದರೆ ಅವಳ ನೆನಪಲ್ಲೇ ಜೀವನ ಕಳೆಯುವುದು ಎಂಬ ನಿರ್ಧಾರವನ್ನು ಮೊದಲೇ ಮಾಡಿದ್ದ ಅನಂತ ಅದರಂತೆ ನಡೆಯಲು ಮುಂದಾಗುತ್ತಾನೆ. ಅವರ ಪ್ರೇಮ ಅನಂತವಾಗಿ ಉಳಿಯುವ ಮೂಲಕ ಕಾದಂಬರಿ ಅಂತ್ಯವಾಗಿದೆ.

**ಭಾರತಿ :**

ಈಶ್ವರಭಟ್ಟ ಮತ್ತು ಪಾರ್ವತಿಯ ಮಗಳು ಅನಂತ ಕಾದಂಬರಿಯ ನಾಯಕಿ. ಅನಂತನ ಜೊತೆಯಲ್ಲಿ ಶಾಲೆ ಓದಿದವಳು ಭಾರತಿ. ಅನಂತನು ತನ್ನ ಮೇಲೆ ತೋರಿಸುವ ಪ್ರೀತಿ ಒಲವು ಭಾರತಿಗೂ ಸಹ ತಿಳಿದಿರುತ್ತದೆ. ಅನಂತ ಮತ್ತು ಭಾರತಿ ಬಾಲ್ಯವನ್ನು ಒಟ್ಟಿಗೆ ಕಳೆದಿದ್ದರು. ಭಾರತಿ ಹೆಚ್ಚಿಗೆ ಓದಲು ವ್ಯವಸ್ಥೆಗಳಿಲ್ಲದೆ ಓದು ನಿಲ್ಲಿಸಿದ್ದಳು. ಅನಂತ ರಜೆ ಬಂದಾಗ ಪುತ್ತೂರಿಗೆ ಬರುತ್ತಿದ್ದೆ. ಮೈಸೂರಿನಲ್ಲಿ ಇದ್ದರೂ ಭಾರತಿಯ ಹೆಸರಿಗೆ ಕಾಗದ ಬರೆಯುತ್ತಿದ್ದ ಗೆಳೆಯರ ಜೊತೆಯಲ್ಲಿ ಫೋಟೋ ತೆಗೆಸುವ ಸಂದರ್ಭ ಬಂದಾಗ ತನ್ನ ಪೋಟೋ ತೆಗೆಸಿದ ಅನಂತ ಅದನ್ನು ಭಾರತಿಗಾಗಿ ತಂದು ಕೊಟ್ಟಿದ್ದ. “ಕ್ಯಾಮಾರಾ ಇಲ್ಲಿದ್ದೆ ಸೋತೆ ಭಾರತಿ! ಎನಗನಿನ್ನದೊದೆ ಒಂದು ‘ಸ್ನೇಪ್’ ಹೊಡೆಯಕ್ಕೊ ಹೇಳಿ ಇದ್ದು, ಮೈಸೂರಿಲಿ ಬೇಜಾರು ಅಪ್ಪಗೆ ಒಂದರಿ ನಿನ್ನ ಮೋರೆ ನೋಡಲಾದರೂ ಅಕ್ಕನ್ನೇ?....”(1) ಎಂದು ಭಾರತಿಗೆ ಅನಂತ ಹೇಳಿರುತ್ತಾನೆ. ಅವನ ಬೇಸರ ಕಳೆಯುವಂಥಾದ್ದು ತನ್ನ ಮುಖದಲ್ಲಿ ಏನಿದೆ ಮಾವ ತನ್ನನ್ನು ಖಂಡಿತವಾಗಿಯೂ ಪ್ರೀತಿಸುತ್ತಾನೆಯೇ, ಎಂಬುದು ಭಾರತಿಯ ಒಳಮನಸ್ಸಿನಲ್ಲಿ ಗೊಂದಲ ಸೃಷ್ಟಿ ಮಾಡಿತ್ತು. ಅನಂತ ಊರಿಗೆ ಬಂದರೆ ಭಾರತಿಗೂ ಒಂದು ರೀತಿಯ ತಳಮಳವಾಗುತ್ತಿತ್ತು ಆದರೆ ಅದು ಏನು ಎಂಬುದು ಅವಳಿಗೆ ತಿಳಿದಿರಲಿಲ್ಲ. ನಿದ್ದೆ ಇಲ್ಲದೆ ಒದ್ದಾಡುವುದು, ಏನೇನೋ ಕನಸು, ಕಣ್ಣು ಮುಚ್ಚಿದರೂ ಅವನ ಮುಖ ಕಾಣುವುದು, ತನಗೂ

ಮಾವನ ಮೇಲೆ ಮನಸ್ಸಿದೇಯ, ತಾನು ಅನಂತ ಮಾವನ ಮದುವೆ ಹೇಗೆ ಸಾಧ್ಯ ಎಂದು ತನಗೆ ತಾನೆ ಸವಾಲು ಹಾಕಿಕೊಳ್ಳುತ್ತಿದ್ದಳು ಭಾರತಿ ತನ್ನ ತಂದೆ ಬೇರೆ ಹುಡುಗನ ಜೊತೆ ಮದುವೆ ನಿಶ್ಚಯಿಸಿದಾಗ ತನಗೆ ಇಷ್ಟೆ ವಿಲ್ಲದಿದ್ದರೂ, ಅವಳ ಒಪ್ಪಿಗೆ ಯಾರಿಗೂ ಅಗತ್ಯವಿರುವುದಿಲ್ಲ. ಭಾರತಿಗೆ ಇಷ್ಟವಿದೆಯೋ ಇಲ್ಲವೋ? ಎಂಬ ಒಂದು ಅಭಿಪ್ರಾಯದ ಅವಶ್ಯಕತೆ ಯಾರಿಗೂ ಇರುವುದಿಲ್ಲ. ಭಾರತಿಗೆ ಅನಂತ ತನ್ನನ್ನು ಇಷ್ಟ ಪಡುವುದು ತಾನೂ ಬೇರೆ ಮದುವೆಯಾದರೆ ಬದುಕುತ್ತಾನೋ? ಎಂಬ ಪ್ರಶ್ನೆ ಕಾಡಲಾರಂಭಿಸುತ್ತದೆ. ಮನೆಯವರಿಗೆ ತನ್ನನ್ನು ಪ್ರೀತಿಯಿಂದ ಸಾಕಿದ ತಂದೆ ತಾಯಿ, ಸಂಪ್ರದಾಯಕ್ಕೆ ಎದುರು ನಿಲ್ಲುವ ಧೈರ್ಯ ಭಾರತಿ ಇರುವುದಿಲ್ಲ. ಯೋಚಿಸುತ್ತಿದ್ದಂತೆ ಭಾರತಿಗೆ ಬದುಕಿನಲ್ಲಿ ಶೂನ್ಯತೆಯ ಅರಿವಾಗತೊಡಗಿತು. ತನ್ನ ಹಾಗೂ ಅನಂತ ಮಾವನ ಸಂಬಂಧ ಪ್ರೇಮ ಪ್ರೀತಿ ಎಲ್ಲಾ ಈ ಮದುವೆಯಿಂದಾಗಿ ಮುರಿಯುವುದೋ ಅಲ್ಲದೆ. "ಒಲ್ಲದ ಈ ಮದುವೆಯಿಂದ ತನಗೆ ಸಿಗುವ ಸುಖವಾದರೂ ಏನು? ತಾನು ಶೂನ್ಯದೆಡೆಗೆ ಅಲ್ಲ-ಪೂರ್ಣದೆಡೆಗೆ ಹೋಗಬೇಕು"(2). ಎಂದು ಏನೆಲ್ಲ ಯೋಚಿಸಿದ ಭಾರತಿ, ಅನಂತ ಮಾವನ ಮೌನ, ಆ ನೋಟವೇ ಹೇಳುತ್ತಿತ್ತಲ್ಲ. ಅವನಿಗೆ ಎಷ್ಟು ಬೇಸರವಾಗಿದೆ ಎಂದು ಅವನು ನೀರಿಗೆ ಹಾರಿಕೊಂಡರೇ? ಎಂಬ ಸಂದೇಹ ಭಾರತಿಗೆ ಕಾಡಲಾರಂಭಿಸಿತು ಕೊನೆಗೆ ತಾನೂ ಏಕೆ ನೀರಿಗೆ ಹಾರಿಕೊಳ್ಳಬಾರದು ಎಂದು ಯೋಚನೆ ಮಾಡುತ್ತಾಳೆ. ನಿದ್ದೆಯಲ್ಲಿ ಏನೇನೋ ಕನಸನ್ನು ಕಾಣುತ್ತಾಳೆ ಎಚ್ಚರವಾದಾಗ ದೃಢ ನಿರ್ಧಾರದಲ್ಲಿದ್ದವಳು, ಯಾರಿಗೂ ತಿಳಿಯದ ಹಾಗೆ ಬಾಗಿಲು ತೆರೆದಳು. ಮುಂದಿನದ್ದೆಲ್ಲ ಪ್ರವಾಹದಲ್ಲಿ ತೇಲಿ ಹೋದ ಹಾಗೆ ಭಾರತಿ ಕೆರೆ ಹಾರಿ ಆತ್ಮಹತ್ಯೆ ಮಾಡಿಕೊಂಡಳು.

ಹೀಗೆ ಭಾರತಿ ಅಂತ್ಯವಾಯಿತು ಭಾರತಿ ಮತ್ತು ಅನಂತರ ಪ್ರೇಮ ಹಾಗೆ ಉಳಿಯಿತು. ಇದು ಎರಡು ಮನೆಯವರಿಗೂ ತಿಳಿಯಲಿಲ್ಲ. ತಂದೆ ತಾಯಿ, ಸಂಪ್ರದಾಯದ ಕಟ್ಟು ಕೆಟ್ಟಲೆ ಕಟ್ಟುಬದ್ದ ಭಾರತಿ ತನ್ನ ಮನಸ್ಸಿನಲ್ಲಿ ನಡೆಯುತ್ತಿದ್ದುದ್ದನ್ನು ತನ್ನ ತನ್ನ ಭಾವನೆಗಳನ್ನು ಯಾರೊಂದಿಗೂ ಹೇಳಿಕೊಳ್ಳಲಾಗದ ಕೊನೆಗೆ ಅನಂತನಿಗೂ ಸರಿಯಾದ ರೀತಿ ತನ್ನ ಅಭಿಪ್ರಾಯ ಹೇಳದೆ ತನ್ನ ಸಾವಿನಲ್ಲಿ ಎಲ್ಲ ಪ್ರಶ್ನೆಗಳನ್ನು ಅಡಗಿಸಿಕೊಂಡಲು ಭಾರತಿ ಅವಳ ಸಾವು ಸಹ ಒಂದು ಪ್ರಶ್ನೆಯಾಗೇ ಉಳಿಯಿತು.

**ಈಶ್ವರ ಭಟ್ಟ ಮತ್ತು ಪಾರ್ವತಿ :**

ಭಾರತಿಯ ತಂದೆ, ತಾಯಿ, ಈಶ್ವರ ಭಟ್ಟ ಮಕ್ಕಳಿಗೆ ಒಳ್ಳೆಯ ತಂದೆ, ಹೆಂಡತಿಗೆ ಒಳ್ಳೆಯ ಪತಿ, ಅತ್ತೆ, ಮಾವನಿಗೆ ಒಳ್ಳೆಯ ಅಳಿಯ, ಆದರೆ ಮಗಳ ಮದುವೆಯ ವಿಷಯದಲ್ಲಿ ಮಾತ್ರ ಎಡವುತ್ತಾರೆ. ತನ್ನ ಮಗಳು ಭಾರತಿಗೆ ಒಳ್ಳೆಯ ಕಡೆ ಮದುವೆ ಮಾಡಬೇಕು ಎಂಬ ಕಾರಣಕ್ಕೆ ಅವಳ ಭವಿಷ್ಯ

ಚೆನ್ನಾಗಿರಬೇಕು ತಂದೆಯಾದ ತನ್ನ ಕರ್ತವ್ಯ ಎಂದು ಬಗೆದು ಭಾರತಿಗೆ ಇಷ್ಟ ವಿದೇಯ ಇಲ್ಲವೋ ಎಂಬ ಅವಳ ಅಭಿಪ್ರಾಯಕ್ಕೆ ಬೆಲೆ ಕೊಡುವುದಿಲ್ಲ. ಮೂವತ್ತೈದು ವರ್ಷದ ಎರಡನೇ ಸಂಬಂಧದ ವರನೊಂದಿಗೆ ಮದುವೆ ನಿಶ್ಚಯ ಮಾಡಿರುತ್ತಾರೆ. ಮಗಳ ಮದುವೆ ಆಗಬೇಕು ತಕ್ಕ ಮಟ್ಟಿಗೆ ಅನುಕೂಲವಾಗಿರುವ ವರ ದೊರೆತರೆ ಅದೇ ಭಾಗ್ಯ ಎಂಬ ಭಾವನೆ ಈಶ್ವರ ಭಟ್ಟರದು. ಆದ್ದರಿಂದಲೇ ಭಾರತಿಯ ಮನಸ್ಸಿನಲ್ಲಿ ಏನಿದೆ ಎಂದು ತಿಳಿಯಲು ತಂದೆಯಾದ ಅವರಿಗೆ ಸಾಧ್ಯವಾಗುವುದೇ ಇಲ್ಲ. ಭಾರತಿಯ ಸಾವಿನಲ್ಲಿ ಅಂತ್ಯವಾಗುತ್ತದೆ. ಆಗಲೂ ಅವರಿಗೆ ತಮ್ಮ ಮಗಳ ಸಾವಿಗೆ ಕಾರಣ ಏನು? ಎಂಬುದನು ತಿಳಿಯುವಲ್ಲಿ ವಿಫಲವಾಗಿರುತಾರೆ.

ಪಾರ್ವತಿ ಗೃಹಿಣಿ ತನ್ನ ಮನೆ, ಸಂಸಾರ, ಗಂಡ ಮಕ್ಕಳು ಅದೇ ಅವರಿಗೆ ಸ್ವರ್ಗದಂತೆ ಹೊರ ಪ್ರಪಂಚದ ಬಗ್ಗೆ ಹೆಚ್ಚಿಗೆ ತಿಳಿದವರಲ್ಲ. ತಾವಾಯಿತು ತಮ್ಮ ಕೆಲಸವಾಯಿತು ಎಂದು ಇದ್ದವರು. ಮನೆಯವರ ಸಂತೋಷದಲ್ಲೆ ತಮ್ಮ ಸಂತೋಷ ಕಂಡು, ತಾವೂ ಸಂತೋಷ ಪಡುವ ಜೀವ ಅದು ತಮ್ಮ ಗಂಡ ಮಗಳಿಗೆ ಎರಡನೇ ಸಂಬಂದದ ಮೂವತ್ತೈದು ವರ್ಷದ ವರನೊಂದಿಗೆ ಮದುವೆ ನಿಶ್ಚಿಯಿಸಿರುವುದು ತಿಳಿದು ಸಹ ಏನೋ ಅಭಿಪ್ರಾಯವನ್ನು ಸೂಚಿಸುವುದಿಲ್ಲ. ಎಲ್ಲಾ ಗಂಡಸರಿಗೆ ತಿಳಿದಿರುತ್ತದೆ ಮಗಳ ಯೋಗಕ್ಷೇಮ ಅವರಿಗೂ ಮುಖ್ಯವಾಗಿರುತ್ತದೆ ಎಂಬ ಭಾವನೆ ಆಕೆಯದು. ಇಲ್ಲಿ ಪಾರ್ವತಿಯ ಮುಗ್ದತೆಯ ಅರಿವಾಗುತ್ತದೆ. ತನ್ನ ಮಗಳ ಮದುವೆ ನಿಶ್ಚಯವಾದಾಗ ತನ್ನ ತಂದೆ ತಾಯಿಯ ಅಭಿಪ್ರಾಯದ ಜೊತೆಗೆ ಅನಂತನ ಅಭಿಪ್ರಾಯವೂ ಆಕೆಗೆ ಮುಖ್ಯ. ಆದರೆ ಮಗಳ ಅಭಿಪ್ರಾಯಕ್ಕೆ ಎಲ್ಲಿಯೂ ಬೆಲೆ ಇಲ್ಲ. ತಾಯಿಯಾದ ಆಕೆಯೂ ಮಗಳಿಗೆ ಮದುವೆಗೆ ಒಪ್ಪಿಗೆ ಇದೆಯೇ ಇಲ್ಲವೋ ಎಂಬ ಒಂದು ಮಾತು ಸಹ ಕೇಳುವುದಿಲ್ಲ.

ಇಲ್ಲಿ ಭಾರತಿ ಮತ್ತು ಅನಂತನ ಸಲುಗೆಯನ್ನು ಈಶ್ವರಭಟ್ಟರಾಗಲೀ ಪಾರ್ವತಿಯಾಗಲೀ ಎಲ್ಲಿಯೂ ತಪ್ಪಾಗಿ ಅರ್ಥೈಯಿಸುವುದಿಲ್ಲ. ಚಿಕ್ಕ ವಯಸ್ಸಿನಿಂದ ಒಟ್ಟಿಗೆ ಬೆಳೆದವರು. ಸ್ನೇಹ ಸಲುಗೆಯಿಂದ ಇರುವುದರ ಬಗ್ಗೆ ಎಲ್ಲಿಯೂ ಸಹ ಚರ್ಚೆ ನಡೆಯುವುದಿಲ್ಲ. ಅನಂತ ಮತ್ತು ಭಾರತಿಯರ ಪ್ರೀತಿ ಯಾರಿಗೂ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದೇ ಇಲ್ಲ. ಮಗಳ ಮತ್ತು ಮೈದನ ಬಗ್ಗೆ ಎಲ್ಲಿಯೂ ಕೆಟ್ಟ ಅಭಿಪ್ರಾಯ ಅವರಿಗೆ ಬರುವುದಿಲ್ಲ. ಅವರಿಬ್ಬರಲ್ಲೂ ನಂಬಿಕೆ ಇಟ್ಟ ಜೀವಗಳು ಅವು. ಭಾರತಿಯ ಸಾವೂ ಸಹ ಅವರಿಗೆ ಪ್ರಶ್ನೆಯಾಗೆ ಉಳಿಯುತದೆ. ಈಶ್ವರ ಭಟ್ಟರಿಗೆ ತಮ್ಮ ಮಗಳ ಸಾವಿಗೆ ತಾವೇ ಕಾರಣ ಎಂಬ ಸತ್ಯ ಕೊನೆಯಲ್ಲಿ ಅನ್ನಿಸುತ್ತದೆ. ಆದರೆ ಅಲ್ಲಿಯವರೆಗೆ ಎಲ್ಲವೂ ಮುಗಿದು ಹೋಗಿರುತ್ತದೆ.

**ಶಂಕರ :**

'ಭಾರತಿಯ ತಮ್ಮ ಶಂಕರ ಓದುಗರ ಮನಸ್ಸಿನಲ್ಲಿ ಉಳಿಯುವುದು ಅವನ ಬಾಲ್ಯ ಸಹಜ ಆಟ, ಮಕ್ಕಳ ತುಂಟಾಟಗಳಿಂದ ಶಂಕರ ತನ್ನ ಗೆಳೆಯರ ಜೊತೆಯಲ್ಲಿ ಹುಲಿ ಮತ್ತು ದನದ ಆಟ ಆಡಲು ಅಕ್ಕ ಭಾರತಿಯನ್ನು ಪೀಡಿಸುವುದು, ಶಂಕರನಿಗೆ ಬಾಲ್ಯ ಸಹಜ ತುಂಟಾಟಗಳಿರುತ್ತವೇಯಾ ಹೊರತು ಅಕ್ಕ ಭಾರತಿಯ ಮನಸ್ಸಿನಲ್ಲಿ ಏನಿದೆ, ಅನಂತ ಮಾವನ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವಷ್ಟು ಅವನ ಬುದ್ದಿ ಬೆಳೆದಿರುವುದಿಲ್ಲ. ಭಾರತಿ ಮತ್ತು ಅನಂತನ ಜೊತೆಯಲ್ಲಿ ತಿರುಗಾಡಿದರೂ ಅಲ್ಲಿ ಅವನು ತನ್ನ ಬಾಲ್ಯ ಸಹಜ ಚೇಷ್ಟಯಲ್ಲಿ ತೊಡಗಿರುತಾನೇ ಹೊರತು ಇವರ ಕಡೆ ಅವನ ಗಮನವಿರುವುದಿಲ್ಲ. ಕಥೆ ಪ್ರಾರಂಭ ವಾಗುವುದೇ ಶಂಕರ ತನ್ನ ಸ್ನೇಹಿತರ ಜೊತೆಯಲ್ಲಿ ಹುಲಿ ಮತ್ತು ದನ ಆಟದಿಂದ. ಬಂಡೆಗಲ್ಲಿನಲ್ಲಿ ಆಟ ಆಡಿಕೊಂಡು, ನದಿಯಲ್ಲಿ ಈಜುವುದು ಹೇಗೆ ತನ್ನ ಹುಡುಗಾಟದ ಪಾತ್ರ ಶಂಕರನದ್ದಾಗಿದೆ. ಭಾರತಿ ರಾತ್ರಿ ಎದ್ದು ಕೆರೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಾಗ ಮನೆಯಲ್ಲಿ ಯಾರಿಗೂ ಎಚ್ಚರಿಕೆಯಾಗುವುದೇ ಇಲ್ಲ. "ಶಂಕರನನ್ನು ಈಶ್ವರ ಭಟ್ಟರು ಎಬ್ಬಿಸಿ ಎಲ್ಲಿದ್ದೋ ಅಕ್ಕ? ಎಂದಾಗ ಏನೂ ಅರಿಯದ ಶಂಕರ ಕೋಣೆಯ ಹೊರಗೆ ಇರುವ ತಾಯಿ, ಒಳಗೆ ಕುತೂಹಲದಿಂದ ಪ್ರಶ್ನಿಸುವ ತಂದೆಯನ್ನು ಕಂಡು ಅಚ್ಚರಿಯಿಂದ ಎಂತಾತು ಅಪ್ಪ"(3). ಎಂದು ಕೇಳುತ್ತಾನೆ. ನಿದ್ದೆಯಲಿದ್ದ ಅವನಿಗೆ ಏನು ಅರ್ಥವಾಗದೆ ಪೆಚ್ಚು ಮೊರೆ ಹಾಕಿಕೊಂಡು ಪೀಳಿ ಪೀಳಿ ಕಣ್ಣು ಬಿಡುತ್ತಾನೆ. ಶಂಕರ ಓದುಗರ ಮನಸ್ಸಿನಲ್ಲಿ ಉಳಿಯುವುದು ಅವನ ತುಂಟಾಟಗಳಿಂದ.

**ಮಹಾಬಲಭಟ್ಟ ಮತ್ತು ಸರಸ್ವತಮ್ಮ :**

ಅನಂತ ತಂದೆ ತಾಯಿ ಆನೇಕಲ್ಲಿನ ಹತ್ತಿರದ ಗ್ರಾಮದಲ್ಲಿ ವಾಸವಾಗಿದ್ದರು. ಇವರಿಗೆ ಇಬ್ಬರು ಮಕ್ಕಳು ಪಾರ್ವತಿ ಮತ್ತು ಅನಂತ. ಮಹಾಬಲಭಟ್ಟ ಮತ್ತು ಸರಸ್ವತಮ್ಮ ಸಂಪ್ರದಾಯಸ್ಥರು, ಸರಸ್ವತಮ್ಮ ಗಂಡನಿಗೆ ತಕ್ಕ ಹೆಂಡತಿಯಾಗಿ ನಡೆದುಕೊಳ್ಳುತ್ತಿರುತ್ತಾರೆ. ಮಹಾಬಲಭಟ್ಟರು ಅನಂತನಿಗೆ ವಿದ್ಯಾಭ್ಯಾಸ ಮುಗಿಯಿತು ಮದುವೆ ಮಾಡಬೇಕು ಎಂಬ ಯೋಚನೆಯಲ್ಲಿರುತ್ತಾರೆ. ಆದರೆ ತಮ್ಮ ಮಗನ ಮನಸ್ಸಿನಲ್ಲಿ ಏನಿದೆ ಆತ ತಮ್ಮ ಮೊಮ್ಮಗಳು ಭಾರತಿಯನ್ನು ಪ್ರೀತಿಸುವ ಬಗ್ಗೆಯಾಗಲಿ ಅವರಿಗೆ ತಿಳಿಯುವುದಿಲ್ಲ. ಭಾರತಿ ಮತ್ತು ಅನಂತನ ಸಲುಗೆ, ಸ್ನೇಹಗಳನ್ನು ಅವರು ಎಲ್ಲಿಯೂ ಕೆಟ್ಟದ್ದಾಗಿ ನೋಡುವುದಾಗಲೀ, ಅನುಮಾನ ಪಡುವುದಾಗಲಿ ಮಾಡುವುದಿಲ್ಲ. ಚಿಕ್ಕ ವಯಸ್ಸಿನಿಂದ ಒಟ್ಟಿಗೆ ಬೆಳೆದವು ಸ್ನೇಹದಿಂದಿದ್ದಾರೆ ಎಂಬ ಭಾವನೆ ಅವರದು. ಅದು ಅಲ್ಲದೆ ತಮ್ಮ ಮಕ್ಕಳು ತಮ್ಮ ಸಂಪ್ರದಾಯವನ್ನು, ತಮ್ಮ ನಂಬಿಕೆಯನ್ನು ಎಂದೂ ಸುಳ್ಳು ಮಾಡುವುದಿಲ್ಲ ಎಂಬ ಭರವಸೆಯವರದು. ಅಕ್ಕನ ಮಗಳನ್ನು ಮಾವ ಮದುವೆಯಾದರೆ ಅದು ಪಾಪದ ಕೆಲಸ ಸೊಸೆಯಾದ ಆಕೆ ಮಗಳ ಸಮಾನ ಮಗಳನ್ನು ವರಿಸುವುದು ಪಾಪದ ಕೆಲಸ ಎಂದು ತಲಾತಲತರದಿಂದ ಬಂದಿರುವ ಒಂದು

ನಂಬಿಕೆಯಾಗಿತ್ತು. ಅದನ್ನು ಮುರಿಯಲು ಅವರ ಮನಸ್ಸು ಒಪ್ಪುತ್ತಿರಲಿಲ್ಲ. ಇದನ್ನು ತಿಳಿದ ಭಾರತಿಯು ಅನಂತ ಮಾವನ ಪ್ರೀತಿಯನ್ನು ಒಪ್ಪುವುದು ಅಥವಾ ಮದುವೆಯಾದರೆ ಅದರಿಂದ ತಮ್ಮ ಅಜ್ಜಿ ತಾತನನ್ನು ಕಳೆದು ಕೊಳ್ಳಬೇಕಾಗುತ್ತದೆ ಎಂಬುದು ತಿಳಿದು ಅವಳು ಆ ನಿರ್ಧಾರಕ್ಕೆ ಬರಲಿಲ್ಲ. ಭಾರತಿಗೆ ಗಂಡು ನಿಶ್ಚಯವಾಗಿದೆ ಎಂಬುದು ತಿಳಿದಾಗ ಅದು ಎರಡನೇ ಮದುವೆ ಹುಡುಗನಿಗೆ 35 ವರ್ಷ ಎಂದು ತಿಳಿದರೂ ಸಹ, ಮಹಾಬಲಭಟ್ಟರಾಗಲೀ, ಸರಸ್ವತಮ್ಮನಾಗಲಿ ಏನು ಹೇಳುವುದಿಲ್ಲ. ಜನ ಒಳ್ಳೆಯವರಾಗಿರಬೇಕು, ತಕ್ಕ ಮಟ್ಟಿಗೆ ಅನುಕೂಲವಾಗಿ ಇದು ನಮ್ಮ ಕೂಸನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎಂಬ ಭಾವನೆ ಅವರದು. ಭಾರತಿ ಹೋರಾಡುವಾಗ ಸರಸ್ವತಮ್ಮ "ಗಂಡನ ಮನೇಲಿ ಯಾವಾಗಲೂ ತಗ್ಗಿ ನಡೆ ಮಗಳೇ! ಎರಡೂ ಕುಲಕ್ಕೂ ಒಳ್ಳೆಯ ಹೆಸರು ಒಪ್ಪ ಹಾಗೆ ನಡೆಕ್ಕೊಂಡು ಬಾ..."(4). ಎಂದು ಹೇಳುತ್ತಾರೆ. ಇಲ್ಲೇ ಗಮನಿಸಬಹುದು ಸರಸ್ವತಮ್ಮ ಮುಗ್ದತೆಯು ತಿಳಿಯ ಬಹುದಾಗಿದೆ. ಭಾರತಿಯು ಆತ್ಮಹತ್ಯೆ ಮಾಡಿಕೊಂಡಲು ಎಂದು ತಿಳಿದಾಗ ಇಬ್ಬರಿಗೂ ಅಘಾತವಾಗುತ್ತದೆ. ಬೆಳೆದ ಮೊಮ್ಮಗಳು ಇನ್ನು ಬದುಕಿ ಬಾಳ ಬೇಕಾದವಳು ಏಕೆ? ಹೀಗೆ ಮಾಡಿ ಕೊಂಡಳು ಎಂದು ಕೊರಗುತ್ತಾರೆ. ಆಗಲೂ ಅವರಿಗೆ ನಿಜ ತಿಳಿಯುವುದಿಲ್ಲ. ಅನಂತನ ಪ್ರೀತಿ ಅವರಿಗೆ ಕೊನೆಗೂ ತಿಳಿಯುವುದಿಲ್ಲ. ಅದು ಯಾರಿಗೂ ತಿಳಿಯದೇ ಅನಂತವಾಗೇ ಉಳಿಯುತ್ತದೆ. ತಮ್ಮ ಮಗ ಮೆಚ್ಚಿರುವುದು ಭಾರತಿಯನ್ನು ಎಂಬ ಸ್ವಲ್ಪವೂ ಅನುಮಾನ ಬರುವುದಿಲ್ಲ. ಅವರ ಮುಗ್ದತೆ ಸರಳತೆ, ಅನುಮಾನವಿಲ್ಲದ ಮನಸ್ಸುಗಳು ಮೆಚ್ಚುವಂತಹದು.

**ವೆಂಕಟರಮಣ :**

ಅನಂತನ ಬಾಲ್ಯ ಸ್ನೇಹಿತ ಆನೇಕಲ್ಲಿನ ಗ್ರಾಮದಲ್ಲಿ ವಾಸವಾಗಿದ್ದನು. ಅನಂತ ತನ್ನ ಮತ್ತು ಭಾರತಿಯ ಪ್ರೀತಿಯ ವಿಷಯ ತಮ್ಮ ತಂದೆ, ತಾಯಿಗೆ ತಿಳಿಸಿ ಮದುವೆಗೆ ಒಪ್ಪಿಗೆ ಕೊಡಿಸಬೇಕು ಎಂದು ಕೇಳುತ್ತಾನೆ. ಆದರೆ ವೆಂಕಟರಮಣನಿಗೆ ಇಕ್ಕಟ್ಟಿನ ಪರಿಸ್ಥಿತಿ ಯಾಗುತ್ತದೆ. ತನ್ನ ಸ್ನೇಹಿತನನ್ನು ನೋಯಿಸಲು ಆಗದೆ, ಹಾಗೆ ಅನಂತನ ತಂದೆ ಮಹಾಬಲ ಭಟ್ಟರ ಜೊತೆ ಹೇಗೆ ಹೇಳುವುದು ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡುವ ಪರಿ ಹೇಗೆ ಎಂಬುದು ವೆಂಕಟರಮಣನಿಗೆ ತಿಳಿಯುವುದಿಲ್ಲ. ಅನಂತ ಹೇಳುವ ಮಾತುಗಳಲ್ಲಿ ಕೆಲವು ವಿಚಿತ್ರ, ಕೆಲವು ಸರಿ. ಆದರೆ ತಪ್ಪೇನು ಅನ್ನಿಸದೇ ಇರಲಿಲ್ಲ ವೆಂಕಟರಮಣನಿಗೆ, ಆದರೆ ಮಹಾಬಲ ಭಟ್ಟರು ಒಪ್ಪುತ್ತಾರೆಯೇ ಒಪ್ಪಿದರೂ ಏನೋ ತಮ್ಮಿಂದ ಪಾಪಕಾರ್ಯ ನಡೆದ ಹಾಗೆ ನಾಳೆ ಕಣ್ಣು ಮುಚ್ಚುತ್ತಾರೆ. ಇಲ್ಲವೇ ವೈರಾಗ್ಯ ತಾಳುತ್ತಾರೆ, ಆದರೆ ಏನೇ ಆದರೂ ಅನಂತ ತನ್ನನ್ನು ಬಿಡುವುದಿಲ್ಲ. ಅವಿವಾಹಿತನಾಗಿದ್ದು ತನಗಿಂತ ಎಷ್ಟೋ ಹಿರಿಯರಾದ ಮಹಾಬಲಭಟ್ಟರಲ್ಲಿ ಅನಂತನ ಮದುವೆಯ ವಿಷಯ ತಾನು ಪ್ರಸ್ತಾಪಿಸುವುದು ಎಷ್ಟು ಸರಿಯೋ ತಿಳಿಯದು, ಆದರೆ ಸ್ನೇಹಕ್ಕಾಗಿ ತಾನು ಇದಕ್ಕೆ ಒಪ್ಪಲೇ ಬೇಕು ಎಂದು ಕೊಳ್ಳುತ್ತಾನೆ. ಆದರೆ

ವೆಂಕಟರಮಣನಿಗೆ ಕಷ್ಟಕ್ಕೆ ಇಟ್ಟುಕೊಂಡಿತು ಅನಿಸದಿರಲಿಲ್ಲ, "ಮಹಾಬಲಭಟ್ಟರ ಬಾಯಿಗೆ, ಸಿಲುಕಿದರೆ ತನ್ನ ಎಂತಹ ಬ್ರಹ್ಮಾಸ್ತ್ರಗಳು ನಿಷ್ಫಲವಾಗುವುದು"(5) ಎಂಬ ಅರಿವು ಅವನಿಗೆ ಇತ್ತು. ಹೋಗಿ ಚರ್ಚಿಸಿ, ಕಡೆಗೂ ಒಂದು ನೆಲೆ ಕಾಣಿಸೋಣ ಅಂದರೆ ಮಹಾಬಲ ಭಟ್ಟರು ತಾನೇ ಅನಂತನ ಕಿವಿಯೂದಿ ಹಾಳು ಮಾಡಿರುವನೆಂದೂ ಆರೋಪಿಸಲೂ ಹಿಂಜರಿಯುವರಲ್ಲ. ಅಂತೂ ನಾಯಿಯನ್ನು ನೀರಿಗೆ ಎಳೆದ ಹಾಗೆ ಅನಂತ ತನ್ನನ್ನು ಈ ಸುಳಿಯಲ್ಲಿ ಸಿಕ್ಕಿಸಿ, ಸಜ್ಜುಗುಜ್ಜಾಗಿಸುತ್ತಾನೆಂದು ಅವನ ಮನಸ್ಸು ಹೇಳಿತು. ಅಂತು ವೆಂಕಟರಮಣ ಅನಂತನ ಮನಗೆ ಅವನ ಮದುವೆ ವಿಷಯವನ್ನು ಅವನ ತಂದೆ ತಾಯಿಯ ಹತ್ತಿರ ಹೇಳಲು ಬಂದ. ಮಹಾಬಲಭಟ್ಟರು, ಅನಂತ, ವೆಂಕಟರಮಣ ಎಲ್ಲರೂ ಒಟ್ಟಿಗೆ ಊಟಕ್ಕೆ ಕೂತರು ಊಟದ ಮಧ್ಯೆ ಅನಂತನ ಮದುವೆ ವಿಷಯ ಪ್ರಸ್ತಾವಪಿಸಿ ನಂತರ ಅವನ ಪ್ರೀತಿಯ ವಿಷಯ ತಿಳಿಸುವುದು ಎಂಬ ನಿರ್ಧಾರವಾಗಿತ್ತು. ಮಾತು ಕತೆಗಳಿಂದ ಊಟ ಸಾರಾಗವಾಗಿ ನಡೆಯುತ್ತಿತ್ತು. ಆಗ ಕೃಷ್ಣಭಟ್ಟರ ಆಗಮನ ವಾಯಿತು. ಬೇಗ ಊಟ ಮಾಡಿ ಮುಗಿಸಿದ ಮೂವರಿಗೂ ಒಂದು ದು:ಖದ ವಾರ್ತೆ ಕಾದಿತ್ತು. ಭಾರತಿ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಲು ಎಂಬುದು, ವೆಂಕಟರಮಣ ಹೇಳಬೇಕಾದ ವಿಷಯ ಅವನಲ್ಲೇ ಉಳಿಯಿತು. ತನೂಂದು ಬಗೆದರೆ ದೈವವೂಂದು ಬಗೆದಂತೆ ಎಂಬ ಹಾಗೆ ಆಯಿತು. ವೆಂಕಟರಮಣ ಮನೆಗೆ ವಾಪಸ್ ಆದ.

ಇಲ್ಲಿ ವೆಂಕಟರಮಣನ ಆತ್ಮೀಯ ಸ್ನೇಹ, ಸ್ನೇಹಿತನಿಗಾಗಿ ತನಗೆ ಒಲ್ಲದೆ ಇದ್ದರೂ, ತಪ್ಪು ಎಂದು ತಿಳಿದಿದ್ದರೂ, ಅನಂತನ ಪ್ರೀತಿಯ ವಿಷಯ ಪ್ರಸ್ತಾಪನೆಗೆ ಒಪ್ಪುವುದನ್ನು ನೋಡಿದರೆ ವೆಂಕಟರಮಣನನ ಸ್ನೇಹ ಎಂತಹದು ಎಂದು ತಿಳಿಯುತ್ತದೆ. ಅನಂತನ ವಿಚಾರ ಸರಣಿ ಕೇಳಿದಾಗ ವೆಂಕಟರಮಣನ ಅಕ್ಕನ ಮಗಳನ್ನು ಮದುವೆ ಯಾಗುವುದರಲ್ಲಿ ತಪ್ಪು ಇಲ್ಲ ಅನಿಸಿತು. ಆದರೂ ಅವನ ಮನಸ್ಸು ಒಂದು ಗಟ್ಟಿ ನಿರ್ಧಾರ ಮಾಡುವಲ್ಲಿ ಸೂತಿತ್ತು. ಸ್ನೇಹಿತನ ಅವನ ಸ್ನೇಹಕ್ಕೆ ಬೆಲೆ ಕೊಟ್ಟು ಅವರ ತಂದೆಯ ಜೊತೆ ಮಾತುಕತೆ ಒಪ್ಪುತ್ತಾನೆ.

## ಕನಸಿನ ಬಳ್ಳಿ ಕಾದಂಬರಿಯಲ್ಲಿ ಬರುವ ಪಾತ್ರಗಳು :

### ಸದಾನಂದ :

ಸದಾನಂದ ಮೈಸೂರಿನ ಜನರಲ್ ಆಸ್ಪತ್ರೆಯಲ್ಲಿ ಸರ್ಜನ್ ಆಗಿ ಸೇವೆ ಸಲ್ಲಿಸುತ್ತಿರುತ್ತಾನೆ. ವಸಂತಿಯು ಅಲ್ಲೆ ನರ್ಸ್ ಆಗಿರುತ್ತಾಳೆ. ಅವಳ ಜೀವನದಲ್ಲಿ ಆಗಿರುವ ನೋವೆಲ್ಲ ಸದಾನಂದನಿಗೆ ತಿಳಿದಿರುತ್ತದೆ. ಅವಳ ನಡೆ – ನುಡಿ, ಮುಗ್ದತೆ, ಚೆಲುವಿಗೆ ಮನಸೋತಿರುತ್ತಾನೆ. ಮೊದಲು ಬರಿ ಆಕರ್ಷಣೆ ಎಂದು ತಿಳಿದು, ಅವಳ ಬಗ್ಗೆ ತನ್ನ ಮನಸ್ಸಿನಲ್ಲಿ ಕನಿಕರವಿರಬಹುದು ಎಂದು ಕೊಳ್ಳುತ್ತಾನೆ. ಆದರೆ ತನಗೆ ಅರಿವಿಲ್ಲದೆ ಅವನ ಮನಸ್ಸು ಅವಳನ್ನು ಮೆಚ್ಚಿರುತ್ತದೆ. ಸದಾನಂದನ ತಂದೆ ತಾಯಿ ಬೆಂಗಳೂರಿನಲ್ಲಿ, ತಮ್ಮ ಕೆಲಸದ ನಿಮಿತ್ತ ಕಲ್ಕತ್ತೆಯಲ್ಲಿ ನೆಲೆಸಿರುತ್ತಾರೆ. ಸದಾನಂದನ ತಂದೆ ತಾಯಿ ಅವನಿಗೆ ಮದುವೆ ಮಾಡಲು ನಿಶ್ಚಯಿಸಿದಾಗ, ತನ್ನ ಮತ್ತು ವಸಂತಿಯ ಪ್ರೀತಿಯನ್ನು ಮನೆಯವರಿಗೆ ತಿಳಿಸುತ್ತಾನೆ. ತಂದೆ ತಾಯಿ ಒಪ್ಪುವುದಿಲ್ಲ. ಆಗ ತನ್ನ ಸರ್ಕಾರಿ ನೌಕರಿಗೆ ರಾಜೀನಾಮೆ ನೀಡಿ ತಮ್ಮ ಪೂರ್ವಿಕರ ಊರಾದ ಕೋಳ್ಯೂರುಗೆ ಹೋಗಿ ಅಲ್ಲಿ ಜಮೀನು ಮಾಡಿಸುವುದು ಎಂದು ನಿರ್ಧರಿಸಿ ತನ್ನ ನಿರ್ಧಾರವನ್ನು ತಂದೆ ತಾಯಿಗೂ ಹೇಳಿ ವಸಂತಿಗೂ ತಿಳಿಸಿ ಹಳ್ಳಿಯ ಕಡೆ ಹೊರಡುತ್ತಾನೆ. ಸುಬ್ರಾಯ ಕಾರಂತರು ಇವರ ಜಮೀನು ಮಾಡಿಕೊಂಡಿದ್ದವರು. ಸದಾನಂದನು ಹಳ್ಳಿಗೆ ಬಂದಾಗ ಎಲ್ಲಾ ರೀತಿಯ ಸಹಾಯ ಮಾಡಿ ಅವನಿಗೆ ಸ್ನೇಹ ಹಸ್ತ ನೀಡಿದವರು ಕಾರಂತರು, ಒಬ್ಬ ವೈದ್ಯ ಹೇಗೆ ವೈಜ್ಞಾನಕ ರೀತಿಯಲ್ಲಿ ವ್ಯವಸಾಯ ಮಾಡಬಲ್ಲ ಎಂಬುದನ್ನು ಇಲ್ಲಿ ತಿಳಿಸಿದ್ದಾರೆ. ಅಲ್ಲೆ ಹಳ್ಳಿಯಲ್ಲಿ ಕ್ಲಿನಿಕ್ ತೆರೆದು ಸಹಾಯಕನಾಗಿ ನಿಲ್ಲುತ್ತಾನೆ. ಫಾರ್ಮಕ್ಲಬ್ ಮತ್ತು ಸಹಕಾರಿ ಸೊಸೈಟಿಯನ್ನು ತೆರೆದು ಹಳ್ಳಿಗಳು ನೆರವಾಗುತ್ತಾನೆ. ತನ್ನ ಬುದ್ದಿಶಕ್ತಿಯಿಂದ ವ್ಯವಸಾಯದಲ್ಲೂ ಮುಂದುವರೆಯುತ್ತಾನೆ. ನಗರದಲ್ಲೇ ಬೆಳೆದ ಸದಾನಂದ ಹಳ್ಳಿಗೆ ಹೋಗಿ ಅಲ್ಲಿ ಪ್ರಗತಿ ಸಾಧಿಸಿದುದು, ಈಗಲೂ ಹಳ್ಳಿಯಲ್ಲಿ ಓದಿದವರು ತಮ್ಮ ಜಮೀನು ಬಿಟ್ಟು ನಗರಕ್ಕೆ ಬಂದು ಕೆಲಸ ಹಿಡಿದು ಪರದಾಡುವುದನ್ನು ನೋಡಿದ್ದೇವೆ. ಶ್ರಮ ಮತ್ತು ಆಸೆಯಿಂದ ಯಾವ ಕೆಲಸ ಮಾಡಿದರೂ ಯಶಸ್ಸು ಎಂಬುದನ್ನು ಸದಾನಂದನ ವ್ಯಕ್ತಿತ್ವ ದಿಂದ ನೋಡಬಹುದು. ವಸಂತಿಗೆ ಕಾಗದ ಬರೆಯುತ್ತಿರುತ್ತಾನೆ. ವಸಂತಿ ಒಮ್ಮೆಯಾದರ ಬನ್ನಿ, ನಾವೂ ಇಬ್ಬರೂ ಪ್ರೀತಿಸುವಾಗ ಬೇರೆಯವರ ಅಡ್ಡಿಯಾಕೆ ಮದುವೆಯಾಗೋನ ಎಂದೂ ಕಾಗದದಲ್ಲಿ ಬರೆದರೂ, ತನ್ನ ತಂದೆ ತಾಯಿ ಒಪ್ಪಿಗೆ ಇಲ್ಲದೆ ಅದು ಅಸಾಧ್ಯ ಎಂಬ ದೃಢ ನಿರ್ಧಾರ ಸದಾನಂದನದು. ಇಲ್ಲಿ ಸದಾನಂದನ ವ್ಯಕ್ತಿತ್ವದ ಪರಿಚಯವಾಗುತ್ತದೆ. ಹೆತ್ತವರ ಮಾತಿಗೆ ಬೆಲೆ ಕೊಡುವುದು ಅವರ ಮನಸ್ಸು ನೋವದಂತೆ ನಡೆಯಬೇಕು ತನ್ನ ನಿರ್ಧಾರವೂ ಸಹ ಅಚಲವಾಗಿರುವುದನ್ನು ಗಮನಿಸಬೇಕು. ರಾಘವನಿಗೆ ಅಪಘಾತವಾದ ಮೇಲೆ ತನ್ನ ಜೊತೆಯಲ್ಲಿ ಕರೆತಂದು ಹಳ್ಳಿಯಲ್ಲಿ ಇರಲು ಹೇಳುತ್ತಾನೆ. ಕೊನೆಗೆ ಸದಾನಂದನ ತಂದೆ ತಾಯಿಯೂ ಹಳ್ಳಿಗೆ

ಬರುತ್ತಾರೆ. ವಸಂತಿಯನ್ನು ಮದುವೆಯಾಗಲೂ ಒಪ್ಪಿಗೆ ದೊರೆಯುತ್ತದೆ. ಆದರೆ ಅಷ್ಟರಲ್ಲಿ ವಸಂತಿಯು ಹೃದಯಘಾತದಿಂದ ತೀರಿ ಕೊಂಡಿರುತ್ತಾಳೆ. ತಾನೊಂದು ನೆನೆದರೆ ದೈವವೊಂದೆ ನೆನೆದಂತೆ ಎಂದು ಸದಾನಂದ ಬಾಳಲ್ಲಿ ಆಗುತ್ತದೆ.

ವಸಂತಿಯ ಸಾವಿನಿಂದ ಸದಾನಂದ ಎಲ್ಲಾ ಕಳೆದುಕೊಂಡು ಇನ್ನು ಯಾರಿಗೆ ಬದುಕಬೇಕು ಎಂದು ಹಳ್ಳಿಗೆ ಬಂದರೆ ಕಾರಂತರ ಮಗಳು ಪಾರ್ವತಿಯು ಎದುರಾಗುತ್ತಾಳೆ. ಅವಳ ಕಣ್ಣುಗಳಲ್ಲಿನ ಕಾಂತಿ ಅವಳ ನಗು ಜೀವನ ಇಲ್ಲಿಗೆ ಮುಗಿದಿಲ್ಲ ಇನ್ನು ಇದೆ ಎಂದು ಸದಾನಂದನಿಗೆ ಅನ್ನಿಸುತ್ತದೆ.

ಕಾರಂತರೂ ಜ್ವರದಿಂದ ಸಾಯುವಾಗ ತನ್ನ ಮಗಳು ಪಾರ್ವತಿಯನ್ನು ಸದಾನಂದ ಮದುವೆಯಾಗಬೇಕು ಎಂದು ಕೇಳುತ್ತಾರೆ. ಆದರೆ ಸದಾನಂದನಿಗೆ ಪಾರ್ವತಿಯ ಮೇಲೆ ಅಂತಹ ಯಾವುದೇ ಭಾವನೆಗಳಿರಲಿಲ್ಲ. ಅವಳು ಸುಂದರಿ ಮುಗ್ದೆ, ಅವಳ ನಡೆ, ನುಡಿ, ಮೆಚ್ಚಿರುತ್ತಾನೆ. ಆದರೆ ಅವಳನ್ನು ಮದುವೆಯಾಗುವುದಕ್ಕೆ ಅವನ ಮನಸ್ಸಿನಲ್ಲಿ ವಸಂತಿ ಬಿಟ್ಟು ಬೇರೆಯವರಿಗೆ ಜಾಗವಿರುವುದಿಲ್ಲ. ಆದರೂ ಎಂದಿಗೂ ಸದಾನಂದ ಪಾರ್ವತಿಯ ಜೊತೆ ಅಸಭ್ಯವಾಗಿ ವರ್ತಿಸಲಿಲ್ಲ. ಅವಳ ಬಗ್ಗೆ ಅವನಿಗೆ ಗೌರವವಿರುತ್ತದೆ. ಕಾರಂತರ ಮರಣ ನಂತರ ಅವರ ಕುಟುಂಬದೆ ಬಗ್ಗೆ ತುಂಬಾ ಯೋಚಿಸುತ್ತಾನೆ. ಇದರಲ್ಲಿ ಸದಾನಂದ ತನ್ನ ಆತ್ಮೀಯರ ಬಗ್ಗೆ ತೋರುವ ಕಾಳಜಿಯು ಗಮನಿಸಬಹುದು. ಸದಾನಂದ ವಿದ್ಯಾವಂತ, ವಿನಯವಂತ ಎಲ್ಲಿಯೂ ಅವಿವೇಕಿಯುತವಾಗಿ ನಡೆದುಕೊಳ್ಳುವುದಿಲ್ಲ. ಇದು ಕಾದಂಬರಿಯಲ್ಲಿ ಸದಾನಂದನ ಪಾತ್ರ ವಿಶಿಷ್ಟತೆಗೆ ಉದಾಹರಣೆಯಾಗಿ ನಿಲ್ಲುತ್ತದೆ.

ಸದಾನಂದನ ಮತ್ತೊಂದು ಮೆಚ್ಚುವ ಗುಣ ಎಂದರೆ ತಮ್ಮ ತಾತಾನ ತಂಗಿ ಕಾವೇರಮ್ಮ ಇನ್ನು ಬದುಕಿದ್ದಾರೆ ಎಂಬುದನ್ನು ತಿಳಿದು, ಅವರನ್ನು ನೋಡಿ ತಮ್ಮ ಜೊತೆ ಮೂಡು ಮನೆಯಲ್ಲಿ ಬಂದಿರುವಂತೆ ಒತ್ತಾಯಿಸುವುದು, ಒಮ್ಮೆ ಕಾರಂತರ ಜೊತೆ ಧರ್ಮಸ್ಥಳ ಮೇಳ ನೋಡಲು ಹೋಗಿದ್ದಾಗ ನರಸಿಂಹಮಯ್ಯರನ್ನು ಕಾರಂತರು ಸದಾನಂದನಿಗೆ ಪರಿಚಯಿಸುತ್ತಾರೆ. ಅವರು ತಮ್ಮ ತಾತಾನ ತಂಗಿಯ ಮಗ ಎಂದು ತಿಳಿದಗ, ಸದಾನಂದ ತನ್ನ ತಾತಾನ ರಕ್ತ ಸಂಬಂಧದವರು ಇನ್ನು ಇರುವುದು ತಿಳಿದು ಕಾವೇರಜ್ಜಿಯನ್ನು ನೋಡಲು ಹೋಗುತ್ತಾನೆ. ಆದರೆ, ಸದಾನಂದನ ಆಹ್ವಾನವನ್ನು ಕಾವೇರಜ್ಜಿ ತಿರಸ್ಕರಿಸುತ್ತಾರೆ. ಕೊನೆಗೆ ಕಾವೇರಜ್ಜಿಗೆ ಆರೋಗ್ಯ ಹದಗೆಟ್ಟಿದೆ ಎಂದು ವಿಷಯ ತಿಳಿದು ತಕ್ಷಣ ಎಷ್ಟೇ ದೂರವಾದರೂ ಸರಿ ಎಂದು ರಾತ್ರಿಯೇ ಕಾರಂತರ ಜೊತೆಗೂಡಿ ಕಾವೇರಜ್ಜಿಯ ದರ್ಶನ ಪಡೆಯಲು ಹೊರಡುತ್ತಾನೆ. ಆದರೆ, ಅಜ್ಜಿಯು ಕೊನೆ ಹಂತಕ್ಕೆ ತಲುಪಿದ್ದು, ಅಂದು ರಾತ್ರಿ

ಸಾವನ್ನಪ್ಪುತ್ತಾರೆ. ಎಲ್ಲಾ ಕಾರ್ಯ ಮುಗಿಸಿ ಸದಾನಂದ ಮರಳುತ್ತಾನೆ. ಆಗ ಸದಾನಂದನಿಗೆ ತನ್ನ ತಂದೆಯ ಬಗ್ಗೆ ತುಂಬಾ ಬೇಸರ ವಾಗುತ್ತದೆ. ನಗರಕ್ಕೆ ಹೋದ ಮಾತ್ರಕ್ಕೆ ಎಲ್ಲಾ ಸಂಬಂಧಗಳನ್ನು ಮರೆಯುವುದು ಸರಿಯೇ, ತಮ್ಮ ಜಮೀನನ್ನು ಸಹ ನೋಡಲು ಬರುತ್ತಿರಲಿಲ್ಲ. ಹಳ್ಳಿಯ ಸಂಬಂಧವನ್ನೇ ಕಡಿದು ಕೊಂಡಿದ್ದಾರೆ. ಇದಕ್ಕೆ ತಾಯಿಯೂ ಕಾರಣ ಎಂಬುದು ಸಹ ತಿಳಿದಿತ್ತು. ಹೀಗೆ ಸದಾನಂದ ವ್ಯಕ್ತಿತ್ವ ಚಿತ್ರಿತವಾಗಿದೆ.

**ವಸಂತಿ :**

ವಸಂತಿ ನರ್ಸ್ ಆಗಿ ಜನರಲ್ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾಳೆ. ವಸಂತಿಯ ತಂದೆ ರಾಮರಾಯರು ಹೈಸ್ಕೂಲಿನ ಅಧ್ಯಾಪಕರಾಗಿದ್ದರು. ತಾಯಿ ಗೌರಿ, ವಸಂತಿಯ ಅಣ್ಣ ಮೋಹನ, [ಲಕ್ಷ್ಮಿಯ ಮಗ, ರಾಮರಾಯರ ಮೊದಲ ಹೆಂಡತಿ] ಲಕಿ ಹೋದ ಮೇಲೆ ಗೌರಿಯನ್ನು ವಿವಾಹ ವಾಗಿರುತ್ತಾನೆ. ವಸಂತಿ ಮ್ಯಾಟ್ರಿಕ್ಯುಲೇಷನ್ ಓದುವಾಗ ತಂದೆ ತೀರಿ ಹೋಗುತಾರೆ. ವಸಂತಿ ಓದು ಮುಗಿಸಿದ ನಂತರ ಅಣ್ಣ ಮೋಹನ ಅವಳಿಗೆ ವರಾನ್ವೇಷಣೆಗೆ ತೊಡಗುತ್ತಾನೆ. ಮೋಹನನಿಗೆ ವಸಂತಿಗೆ ಮದುವೆಯಾಗಿ ಹೋದರೆ ಸಾಕು ಎಂಬ ಭಾವನೆಯಿತ್ತು, ಹೊರತು ಅವಳ ಜೀವನ ಚೆನ್ನಾಗಿರಬೇಕು ಸುಖವಾಗಿರಬೇಕು ಎಂಬ ಕಾಳಜಿ ಅವನಿಗಿರಲಿಲ್ಲ. ವಸಂತಿ ಕೆಲಸಕ್ಕೆ ಸೇರಿ ತಾನೂ ಮನೆ ಕಷ್ಟಕ್ಕೆ ಸಹಾಯಕಳಾಗುತ್ತೇನೆ ಎಂದಾಗ, ವಸಂತಿ ತನ್ನನ್ನು ಅಣಕಿಸುವಂತೆ ಅನಿಸಿ ಅದಕ್ಕೂ ಒಪ್ಪಿಗೆ ಕೊಟ್ಟಿರಲಿಲ್ಲ. ಕೊನೆಗೆ ಎಚ್.ಎಂ.ಟಿ.ಯಲ್ಲಿ ನೌಕರನಾಗಿದ್ದ ಸುಂದರನೊಂದಿಗೆ ಮದುವೆ ಆಯಿತು. ಸುಂದರ ಮತ್ತು ವಸಂತಿ ಹನಿಮೂನ್‌ಗೆ ಊಟಿಗೆ ಹೋಗಿದ್ದಾಗ 'ಸ್ವಿಮ್ಮಿಂಗ್ ಪೂಲ್'ನಲ್ಲಿ ಈಜಲು ಹೋದ ಸುಂದರ ಯಾಕೋ ಮೇಲೆ ಬರಲೇ ಇಲ್ಲ, ಆ ಕೊಳದ ನೀರಿನಲ್ಲೆ ಮುಳುಗಿ ಸಾಯುವುದು ಅವನ ವಿಧಿ ನಿಯಮವಾಗಿತ್ತು. ವಸಂತಿಗೆ ಮದುವೆಯಾಗಿ ಹತ್ತು ದಿನಕ್ಕೆ ವೈದವ್ಯ ಬಂದಿತು. ನಂತರ ತನ್ನ ಜೀವನ ಹೇಗೆ ಮುಂದೆ ಎಂದು ತುಂಬ ಯೋಚಿಸಿದಳು. ಪ್ಲಾರೆನ್ಸ್ ನೈಟಿಂಗೇಲ್‌ಳ ಜೀವನ ಚರಿತ್ರೆ ಅವಳ ಮುಂದಿನ ದಾರಿಗೆ ಮಾರ್ಗದರ್ಶನ ವಾಯಿತು. ಮನೆಯಲ್ಲಿ ತಾಯಿಗೆ ಇಷ್ಟವಿಲ್ಲದಿದ್ದರೂ, ಒಪ್ಪಿಸಿ ನರ್ಸ್ ಟ್ರೈನಿಂಗ್‌ಗೆ ಸೇರಿದಳು. "ಸೇವೆ ಎಂದರೆ ಎಲ್ಲವೂ ಒಂದೇ, ಅದು ನರ್ಸ್ ಆಗಲಿ, ಡಾಕ್ಟರೇ ಆಗಲಿ, ಆವೃತ್ತಿ ಸೇವಾ ದೃಷ್ಟಿಯಿಂದ ಕಲಿಯಬೇಕು, ಸೇವೆಯಲ್ಲಿ ಮೇಲು ಕೀಳು ಭೇದವಿಲ್ಲ, ಯಾರೂ ಬೇಕಾದರೂ ತಮ್ಮ ಮನೋ ಸಂತೋಷದಿಂದ ಸೇವೆ ಮಾಡಬಹುದು ಎಂಬುದು ವಸಂತಿಯ ಮನೋಭಿಲಾಷೆಯಾಗಿತ್ತು"(6). ಸದಾನಂದನ ಒಳ್ಳೆಯ ಗುಣಕ್ಕೆ ವಸಂತಿಯು ಅವನನ್ನು ಮೆಚ್ಚುತ್ತಾಳೆ. ವಿಧವೆಗೂ ಪ್ರೇಮಿಸುವ ಹಕ್ಕುಂಟೆ? ತನಗೆ ಪುನರ್‌ವಿವಾಹ ಇಲ್ಲ ಎಂದುದರಿಂದಲೇ ಅಲ್ಲವೇ, ತಾನು ಈ ವೃತ್ತಿಗೆ ಬಂದದ್ದು, ತಾನೇಕೆ ಸ್ವಚ್ಚವಾಗಿರುವ ಈ ಮನಸ್ಸನ್ನು, ಅವನ ವಿಷಯವಾಗಿ ಚಿಂತಿಸಿ ಕೆಡಿಸಿಕೊಳ್ಳಬೇಕು. ತಾನು ದೃಢಮನಸ್ಕಳಾಗಬೇಕು ಎಂದು ಸಹ

ವಸಂತಿಯ ಮನಸ್ಸು ಹೇಳುತ್ತಿತ್ತು. ಸದಾನಂದ ವಸಂತಿಯನ್ನು ತನ್ನನ್ನು ಮದುವೆಯಾಗಲು ಒಪ್ಪಿಗೆ ಕೇಳಿದಾಗ ವಸಂತಿಯು ಒಪ್ಪಿಗೆ ಸೂಚಿಸಿರುತ್ತಾಳೆ. ಆದರೆ ಸದಾನಂದನ ಮನೆಯವರಿಂದ ಒಪ್ಪಿಗೆ ದೊರೆಯುವುದಿಲ್ಲ. ಅವನು ಸರ್ಕಾರಿ ಕೆಲಸಕ್ಕೆ ರಾಜೀನಾಮೆ ನೀಡಿ ತಮ್ಮ ಹಳ್ಳಿಗೆ ಹೋಗುವ ವಿಷಯ ವಸಂತಿಗೆ ತಿಳಿದಾಗ ಅವಳ ಮನಸ್ಸು ಬಹಳ ನೋವಾಗುತ್ತದೆ. ವಸಂತಿಯು ಸದಾನಂದನಿಗೆ ಪತ್ರ ಬರೆಯುತ್ತಿರುತ್ತಾಳೆ. ಅವನು ಮೈಸೂರಿಗೆ ಒಮ್ಮೆ ಬಂದು ಹೋಗಲಿ ಎಂದು ಎಲ್ಲ ಪತ್ರದಲ್ಲೂ ಬರೆದಿರುತ್ತಾಳೆ. "ಆಸ್ಪತ್ರೆಯ ಜೀವನ ಸಪ್ಪೆಯಾಗಿದೆ, ನೀವು ಒಮ್ಮೆಯಾದರೂ ಈ ಕಡೆ ಬರಬಾರದಾ? ಸರ್ವಸ್ವತಂತ್ರರಾದ ನಿಮ್ಮ ಮತ್ತು ನನ್ನ ಮದುವೆಗೆ ಯಾರ ಅಡ್ಡಿ? ಇನ್ನೂ ಏಕೆ ದಿನ ನೂಕುತ್ತೀರಿ"(7). ಎಂದು ಒಂದೆರಡು ಬಾರಿ ಅಲ್ಲ ಅನೇಕ ಬಾರಿ ವಸಂತಿ ಸದಾನಂದನಿಗೆ ಬರೆದ ಪತ್ರದಲ್ಲಿ ಬರೆದಿದ್ದಳು. ಎರಡು ವರ್ಷಗಳಾದರೂ ಸದಾನಂದ ಮತ್ತು ವಸಂತಿಯ ನಡುವೆ ಬರೀ ಪತ್ರ ವ್ಯವಹಾರ ನಡೆದಿತ್ತು, ಸದಾನಂದನ ಮನೆಯವರಿಂದ ಮದುವೆಗೆ ಒಪ್ಪಿಗೆ ಸಿಕ್ಕಾಗ ಆ ವಿಷಯವನ್ನು ವಸಂತಿಗೆ ತಿಳಿಸಲು ಸದಾನಂದ ಮೈಸೂರಿಗೆ ಬರುತ್ತಾನೆ. ಹದಿನೆಂಟು ದಿನಗಳ ಹಿಂದೆ ಹೃದಯಘಾತದಿಂದ ವಸಂತಿಯು ಮರಣ ಹೊಂದಿರುತ್ತಾಳೆ.

ವಸಂತಿಯ ಜೀವನದಲ್ಲಿ ಎಲ್ಲಾ ಒಳ್ಳೆಯದಾಯಿತು ಇನು ಸಂತೋಷವಾಗಿರಬಹುದು ಎನ್ನುವಷ್ಟರಲ್ಲಿಗೆ ದು:ಖದ ಛಾಯೆ ಕಾಣಿಸಿಕೊಳ್ಳತೊಡಗುವುದನ್ನು ಗಮನಿಸಬಹುದು. ಸದಾನಂದನನ್ನು ಮದುವೆಯಾಗಿ ವಸಂತಿ ಜೀವನ ಸುಖವಾಗಿರುತ್ತದೆ ಎಂದು ಕೊಳ್ಳುವಷ್ಟರಲ್ಲಿ ಅವಳ ಜೀವನವೇ ಅಂತ್ಯವಾಯಿತು. ಇದು ಆಕಸ್ಮಿಕ ಹೀಗೆ ನಡೆಯಲಾರದು ಎಂದುಕೊಳ್ಳಲು ಸಾಧ್ಯವಿಲ್ಲ, ಇದು ವಾಸ್ತವ ಸತ್ಯವಾಗಿದೆ. ಸತ್ಯವೂ ಯಾವಾಗಲೂ ಕಠೋರ ಅದನ್ನು ಒಪ್ಪಿಕೊಳ್ಳೂವುದು ಸಹ ಅಷ್ಟೆ ಕಷ್ಟ.

**ನರ್ಸಪ್ಪಯ್ಯ ಮತ್ತು ಸರೋಜಮ್ಮ :**

ಸದಾನಂದನ ತಂದೆ ಮತ್ತು ತಾಯಿ ನರ್ಸಪ್ಪಯ್ಯ ಬೆಂಗಳೂರಿನಲ್ಲಿ ಮೇಜಿಸ್ಟ್ರೇಟ್ ಆಗಿ ಕೆಲಸ ನಿರ್ವಹಿಸುತ್ತಿರುತ್ತಾರೆ. ನರ್ಸಪ್ಪಯ್ಯನವರ ಹುಟ್ಟೂರು ಕೋಳ್ಯೂರು ಕಾಸರಗೋಡು ತಾಲ್ಲೂಕಿನ ಒಂದು ಹಳ್ಳಿ. ತಂದೆ ತೀರಿಕೊಂಡ ಮೇಲೆ ತಾಯಿಯ ಜೊತೆ ಕೆಲಸದ ನಿಮಿತ್ತ ಬೆಂಗಳೂರಿನಲ್ಲಿ ನೆಲೆಸಿ, ಇಲ್ಲಿಯವರೆ ಆದ ಸರೋಜಮ್ಮನನ್ನು ವಿವಾಹವಾಗಿರುತ್ತಾರೆ. ನರ್ಸಪ್ಪಯ್ಯ ಹಳ್ಳಿಯಾಗಲೀ ಅಲ್ಲಿನ ಬಂಧು- ಬಳಗ, ಜಮೀನು ಎಲ್ಲವನ್ನು ಮರೆತವಂತೆ ಬೆಂಗಳೂರಿನವರಾಗಿ ಜೀವನ ಸಾಗಿಸುತ್ತಿರುತ್ತಾರೆ. ಇಬ್ಬರು ಮಕ್ಕಳು ಮೊದಲ ಮಗ ಡಾಕ್ಟರ್ ಸದಾನಂದ, ಎರಡನೇಯವನು ರಾಘವ ಇಂಜಿನಿಯರ್. ಸದಾನಂದ ವಸಂತಿಯನ್ನು ಮದುವೆಯಾಗುತ್ತೇನೆ ಎಂದಾಗ ನರ್ಸಪ್ಪಯ್ಯ ಮತ್ತು ಸರೋಜಮ್ಮ ಇಬ್ಬರು ಒಪ್ಪಿಗೆ ಕೊಡುವುದಿಲ್ಲ. ಕಾರಣ ನರ್ಸ ಆಗಿರುವುದು ಮತ್ತು ವಿಧವೆ. ವಿಧವೆಯಾದ ನರ್ಸನ್ನು

ಮದುವೆ ಯಾದರೆ ನೆರೆಹೊರೆಯವರ ಮುಂದೆ ತಲೆ ತಗ್ಗಿಸಬೇಕಾದಿತು. ಎಲ್ಲರೂ ತಮ್ಮನ್ನು ಆಡಿಕೊಳ್ಳುತ್ತಾರೆ. ಸದಾನಂದ ಯಾಕೆ ಹೀಗೆ ಮಾಡಿದ ತಮ್ಮ ಮಾನ, ಮಾರ್ಯಾದೆಯನ್ನು ಹಾಳು ಮಾಡಿದ ಎಂಬ ಭಾವನೆ ಇಬ್ಬರದು.

ಸರೋಜಮ್ಮ ಬೆಂಗಳೂರಿನಲ್ಲಿ ಹುಟ್ಟಿ ಬೆಳೆದವರು. ಹಳ್ಳಿಯ ಜೀವನ ಅವರಿಗೆ ಇಷ್ಟವಿರುವುದಿಲ್ಲ. ಜೊತೆಗೆ ಗಂಡನನ್ನು ಹಳ್ಳಿಯ ಕಡೆ ಹೋಗದೆ ಹಾಗೆ ಮಾಡಿರುತ್ತಾರೆ. ಸರೋಜಮ್ಮನಿಗೆ ಇಬ್ಬರು ಮಕ್ಕಳನ್ನು ಕಂಡರೂ ಇಷ್ಟ. ಎಲ್ಲರೂ ಒಟ್ಟಿಗೆ ಸೇರಿದಾಗ ವಿಶೇಷವಾದ ಅವರುಗಳಿಗೆ ಇಷ್ಟವಾದ ತಿಂಡಿ ಮಾಡುವುದು ರಾಘವನಿಗೆ ಕಲ್ಕತ್ತದಲ್ಲಿ ಕೆಲಸ, ಅವನಿಗೆ ಅಲ್ಲಿ ಊಟ ತಿಂಡಿಗೆ ತೊಂದರೆ ಯಾಗುತ್ತಿದೆ ಎಂದು ಮದುವೆ ಮಾಡುವ ಯೋಚನೆ ಮಾಡುತ್ತಾರೆ. ಪ್ರತಿ ತಾಯಿಯ ಹಾಗೆ ಸರೋಜಮ್ಮ ತಮ್ಮ ಮಕ್ಕಳಿಗೆ ಒಳ್ಳೆಯ ಕಡೆ ಶ್ರೀಮಂತ ಮನೆಯ ಹುಡುಗಿಯ ಜೊತೆ ಮದುವೆ ಮಾಡಬೇಕು ಎಂಬ ಆಲೋಚನೆ, ಅದಕ್ಕಾಗಿ ಅವರಿಗೆ ಸದಾನಂದ ಮತ್ತು ವಸಂತಿ ಪ್ರೀತಿಯನ್ನು ಒಪ್ಪಲು ಸಾಧ್ಯವಾಗುವುದಿಲ್ಲ. ಬೇರೆಯವರ ಮುಂದೆ ತಮ್ಮ ಅಂತಸ್ತಿಗೆ ಕುಂದು ಎಂಬ ಭಾವನೆಯವರದು. ಆದರೆ ಕೊನೆಯಲ್ಲಿ ಎಲ್ಲದಕ್ಕೂ ಸಿದ್ದವಾಗುವುದು. ಕಾಲದ ಮಹಿಮೆ ಎಂಬುದನ್ನು ತೋರಿಸುತ್ತದೆ.

ನ್ಯಾಯಾಧೀಶರಾದ ನರ್ಸಪ್ಪಯ್ಯನವರೂ ಕೂಡ ತಮ್ಮ ವಿಚಾರ ಸರಣಿ ಬಗ್ಗೆ ಯೋಚಿಸುವುದಿಲ್ಲ. ತಮ್ಮ ಮನದ ಇಂಗಿತ ಸರಿಯೋ? ತಪ್ಪೋ / ಎಂಬ ತರ್ಕಕ್ಕೀ ಸಹ ಎಡೆ ಮಾಡಿ ಕೊಡುವುದಿಲ್ಲ. ಹುಡುಗುಬುದ್ದಿ ಇದು ನಿಜವಾದ ಪ್ರೇಮವೂ ಎಂಬ ಅಭಿಲಾಷೆ ಅವರದಾಗಿತ್ತು. ಸದಾನಂದ ದೂರವಾದರೆ ಇಬ್ಬರು ಬೇರೆ ಯಾಗುತ್ತಾರೆ ಎಂದು ಕೊಂಡಿದ್ದರು. ಆದರೆ ಸದಾನಂದ ಮತ್ತು ವಸಂತಿಯದು ನಿಷ್ಕಲ್ಮಶ ಪ್ರೀತಿ ಎಂದು ಅವರಿಗೆ ಕೊನೆಯವರೆಗೂ ತಿಳಿಯುವುದಿಲ್ಲ. ರಾಘವನ ಅಪಘಾತದಿಂದ ನರ್ಸಪ್ಪಯ್ಯ ಮತ್ತು ಸರೋಜಮ್ಮ ತುಂಬಾ ಮೆತ್ತಗಾಗುತ್ತಾರೆ. ಅವರ ಮಾದಲಿನ ಅಹಂಕಾರ ದೊಡ್ಡಸ್ಥಿಕೆಯಲ ಇಳಿದು ಹೋದಂತ್ತೆ ಮೆತ್ತಗಾಗುತ್ತಾರೆ. ಹಳ್ಳಿಗೆ ಬರಲು ಒಪ್ಪದ ಸರೋಜಮ್ಮ ಇಬ್ಬರು ಮಕ್ಕಳು ಹಳ್ಳಿಯಲ್ಲಿ ನೆಲೆನಿಂತಿದ್ದು, ಗಂಡನೂ ಮಕ್ಕಳನ್ನು ಬಿಟ್ಟಿರಲಾರದೆ, ನಿವೃತ್ತಿಯಾದ ಮೇಲೆ ಬೆಂಗಳೂರಿನ ಐಶಾರಾಮಿ ಜೀವನ ಕಷ್ಟವಾದಾಗ ಮಕ್ಕಳ ಜೊತೆ ಇರುವುದು ಒಳ್ಳೆಯದು ಎಂದು ನಿರ್ಧರಿಸುತ್ತಾರೆ. ಆಗ ಸರೋಜಮ್ಮ ಬೇರೆ ಮಾರ್ಗವಿಲ್ಲದೆ ಹಳ್ಳಿಗೆ ಬರುತ್ತಾರೆ. ಕೊನೆಗೂ ತಮ್ಮ ಮಕ್ಕಳ ಸಂತೋಷ ಮುಖ್ಯ ಎಂಬ ಕಾರಣದಿಂದ ಒಲ್ಲದ ಮನಸ್ಸಿನಿಂದ ಮದುವೆಗೆ ಒಪ್ಪಿಗೆ ಕೊಡುತ್ತಾರೆ.

ನರ್ಸಪ್ಪಯ್ಯನಿಗೆ ತಮ್ಮ ತಪ್ಪಿನ ಅರಿವಾಗಿರುತ್ತೆ. ಜೀವನದಲ್ಲಿ ಘಟನೆಗಳು ಮನುಷ್ಯನನ್ನು ಪರಿಸ್ಥಿತಿಯ ಕೈಗೊಂಬೆ ಮಾಡುತ್ತವೆ ಎಂಬುದನ್ನು ಈ ಪಾತ್ರಗಳ ಮೂಲಕ ಕಾಣಬಹುದು.

**ರಾಘವ :**

ಸದಾನಂದನ ತಮ್ಮ ಕಲ್ಕತ್ತೆಯಲ್ಲಿ ಇಂಜಿನಿಯರ್ ಆಗಿ ಕೆಲಸ ನಿರ್ವಹಿಸುತ್ತಿರುತ್ತಾನೆ. ರಾಘವನನ್ನು ಕಂಡರೆ ಮನೆಯವರಿಗೆಲ್ಲ ಇಷ್ಟ, ಕಾರಣ ಅವನ ತಮಾಷೆ ಗುಣ, ಸದಾನಂದ ಹಳ್ಳಿಗೆ ಹೋಗಿ ಅಲ್ಲಿ ತಮ್ಮ ಜಮೀನು ಅಭಿವೃದ್ಧಿ ಪಡಿಸುತ್ತಿರುವುದು, ಹಣದ ಅಭಾವವಿದೆ ಎಂದು ಪತ್ರ ಬರೆದಾಗ ರಾಘವ ತಾನು ತನ್ನ ಕೈಲಾದ ಸಹಾಯ ಮಾಡುತ್ತೇನೆ ನೀನು ಹಣದ ಬಗ್ಗೆ ಯೋಚನೆ ಮಾಡಬೇಡ ನಿನ್ನ ಎಲ್ಲಾ ಯೋಜನೆಗಳನ್ನು ಕಾರ್ಯಗತಗೊಳಿಸು ಎಂದು ಕಾಗದದ ಜೊತೆಯಲ್ಲಿ ಚೆಕ್ ಅನ್ನು ಕಳುಹಿಸಿರುತ್ತಾನೆ. ಹಾಗೆ ಪ್ರತಿ ತಿಂಗಳು ಕಳುಹಿಸುತ್ತಿರುತ್ತಾನೆ, ಸದಾನಂದ ಎಲ್ಲಾ ಯೋಜನೆಗೂ ತನ್ನ ಪೂರ್ಣ ಬೆಂಬಲವಿದೆ ಎಂದು ಸಹ ತಿಳಿಸಿರುತ್ತಾನೆ. ರಾಘವ ಅಪಘಾತವಾಗಿ ತನ್ನ ಬಲಗಾಲು ಪೂರ್ತಿ ತುಂಡಾಗಿ ಕಾಲು ಕಳೆದುಕೊಂಡು ಅಂಗವಿಕಲನಾಗುತ್ತಾನೆ. ಸದಾನಂದ ತನ್ನ ಜೊತೆ ಹಳ್ಳಿಗೆ ಬಾ ಎಂದಾಗ ಹಳ್ಳಿಗೆ ಬಂದು ಅಣ್ಣನ ಯೋಜನೆ ನೋಡಿ ತಾನು ಕಳುಹಿಸಿದ ಹಣವನ್ನು ಅಣ್ಣ ಎಷ್ಟು ಸದುಪಯೋಗ ಪಡಿಸಿಕೊಂಡಿದ್ದಾನೆ ಎಂದು ತಿಳಿದು ಹೆಮ್ಮೆಪಡುತ್ತಾನೆ. ತಾನೂ ಯರೋದೋ ಕೈ ಕೆಳಗೆ ಕಾಣದ ಊರಿನಲ್ಲಿ ನೌಕರಿ ಮಾಡುವ ಬದಲು ಹಳ್ಳಿಯ ತಮ್ಮ ಜಮೀನಿನ ಬಗ್ಗೆ ಕಾಳಜಿ ವಹಿಸಲಿಲ್ಲವಲ್ಲ ಎಂದು ರಾಘವನಿಗೆ ಅನಿಸದಿರಲಿಲ್ಲ. ತನ್ನ ಕಡೆಯಿಂದ ಹೇಗೆ ಅಣ್ಣನಿಗೆ ಸಹಾಯವಾಗುತ್ತದೆ, ಅದನ್ನು ಮಾಡಿಕೊಂಡು ತನ್ನ ಉಳಿದ ಜೀವನ ಈ ಸುಂದರ ಪರಿಸರದಲ್ಲಿ ಕಳೆಯಬೇಕು ಎಂದು ನಿರ್ಧರಿಸುತ್ತಾನೆ. ರಾಘವ ಅಪಘಾತದಿಂದ ತನ್ನ ಪುರುಷತ್ವವನ್ನು ಕಳೆದುಕೊಂಡಿರುತ್ತಾನೆ. ತಾನು ಮದುವೆಯಾಗಿ ಒಂದು ಹೆಣ್ಣಿನ ಬಾಳು ಹಾಳು ಮಾಡಲು ಸಿದ್ದನಿರುವುದಿಲ್ಲ. ಸದಾನಂದನಿಗೆ ಬುದ್ದಿ ಕಲಿಸಬೇಕು ಎಂದು ತಂದೆ, ತಾಯಿ, ರಾಘವನಿಗೆ ಮೊದಲು ಮದುವೆ ಮಾಡಲು ನಿರ್ಧರಿಸಿ ಅವನ ಒಪ್ಪಿಗೆ ಕೇಳಿದಾಗ, ರಾಘವ ಅಣ್ಣನಿಗೆ ಮದುವೆಯಾಗದೆ ತಾನು ಮದುವೆ ಯಾಗುವುದಿಲ್ಲ ಎಂದು ದೃಢ ನಿರ್ಧಾರದಿಂದ ತಿಳಿಸಿರುತ್ತಾನೆ. ಇಲ್ಲಿ ರಾಘವನ ಒಳ್ಳೆಯ ವ್ಯಕ್ತಿತ್ವದ ಪರಿಚಯವಾಗುತ್ತದೆ. ರಾಘವನ ಮುಂದಾಳತ್ವದಲ್ಲಿ ಸದಾನಂದನ ಮದುವೆಗೆ ಒಪ್ಪಿಗೆಯೂ ದೊರೆಯುತ್ತದೆ.

ಅಣ್ಣ ಮತ್ತು ತಮ್ಮನ ನಡುವಿನ ಪ್ರೀತಿ, ವಿಶ್ವಾಸ ನಂಬಿಕೆಯನ್ನು ತುಂಬ ಮನಸ್ಸಿಗೆ ನಾಟುವಂತೆ ಚಿತ್ರಿಸಿದ್ದಾರೆ. ಅಣ್ಣನಿಗಾಗಿ ತಮ್ಮ, ತಮ್ಮನಿಗಾಗಿ ಅಣ್ಣ ಎಂತಹ ಸಹಾಯ ನೀಡಲು ಸಿದ್ದರಿದ್ದರು. ರಾಘವ ಸದಾನಂದನಿಗೆ ಹಣದ ಸಹಾಯ ಮಾಡುವುದು, ತಮ್ಮನ ಮುಂದಿನ ಭವಿಷ್ಯ ನೆನೆದು ಅಣ್ಣ

ನೋವು ಪಡುವುದು, ಕೊನೆಯವರಿಗೂ ತಾನು ಜೊತೆಗಿರುತ್ತೇನೆ ಎಂಬ ನಂಬಿಕೆಯ ರೀತಿ ತನ್ನ ಜೊತೆಯಲ್ಲಿ ಹಳ್ಳಿಗೆ ಕರೆತರುವುದು, ರಾಘವನ ಭವಿಷ್ಯದಲ್ಲಿ ನೆಲೆ ನಿಲ್ಲುವಂತೆ ಮಾಡುವುದು, ಅಣ್ಣ ಮದುವೆಗೆ ದೊಡ್ಡವರಿಂದ ಒಪ್ಪಿಗೆ ಕೊಡಿಸುವುದು ತಮ್ಮ, ಇದರಿಂದಲೇ ಒಬ್ಬರಿಗೊಬ್ಬರ ಮೇಲೆ ಎಷ್ಟು ಪ್ರೀತಿ, ಆತ್ಮೀಯತೆ ಇದೆ ಎಂಬುದನ್ನು ಕಾಣಬಹುದು.

**ಸುಬ್ರಾಯ ಕಾರಂತರು :**

ನರ್ಸಪ್ಪಯ್ಯನವರ ಪಿತ್ರಾರ್ಜಿತ ಆಸ್ತಿಯನ್ನು ಕೊಳ್ಳೂರಿನಲ್ಲಿ ನೋಡಿಕೊಂಡಿದ್ದವರು ಕಾರಂತರು. ತಮ್ಮ ಜಮೀನಿನ ಜೊತೆಗೆ ನರ್ಸಪ್ಪಯ್ಯನವರ ಜಮೀನು ಸಹ ಮಾಡಿಕೊಂಡು ವರ್ಷಕ್ಕೆ ಬೆಳೆದ ಬೆಳೆಯಲ್ಲಿ ಇತ್ತಿಷ್ಟು ಎಂದು ಗೇಣಿ ನೀಡುತ್ತಿದ್ದರು. ಸುಬ್ರಾಯ ಹೆಂಡತಿ ತುಂಗಮ್ಮ, ಮುವರು ಮಕ್ಕಳು ಪಾರ್ವತಿ, ರಮೇಶ, ಶಿವರಾಮ. ಸದಾನಂದ ಹಳ್ಳಿಗೆ ಬರುತ್ತಾನೆ ಎಂದು ಕಾಗದ ಬರೆದಾಗ ಅದನ್ನು ನೋಡಿ ತುಂಬಾ ಖುಷಿ ಪಟ್ಟರು. ನರ್ಸಪ್ಪಯ್ಯನವರ ಪೀಳಿಗೆ ಮುಂದೆ ಬರಬಹುದು ಎಂಬ ಕಲ್ಪನೆಯೂ ಅವರಿಗೆ ಇರಲಿಲ್ಲ. ಆದರೂ ಸದಾನಂದನ ಆಗಮನ ಅವನು ಇಲ್ಲೆ ನೆಲಸುವ ವಿಷಯ ಸ್ವಂತ ಚಿಕಿತ್ಸಾಲಯವನ್ನು ಊರಲ್ಲೇ ತೆಗೆಯುತ್ತಾನೆ ಎನ್ನುವುದು ತಿಳಿದು ಕಾರಂತರಿಗೆ ಇದರಿಂದಾದರೂ ಹಳ್ಳಿಗರಿಗೆ ಸಹಾಯವಾಗುತ್ತದೆ ಎಂದು ಅಪರಿಮಿತ ಆನಂದವಾಗಿತ್ತು. ಕಾರಂತರ ಮತ್ತು ಸದಾನಂದ ಏನೇ ವಿಷಯವದರೂ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತಿದ್ದರು. ಸದಾನಂದನ ಪ್ರತಿಯೊಂದು ಯೋಜನೆ ರೂಪುಗೊಳ್ಳುವ ಮೊದಲು ಕಾರಂತರ ಜೊತೆ ಅವನು ಆ ವಿಷಯದ ಬಗ್ಗೆ ಚರ್ಚಿಸಿ ಅವರ ಅಭಿಪ್ರಾಯದಂತೆ ಪಡೆಯುತ್ತಿದ್ದ. ಕಾರಂತರೂ ಸದಾನಂದನ ಜೊತೆ ತುಂಬಾ ಆತ್ಮೀಯವಾಗಿದ್ದರೂ ಎಲ್ಲಾ ವಿಷಯವನ್ನು ಸಹ ಅವನೊಂದಿಗೆ ಹಚ್ಚಿಕೊಳ್ಳುತ್ತಿದ್ದರು. ಕಾರಂತರೂ ಹದಿನಾಲ್ಕು ದಿನಗಳು ಜ್ವರದಿಂದ ಮಲಗಿದರು. ಸದಾನಂದ ಅವರಿಗೆ ಎಲ್ಲಾ ರೀತಿ ಶೂಶ್ರುಷೆ ಮಾಡಿದನು. ಆದರೆ ಅವು ಯಾವುದು ಫಲ ನೀಡದೆ ಕಾರಂತರೂ ಮರಣ ಹೊಂದಿದರು. ಕಾರಂತರೂ ತಮ್ಮ ಕೊನೆಯ ಆಸೆ ಎಂದು ಸದಾನಂದನಿಗೆ ತಮ್ಮ ಮಗಳು ಪಾರ್ವತಿಯ ಮದುವೆಯಾಗಬೇಕು ಎಂದು ಕೇಳಿದರು. ತಮ್ಮ ಮಕ್ಕಳು ಮನೆಯನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಸದಾನಂದನಿಗೆ ವಹಿಸಿದರು. ತಾವು ಇನ್ನು ಬದುಕುವುದಿಲ್ಲ ಈ ಜ್ವರ ಕೊನೆಗಾಲದ ಜ್ವರ ಎಂದು ಕೊಂಡಿದ್ದರು. ಕಾರಂತರೂ ಅಂದುಕೊಂಡ ಹಾಗೆ ಆಯಿತು, ಹೆಂಡತಿ ಮಕ್ಕಳನ್ನು ಅನಾಥವಾಗಿ ಮಾಡಿಹೋದರು. ಕಾರಂತರ ಸ್ನೇಹ ಪರತೆ ಸದಾನಂದನಿಗೆ ಅವರು ತೋರುವ ಆತ್ಮೀಯತೆ, ವಿಶ್ವಾಸವನ್ನು ಕಾಣಬಹುದು. ಸದಾನಂದನಿಗೆ ಎಲ್ಲಾ ರೀತಿಯ ಸಹಾಯ ಹಸ್ತ ನೀಡಿದವರು ಕಾರಂತರು. ಕಾರಂತರ ವ್ಯಕ್ತಿತ್ವ ಮನಮುಟ್ಟುವಂತೆ ಚಿತ್ರಿತವಾಗಿದೆ.

**ರಾಮರಾಯರು ಮತ್ತು ಗೌರಿ :**

ರಾಮರಾಯರು ಮತ್ತು ಗೌರಿ ವಸಂತಿಯ ತಂದೆ ತಾಯಿ. ರಾಮರಾಯರು ಹೈಸ್ಕೂಲಿನಲ್ಲಿ ಅಧ್ಯಾಪಕನಾಗಿ ಸೇವೆ ಸಲ್ಲಿಸುತ್ತಿದ್ದರು. ರಾಮರಾಯರ ಮೊದಲು ಹೆಂಡತಿ ಲಕ್ಷ್ಮಿ. ಲಕ್ಷ್ಮಿಯು ಮೋಹನನಿಗೆ ಜನ್ಮವಿತ್ತ ಒಡನೆಯೇ ಇಹ ಲೋಕದ ಋಣ ತೀರಿಸಿಕೊಂಡು ಮಗುವನ್ನು ತಂದೆಯನ್ನು ತಬ್ಬಲಿಯಾಗಿ ಮಾಡಿ ಹೋಗಿದ್ದರು. ನಂತರ ತಮ್ಮ ಸೋದರಿಕೆಯಲ್ಲೇ ಇಪ್ಪತ್ತಾರು ದಾಟಿದರೂ ಮದುವೆಯಾಗದೆ ಇದ್ದ ಗೌರಿಯನ್ನು ರಾಯರು ಮನೆ ತುಂಬಿಸಿಕೊಂಡರು. ಎರಡು ವರ್ಷದ ಮೇಲೆ ಗೌರಿ ವಸಂತಿಗೆ ಜನ್ಮ ನೀಡಿದಳು. ರಾಮರಾಯರಿಗೆ ಮೋಹನನ ಮೇಲೆ ಪ್ರೀತಿ ಇದ್ದರು, ಎಳೆ ಹರೆಯದ ಹೆಂಡತಿಯ ಮೇಲೆ ಪ್ರೀತಿ, ವಸಂತಿಯ ಸರಸ ಆಟಗಳಿಂದ ರಾಯರು ವಸಂತಿಯ ಪಕ್ಷಪಾತಿಗಳಾಗಿದ್ದರು.ಆದರೆ ಗೌರಿಯು ಮೋಹನನ್ನು ತನ್ನ ಮಗನಂತೆ ನೋಡಿಕೊಂಡಿದ್ದರು, ಅವನಿಗೆ ತನ್ನ ಮಕ್ಕಳಂತೆ ಪ್ರೀತಿ ತೋರಿಸುತ್ತಿದ್ದರು. ಗೌರಿಗೆ ಒಂದೆರಡು ಹೆಣ್ಣು ಮಕ್ಕಳಾದವೂ ಹೊರತು ಗಂಡು ಮಕ್ಕಳಾಗಲಿಲ್ಲ. ಇದರಿಂದ ಮೋಹನ ತನ್ನ ಉತ್ತರಾಧಿಕಾರಿಯೆಂಬಂತೆ ಅವನ ವಿದ್ಯಾಭ್ಯಾಸಕ್ಕೆ ಹೆಚ್ಚು ಮಹತ್ವ ಕೊಟ್ಟರು. ರಾಯರು ವಿದ್ಯಾಪಕ್ಷಪಾತಿಗಳಾದುದರಿಂದ ವಸಂತಿಯನ್ನು ಶಾಲೆಗೆ ಹೋಗಲು ಯಾವುದೇ ತೊಂದರೆ ಇರಲಿಲ್ಲ. ವಸಂತಿ ಮ್ಯಾಟ್ರಿಕ್ಯೂಲೇಷನ್ ಓದುತ್ತಿರುವಾಗ ಹಠಾತ್ತನೆ ರಾಯರಿಗೆ ಮೆನೆಂಜೈಟಸ್ ತಗಲಿತು, ಆಸ್ಪತ್ರೆಯಲ್ಲಿ ಕೆಲ ದಿನ ಚಿಕಿತ್ಸೆ ಪಡೆದರೂ ಏನೋ ಪ್ರಯೋಜನವಾಗದೆ ಚಿಕಿತ್ಸೆ ಫಲಕಾರಿಯಾಗದೆ ಕೊನೆಗೊಂದು ದಿನ ಆಸ್ಪತ್ರೆಯಲ್ಲಿ ಅಸುನೀಗಿದರು. ಎಳೆಹರೆಯದ ಹೆಂಡತಿ, ಮೂರು ಹೆಣ್ಣು ಮಕ್ಕಳು ಪ್ರಾಯಕ್ಕೆ ಬಂದ ಮಗ ಮೋಹನ ಎಲ್ಲರನ್ನು ಬಿಟ್ಟು ಹೋದರು. ಗೌರಿ ಗೃಹಿಣಿ ಅವಳಿಗೆ ಹೊರ ಪ್ರಪಂಚದ ಜೊತೆ ಸಂಪರ್ಕ ಕಡಿಮೆ. ಆದರೂ ಮೋಹನ ವಸಂತಿಗೆ ಮದುವೆಯ ವಿಷಯದಲ್ಲಿ ಜವಾಬ್ದಾರಿಯುತವಾಗಿ ನಡೆಯುತ್ತಿಲ್ಲ ಎಂಬುದನ್ನು ತಿಳಿದು ಅವನ ಜೊತೆ ಚರ್ಚಿಸುತ್ತಾರೆ. ವಸಂತಿ ವಿಧವೆಯಾಗಿ ಮನೆ ಸೇರಿದಾಗ ಆಕೆಗೆ ದಿಕ್ಕು ತೋಚುವುದಿಲ್ಲ. ಮಗಳ ಮುಂದಿನ ಜೀವನ ಹೇಗೆ ಎಂಬುದು ಆಕೆಯ ಮುಂದಿನ ದೊಡ್ಡ ಸವಾಲಾಗುತ್ತದೆ. ವಸಂತಿ ನರ್ಸ್ ಟ್ರೈನಿಂಗ್ ಸೇರುತ್ತೇನೆ ಎಂದಾಗ, ಗೌರಿಗೆ ದಂಗು ಬಡಿದಂತಾಯಿತು. ಬ್ರಾಹ್ಮಣರು ನರ್ಸ್ ಕೆಲಸ ಕಲಿಯುವುದೇ, ನರ್ಸಾಗಿ ನಿಮ್ನ ಜಾತಿಯವರಂತೆ ಆಸ್ಪತ್ರೆಯಲ್ಲಿ ದುಡಿಯುವುದೇ ಎಂದು ಹೇಳುತ್ತಾಳೆ. ಕೊನೆಗೆ ಮಗಳ ಮನಸ್ಸಿಗೆ ವಿರುದ್ಧವಾಗಿ ನಡೆಯಲಾಗದೆ ಒಪ್ಪುತ್ತಾಳೆ. ಇದರಿಂದಲೇ ಗೌರಿ ಪ್ರಪಂಚದ ತಿಳಿದವಲಲ್ಲ, ಮುಗ್ಧೆ ಮತ್ತು ಸಂಪ್ರದಾಯದ ರೀತಿ ನೀತಿಗೆ ಕಟ್ಟುಬಿದ್ದವಳು ಎಂಬುದು ತಿಳಿಯುತ್ತದೆ. ಗೌರಿ ಮೋಹನನಿಗೆ ಮಲತಾಯಿಯಾದರೂ ಅವಳು ಅವನನ್ನು ತನ್ನ ಸ್ವಂತ ಮಗನಂತೆ ಪ್ರೀತಿಯಿಂದ ನೋಡಿಕೊಳ್ಳುತ್ತಾಳೆ, ಇದು ಗೌರಿಯ ಸ್ಮರಿಸುವಂತಹ ಗುಣವಾಗಿದೆ.

**ಮೋಹನ :**

ರಾಮರಾಯರು ಮತ್ತು ಲಕ್ಷ್ಮಿಯ ಮಗ ವಸಂತಿಗೆ ಅಣ್ಣ. ಹುಟ್ಟಿ ಕಣ್ಣು ಬಿಡುವಷ್ಟರಲ್ಲಿ ತಾಯಿಯನ್ನು ಕಳೆದು ಕೊಂಡಿದ್ದ, ಎರಡನೇ ತಾಯಿಯಾಗಿ ಗೌರಿ ಬಂದಳು. ಗೌರಿ ಮೋಹನನ್ನು ಮಗನಂತೆ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಳು. ಆದರೆ ಮೋಹನನಿಗೆ ತನ್ನ ಚಿಕ್ಕಮ್ಮ ಮತ್ತು ಅವರ ಮಗಳು ವಸಂತಿಯನ್ನು ಕಂಡರೆ ಆಗುತ್ತಿರಲಿಲ್ಲ. ಕಾರಣ ಅಪ್ಪನಿಗೆ ತನಗಿಂತ ಅವರುಗಳ ಮೇಲೆ ಪ್ರೀತಿ ಹೆಚ್ಚು ಅನಿಸತೊಡಗಿತು. ಆ ಅನಿಸಿಕೆ ಕ್ರಮೇಣ ಬೆಳೆದಂತೆ ವಸಂತಿಯ ಮೇಲೆ ದ್ವೇಷದ ರೂಪವನ್ನು ತಾಳುತ್ತಾ ಬೆಳೆದು ಬಂದು, ತಂದೆಯ ಆಕಸ್ಮಾತ್ ಸಾವಿನಿಂದ ಮೋಹನ ತನ್ನ ವಿದ್ಯಾಭ್ಯಾಸವನ್ನು ಅರ್ಧದಲ್ಲೇ ನಿಲ್ಲಿಸಿ ನೌಕರಿಗೆ ಮೊರೆಹೋದ. ಓದಿದ ಪ್ರಾಯಶ್ಚಿತ್ತಕ್ಕೆ ವಸಂತಿಗೆ ಪರೀಕ್ಷೆಗೆ ಕಟ್ಟಲು ಹೇಳಿ ಮೋಹನ ಅವಳ ವರಾನ್ವೇಷಣೆಗೆ ತೊಡಗಿದ. ತನ್ನ "ಅಲ್ಪ ಸಂಪಾದನೆಯ ತನ್ನದಲ್ಲದೆ ಈ ಹೊಟ್ಟೆ ಹೊರಿಸುವುದೂ ಮೋಹನನಿಗೆ ಬಹಳ ಕಷ್ಟಕ್ಕೆ ಇಟ್ಟುಕೊಂಡಿತು. ವಸಂತಿಯಾದರೂ ಮದುವೆಯಾಗಿ ಹೋದರೆ ಎಷ್ಟೋ ಸುಖ ಅನಿಸಿತು. ತನ್ನ ತಂದೆಗೆ ತನಗಿಂತಲೂ ಹೆಚ್ಚು ಅವಳಲ್ಲಿ ಪ್ರೀತಿ ಇತ್ತು. ಅವರ ಕೊಂಡಾಟದ ಮಗಳು ಅವಳು"(8) ಎಂಬ ಭಾವನೆ ಅವನಿಗೆ. ಮದುವೆ ಮಾಡುವುದು ಮನೆ ಕಟ್ಟುವುದು ಎರಡೂ ಸುಲಭವಲ್ಲ ಎನ್ನುವ ಪ್ರತ್ಯಕ್ಷ ಅನುಭವ ಮೋಹನನಿಗೆ ಆಯಿತು. ಹುಡುಗಿ ಲಕ್ಷಣವಾಗಿದ್ದರೂ, ಚಿನ್ನ ಎಷ್ಟು ಹಾಕುತ್ತೀರಾ, ಎಷ್ಟು ವರದಕ್ಷಿಣೆ ಕೊಡುತ್ತಿರ ಎಂದು ಕೇಳದ ಗಂಡುಗಳು ಅಪರೂಪವಾಗಿರುವಾಗ ತಾನು ಹೇಗೆ ವಸಂತಿಯ ಮದುವೆ ಮಾಡುವುದು ಎಂದು ಯೋಚಿಸ ತೊಡಗಿದ. ಗೌರಿಗೆ ಮೋಹನನಂತೂ ವಸಂತಿಯನ್ನು ದಾಟಿಸುವ ಆಲೋಚನೆಯಲ್ಲಿ ಇದ್ದಾನಷ್ಟೆ ಹೊರತು ತಕ್ಕ ವರಾನ್ವೇಷಣೆಯಲ್ಲಿಲ ಅನಿಸಿತು. ಒಂದು ದಿನ ಆ ವಿಷಯವಾಗಿ ತಾಯಿ ಮಗುವಿಗೆ ಚರ್ಚೆ ನಡೆಯಿತು. ಕೊನೆಗೆ ವಸಂತ ಮಧ್ಯೆ ಬಂದು ಮನೆ ಕಷ್ಟ ತನಗೂ ತಿಳಿದಿದೆ ತಾನು ಕೆಲಸ ಮಾಡಿ ಅಣ್ಣನಿಗೆ ಸಹಾಯ ಮಾಡುತ್ತೇನೆ ಎಂದಾಗ ಮೋಹನನಿಗೆ ಆ ಮಾತು ವಸಂತಿ ತನ್ನನ್ನು ಅಣಕಿಸುವಂತೆ ಅನಿಸಿತು. "ಹ್ಞೂ ಇನ್ನು ಅದೊಂದು ಬಾಕಿ ನೀನು ದುಡಿದು ನಾನು ತಿನ್ನಬೇಕೆಂತಲೋ ಅಪ್ಪ ಸತ್ತ ಮೇಲೆ ಸರಿಯಾಗಿ ನಮ್ಮನ್ನು ನೋಡಿಕೊಳ್ಳಲಿಲ್ಲ ಎಂಬ ಅಪವಾದಕ್ಕೆ ನೀನು ನೌಕರಿ ಹಿಡಿಯೋದು, ನೀನು ನೌಕರಿ ಹಿಡಿಯೋದು ಬೇಡ, ಏನೂ ಬೇಡ ಎಂದು ಹೇಳುತ್ತಾನೆ. ಕೊನೆಗೆ ತನ್ನ ಶಕ್ತ್ಯನುಸಾರವಾಗಿ ವಸಂತಿಯ ಮದುವೆ ಮಾಡಿ ಮುಗಿಸಿದ. ಮೋಹನನಿಗೆ ವಸಂತಿಯು ತನ್ನ ತಂಗಿ ಎಂಬ ಪ್ರೀತಿ, ವಿಶ್ವಾಸದಿಂದ ಎಲ್ಲಿಯೂ ನಡೆದು ಕೊಳ್ಳುವುದಿಲ್ಲ, ಅವಳ ಮೇಲೆ ಯಾವಾಗಲೂ ದ್ವೇಷ ಭಾವನೆಯಿಂದಲೇ ಇರುತ್ತಾನೆ. ಆದರೆ ವಸಂತಿಗಾಗಲೀ ತಾಯಿ ಗೌರಿಗಾಗಲೀ ಮೋಹನನ ಮೇಲೆ ಅಂತಹ ದ್ವೇಷ ಭಾವನೆ ಇರುವುದಿಲ್ಲ.

ಮೋಹನನಿಗೆ ತನ್ನ ಮೇಲೆ ಪ್ರೀತಿ ತೋರಿಸುವುದಿಲ್ಲ. ಎಲ್ಲಾ ವಸಂತಿಯನ್ನು ಪ್ರೀತಿಸುತ್ತಾರೆ ಎಂಬ ತಪ್ಪು ಭಾವನೆ ಬೆಳೆದು ಮುಂದೆ ಅದು ದ್ವೇಷದ ರೂಪ ತಾಳುತ್ತದೆ. ಅದಕ್ಕೆ ಯಾರು ಹೊಣೆ ಎಂದು ಹೇಳಲು ಸಹ ಕಷ್ಟವಾಗುತ್ತದೆ.

**ಕಾವೇರಜ್ಜಿ :**

ಸದಾನಂದನ ಅಜ್ಜ ರಾಮಹೊಳ್ಳರ ತಂಗಿ, ರಾಮಹೊಳ್ಳರರು ನರ್ಸಪ್ಪಯ್ಯನ ತಂದೆ, ನರಸಿಂಹಯ್ಯರ ಚಿಕ್ಕಮ್ಮ, ಮಯ್ಯರು ಅವರ ತಾಯಿಗೆ ಒಬ್ಬನೇ ಮಗ, ಹುಟ್ಟಿ ತಾಯಿಯನ್ನು ಕಳೆದುಕೊಂಡ ಅನಾಥ. ಅವರಿಗೆ ತಾಯಿಯ ಸ್ಥಾನದಲ್ಲಿ ಬಂದವರು, ರಾಮಹೊಳ್ಳರ ತಂಗಿ ಕಾವೇರಿ. ಕಾವೇರಿಗೆ ಮಕ್ಕಳಾಗಲಿಲ್ಲ, ನರಸಿಂಹಯ್ಯರನ್ನು ಅವರು ತಮ್ಮ ಮಗನಂತೆ ಸಾಕಿದ್ದರು. ರಾಮಹೊಳ್ಳರು ಸತ್ತು, ನರ್ಸಪ್ಪಯ್ಯನವರು ಊರು ಬಿಟ್ಟ ಮೇಲೆ ಅವರು ಮೂಡು ಮನೆಗೆ ಬಂದಿದ್ದಿಲ್ಲ. ಇನ್ನು ಹಣ್ಣಿ ಮುದುಕಿಯಾಗಿಯೇ ಆಕೆ ಬದುಕಿದ್ದರು. ಕಾರಂತರ ಮೂಲಕ ಸದಾನಂದನಿಗೆ ಮೇಳದಲ್ಲಿ ನರಸಿಂಹಯ್ಯರ ಪರಿಚಯವಾಗಿ, ಅವರು ತಮ್ಮ ಸಂಬಂಧಿಕರು ತಮ್ಮ ತಾತಾನ ತಂಗಿ ಬದುಕಿರುವುದು ತಿಳಿಯುತ್ತದೆ. ವಡಿಯೂರಿನಲ್ಲಿ ಕಾವೇರಜ್ಜಿ ಮಯ್ಯರ ಜೊತೆ ಇದ್ದರು. ಕಾರಂತರ ಜೊತೆ ಸದಾನಂದ ಕಾವೇರಜ್ಜಿಯನ್ನು ನೋಡಲು ಹೋಗಿರುತ್ತಾನೆ. ರಾಮಹೊಳ್ಳರ ಮೊಮ್ಮಗ ಎಂದು ತಿಳಿದು ಆಕೆ ತುಂಬಾ ಖುಷಿ ಪಡುತ್ತಾಳೆ. ಸದಾನಂದ ತನ್ನ ಜೊತೆ ಮೂಡು ಮನೆಗೆ ಬಂದು ಬಿಡಿ ಎಂದು ಕೇಳಿದಾಗ ಕಾವೇರಜ್ಜಿ ನಿರಾಕರಿಸುತ್ತಾರೆ. "ನಾನು ಮೂಡು ಮನೆಗೆ ಬರೋದು ಅಂದರೆ ಏನು, ನನಗೆ ಬಸ್ಸು ಮಾರ್ಗದ ತನಕ ನಡೆಯೋಕೆ ಸಾಧ್ಯನಾ ಹಾಗೆ ನಡೆದೇ ಅಂತ ಇಟ್ಟುಕೋ, ನಿನ್ನ ಅಜ್ಜ ಸತ್ತು ಎಷ್ಟು ವರ್ಷವಾಯಿತು. ಒಮ್ಮೆಯಾದರೂ ನಿನ್ನ ಅಪ್ಪ ಇಲ್ಲಿಗೆ ಬಂದನಾ, ಕಾಗದ ಹಾಕಿದನಾ, ನಾನು ಸತ್ತಿದ್ದೇನಾ ಬದುಕಿದ್ದೇನಾ ಅಂತ ನೋಡಿದನಾ, ನನಗೆ ಮಕ್ಕಳಿಲ್ಲದಿದ್ದರೂ ಕೂಡ ನರಸಿಂಹ ತನ್ನ ತಾಯಿಯಂತೆ ನನ್ನನ್ನು ನೋಡಿಕೊಂಡಿದ್ದಾನೆ. ನೀನು ಈಗ ಬಂದು ಸುಖದ ಸುಪ್ಪತ್ತಿಗೆಯಲ್ಲಿ ಕೊಡಿಸುತ್ತೇನೆ ಅಂದರೆ ಇಷ್ಟು ವರಷು ನೋಡಿದ ನರಸಿಂಹನಿಗೆ ನನ್ನ ಬಗ್ಗೆ ಹೇಗೆ ಅನಿಸಲಿಕ್ಕಿಲ್ಲ, ಕೊಟ್ಟ ಮೇಲೆ ಹೆಣ್ಣು ಕುಲಕ್ಕೆ ಹೊರಗಂತೆ ಹುಟ್ಟೋದು ಒಂದು ಕಡೆಯಾದರೆ ಸಾಯೋದು ಒಂದು ಕಡೆ. ಇನ್ನು ಸಾಯೋಕೆ ನನ್ನ ನೆಲವೇ ಇರುವಾಗ, ಯಾಕೆ ಮೂಡು ಮನೆಗೆ ಬರಬೇಕು ಹೇಳು, ನನಗೆ ಇನ್ನು ಯಾವ ಸುಖ, ನಿನಗೆ ನನ್ನ ಮೇಲೆ ಪ್ರೀತಿ ವಿಶ್ವಾಸ ಇದ್ದರೆ ಸಾಕು, ನನ್ನ ಮಗ ಅಂತ ಗ್ರಹಿಸುತ್ತೇನೆ. ಈಗೇನು ಬೇಜಾರು ಮಾಡಬೇಡ"(9) ಎಂದು ಕಾವೇರಜ್ಜಿ ಹೇಳುವುದು ತುಂಬಾ ಮೆಚ್ಚುವಂತಹ ಮಾತಾಗಿದೆ. ಕಾವೇರಜ್ಜಿ ತನ್ನ ಮನೆಯಲ್ಲಿ ಕೊನೆಯುಸಿರೆಳೆಯುತ್ತಾಳೆ. ಸ್ನಾನ ಮಾಡಿ ಬರುವಾಗ ಬಚ್ಚಲಲ್ಲೆ ಬಿದ್ದವರಿಗೆ ಎಡಗಾಲೊಂದರ ವಶವೇ ತಪ್ಪಿತೆಂದೂ, ಹಾಗೆ ಬಿದ್ದವರನ್ನು ಹಾಸಿಗೆಯ ಮೇಲೆ ಮಲಗಿಸಿದ ಮೇಲೆ ನಿನ್ನೆ ಬೆಳಗಿನ ತನಕ ಮಾತನಾಡುತ್ತಿದ್ದರೆಂದೂ, ಸಂಜೆಯಿಂದ

ಮಾತು ಆಡುತ್ತಿಲ್ಲ ಎಂದು ಮಯ್ಯ ಸದಾನಂದನಿಗೆ ಹೇಳಿದ. ಅಜ್ಜಿಯನ್ನು ಪರೀಕ್ಷಿಸಿದ ಸದಾನಂದ ಅಜ್ಜಿಗೆ ಪಕ್ಷಪಾತ ಬಡಿದಿದೆ. ಹೆಚ್ಚಿನ ದಿನ ಬದುಕುವುದಿಲ್ಲ ಎಂದುಕೊಂಡ. ಅದೇ ರಾತ್ರಿ ನಾಲ್ಕು ಗಂಟೆಯ ಹೊತ್ತಿಗೆ ಕಾವೇರಜ್ಜಿ ಮರಣ ಹೊಂದಿದರು, ಕಾವೇರಜ್ಜಿಯ ಪಾತ್ರ ಮುಪ್ಪಿನ ಮಾಗಿದ ಜೀವವದು ಜೀವನದಲ್ಲಿ ಎಲ್ಲಾ ರೀತಿ ಏರು ಪೇರುಗಳನ್ನು ಕಂಡ ಜೀವ. ತನ್ನ ಪರಿಪಕ್ವತೆ, ಸರಳವಾದ ಜೀವನ ಸಿದ್ಧಾಂತದಿಂದಾಗಿಯೇ ಕಾವೇರಜ್ಜಿಯ ಪಾತ್ರ ನಮ್ಮನ್ನು ತಟ್ಟುತ್ತದೆ.

**ಪಾರ್ವತಿ :**

ಕಾದಂಬರಿಯಲ್ಲಿ ಪಾರ್ವತಿಯದು ತುಂಬಾ ಲವಲವಿಕೆಯ ಪಾತ್ರವಾಗಿದೆ. ಪಾರ್ವತಿ ಚೆಲುವೆ, ಮುಗ್ಧೆ, ಸದಾನಂದನ ಮನಸ್ಸನ್ನು ಅವ್ಯಕ್ತವಾಗಿ ಆಕರ್ಷಿಸಿದವಳೆಂದರೆ ಪಾರ್ವತಿ. ಅವಳ ಚುರುಕತನ ಹಳ್ಳಿಯ ಹುಡುಗಿಯಾದರೂ ಅವಳ ಗಾಂಭೀರ್ಯ. ನಡವಳಿಕೆ ಸ್ನೇಹ ಶೀಲತೆ ಮತ್ತು ಅವಳ ಸರಳತೆ ಸದಾನಂದನಿಗೆ ತುಂಬಾ ಹಿಡಿಸಿತು. ಸದಾನಂದ ಬಂದಂದಿನಿಂದ ಅವನೊಂದಿಗೆ ನಿಸ್ಸಂಕೋಚವಾಗಿ ಸಹಕರಿಸುತ್ತಾಳೆ, ಬೆರೆಯುತ್ತಾಳೆ.

ಪಾರ್ವತಿಯು ಇನ್ನೂ ಹದಿನಾಲ್ಕರ ಹುಡುಗಿ, ಪಾರ್ವತಿಯು ಪ್ರತಿನಿತ್ಯದ ಕರ್ತವ್ಯವೆಂದರೆ, ಅವಳು "ಬೆಳಗ್ಗೆ ಎದ್ದು ಮುಖ ತೊಳೆದೊಡನೆ, ಹೊಸ್ತಿಲಲ್ಲಿ ಹೂ ಇಟ್ಟು, ಬಿಂದಿಗೆಯಲ್ಲಿ ನೀರಿರಿಸಿ ನಮಸ್ಕರಿಸುತ್ತಾಳೆ. ಆ ಮೇಲೆ ಹಟ್ಟಿಗೆ ಹೋಗಿ ದನದ ಮುಖಕ್ಕೆ ಕುಂಕುಮ ಇಡುತ್ತಾಳೆ, ಅದಕ್ಕೆ ತಿನ್ನಲು ಸಣ್ಣ ತುಂಡು ಬೆಲ್ಲ ಈಯುತ್ತಾಳೆ. ಸಂಜೆಯೂ ಹಾಗೇ ತುಳಸಿಕಟ್ಟೆಯ ಎದುರು ಹಣತೆಯಲ್ಲಿ ದೀಪ ಇರಿಸಿ, ತುಳಸಿ ಕಟ್ಟೆಗೆ ಸುತ್ತು ಬಂದು ನಮಸ್ಕರಿಸುತ್ತಾಳೆ. ಇದನ್ನು ನೋಡಿದಾಗಲೆಲ್ಲಾ ಸದಾನಂದನಿಗೆ ಭಾರತೀಯ ಸಂಸ್ಕೃತಿಯು ಉಳಿದಿದ್ದರೆ ಈಗಲೂ ಇರುವುದು ಹಳ್ಳಿಯಲ್ಲಿ ಎಂದು ಅನ್ನಿಸುತ್ತಿತ್ತು"(10). ಕಾರಂತರೂ ಸಾಯುವಾಗ ಸದಾನಂದನಿಗೆ ತಮ್ಮ ಮಗಳು ಪಾರ್ವತಿಯ ಕೈಗೆ ಇನ್ನೊಂದು ಕೈ ಬೇಕಾಗಿದೆ ಡಾಕ್ಟ್ರೇ! ನೀವು ಏನೂ ಮಾಡಿ, ಹೇಗೋ ಮಾಡಿ ಯಾರನ್ನು ಮರೆತರೂ ನನ್ನನ್ನು ಮರೆಯಬೇಡಿ, ನನ್ನ ಮಗಳ ಕೈಗೆ ಎಂದು ಹೇಳುತ್ತಾರೆ. ಕಾರಂತರಿಗೆ ಪಾರ್ವತಿಯನ್ನು ಸದಾನಂದನಿಗೆ ಕೊಡಬೇಕು ಎಂದು ಮನಸ್ಸಿನಲ್ಲಿ ಅನಿಸಿರುತ್ತದೆ. ಆದರೆ ಸದಾನಂದ ಎಂದೂ ಪ್ರೀತಿಸಲಿಲ್ಲ, ಅವನು ಅವಳನ್ನು ಮೆಚ್ಚಿದ್ದಾನೆ, ಅವಳಲ್ಲಿರುವ ಸುಸಂಸ್ಕೃತಿ, ಸೌಜನ್ಯ ಪೂರ್ಣ ನಡತೆ, ನಿಸ್ಸಂಕೋಚತನ, ಸಹಾನುಭೂತಿ ಅವನ ಮೆಚ್ಚುಗೆಗೆ ಕಾರಣ. ಪಾರ್ವತಿ ಬೆಳೆದು ನಿಂತ ಸುಂದರಿ. ಪಾರ್ವತಿ ತಾನಾಗಿಯೇ ಹುಟ್ಟಿಕೊಂಡ ಸಮಸ್ಯೆಯಾಗಿತ್ತು, ಸದಾನಂದನಿಗೆ ಹೇಗೆ ಅದನ್ನು ಪರಿಹರಿಸುವುದು ಎಂದು ತಿಳಿಯದವನಾಗಿದ್ದ. ತನ್ನ ತಂದೆ ತಾಯಿ ಖಂಡಿತ ಪಾರ್ವತಿಯ ವಿವಾಹಕ್ಕೆ ಒಪ್ಪುತ್ತಾರೆ. ಆದರೆ ತಾನು ಎಂದೂ ಆ ದೃಷ್ಟಿಯಿಂದ ಪಾರ್ವತಿಯನ್ನು ನೋಡಲಿಲ್ಲ. ಪಾರ್ವತಿಯ

ಮನಸ್ಸಿನಲ್ಲಿ ಏನಿದೆ ಎಂಬುದು ಸಹ ತಿಳಿದಿಲ್ಲ. ಕೊನೆಗೆ ವಸಂತಿ ಮರಣ ಹೊಂದಿದಳು. ಎಂದು ತಿಳಿದಾಗ ಸದಾನಂದನಿಗೆ ತನ್ನ ಬದುಕು ಮುಗಿಯಿತು ವಸಂತಿ ಇಲ್ಲದ ತನ್ನ ಬಾಳಿನಲ್ಲಿ ಸಂತೋಷವಿಲ್ಲ, ತಾನು ಇನ್ನು ಯಾರಿಗಾಗಿ ಬದುಕಬೇಕು ಎಂದು ಕೊಂಡು ತನ್ನ ಹಳ್ಳಿಗೆ ಬಂದಾಗ ತೋಟದಿಂದ ಬಾಳೆ ಎಲೆ ತೆಗೆದುಕೊಂಡು ಹೋಗುತ್ತಿದ್ದ ಪಾರ್ವತಿ ಅವನಿಗೆ ಎದುರಾದಳು. ಅವಳೇ ಮುಗುಳು ನಕ್ಕು ಬಂದಿರಾ! ಎಂದು ಕೇಳಿದಳು. ಆಗ ಸದಾನಂದನಿಗೆ ಸುತ್ತಲೂ ನಿರಾಶೆ ಕವಿದಿದ್ದರೂ, ಪಾರ್ವತಿಯ ಹೊಳೆಯುವ ಕಣ್ಣುಗಳಿಗೆ ದೃಷ್ಟಿ ಇಟ್ಟು ಹ್ಞೂ ಎಂದ. ಅವಳ ಕಣ್ಣುಗಳಲ್ಲಿರುವ ಪ್ರೀತಿ, ಹೊಳಪು ಸದಾನಂದನಿಗೆ ನಿರಾಶೆಯಲ್ಲೂ ಆಸೆಯನ್ನು ಕೊನರಿಸಿತು ಬದುಕು ಇನ್ನು ಇದೆ ಇಲ್ಲಿಗೆ ಮುಗಿದಿಲ್ಲ ಎಂದುಕೊಂಡು ಮುಂದೆ ಹೋಗುತ್ತಾನೆ. ಆದರೆ ಪಾರ್ವತಿಗೆ ಸದಾನಂದನ ಪ್ರೀತಿಯ ವಿಷಯವಾಗಲಿ, ತಂದೆ ತಾಯಿ ತನ್ನ ಮದುವೆಗೆ ಒಪ್ಪಿಗೆ ನೀಡದ ವಿಷಯಗಳಾಗಿ ತಿಳಿದಿರುವುದಿಲ್ಲ. ಪಾರ್ವತಿಯೂ ಪಾತ್ರದ ಮೂಲಕ ಲೇಖಕರು ಆ ಪ್ರದೇಶದ ಸಂಸ್ಕೃತಿಯ ಚಿತ್ರಣವನ್ನು ಸ್ವಲ್ಪ ಮಟ್ಟಿಗೆ ಕೊಟ್ಟಿದ್ದಾರೆ. ತಾನಾಯಿತು ತನ್ನ ಕೆಲಸವಾಯಿತು ಎಂದು ಇರುವ ಗುಣ ಪಾರ್ವತಿಯದು. ಎಲ್ಲರೊಂದಿಗೂ ಸ್ನೇಹ – ಸಲುಗೆಯಿಂದ ಇರುತ್ತಿದ್ದಳು.

ಅಡಿ ಟಿಪ್ಪಣಿ

(1). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-202

(2). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-241

(3). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-242

(4). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-237

(5). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-245

(6). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-263

(7). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-336

(8). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-261

(9). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-315

(10). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-310

# ಅಧ್ಯಾಯ-4

## ಅನಂತ ಮತ್ತು ಕನಸಿನಬಳ್ಳಿ ಕಾದಂಬರಿಗಳಲ್ಲಿ ಮೂಡಿ ಬಂದಿರುವ ಸಾಮಾಜಿಕ ಮತ್ತು ಪ್ರಾದೇಶಿಕ ಅಂಶಗಳು

**ಸಾಮಾಜಿಕತೆ :**

ಸಾಹಿತ್ಯವನ್ನು ವಿಮರ್ಶೆ ಮಾಡುವ ಮಾನದಂಡಗಳಲ್ಲಿ ಕೆಲವು ಗುಣಾತ್ಮಕ ಬದಲಾವಣೆಗಳು ನಡೆಯ ತೊಡಗಿದವು. ಈ ಬದಲಾವಣೆಯ ಪರಿಣಾಮವಾಗಿ ಸಾಹಿತ್ಯವನ್ನು ಸಾಮಾಜಿಕ ನೆಲೆಯಲ್ಲಿ ನೋಡುವ ಇಲ್ಲವೆ ಸಾಮಾಜಿಕ ಆಯಾಮದಿಂದ ಗ್ರಹಿಸುವ ವಿಧಾನಗಳು ನಿರ್ಮಾಣಗೊಂಡು ಬೆಳೆಯ ತೊಡಗಿದ್ದವು. ಅವುಗಳನ್ನು ಈ ಮುಂದಿನಂತೆ ಗುರುತಿಸಬಹುದು.

- ಸಮಾಜದಲ್ಲಿ ಪ್ರತಿಯೊಬ್ಬ ಬರಹಗಾರರು ಯಾವುದಾದರೂ ಸಮುದಾಯದ, ಜಾತಿ, ಲಿಂಗ ಇಲ್ಲವೆ ವರ್ಗದ ಅಂತಸ್ತಿನವರಾಗಿರುತ್ತಾರೆ. ಜೊತೆಗೆ ಆ ಸಮುದಾಯದ ಜಾತಿ, ಲಿಂಗ ಇಲ್ಲವೆ ವರ್ಗದ ಅನುಭವ, ಆಲೋಚನೆ, ಅರಿವು, ಸ್ವಭಾವ, ಧೋರಣೆ ಹಾಗೂ ಲೋಕದೃಷ್ಟಿಯನ್ನು ಪಡೆದಿರುತ್ತಾರೆ. ಇದರಿಂದ ಯಾವ ಬರಹಗಾರರೂ ಹೊರತಾಗಿರುವುದಿಲ್ಲ. ಅಂದರೆ ಬರಹಗಾರರ ಪ್ರಜ್ಞೆಯನ್ನು, ಅವರ ಲೋಕಾನುಭವವನ್ನು ಅವರ ಜಾತಿ, ಸಮುದಾಯ ಇಲ್ಲವೆ ವರ್ಗ ಅಂತಸ್ತುಗಳೇ ನಿರ್ಧರಿಸಿರುತ್ತವೆ. ಈ ಹಿನ್ನೆಲೆಗಳ "ಆಸೆ ಅಭೀಷ್ಟೆಗಳು, ವೈಚಾರಿಕ ಧೋರಣೆಗಳು ಬರಹಗಾರರ ಪ್ರಜ್ಞೆಯ ಭಾಗವಾಗಿರುತ್ತವೆ"(1). ಹಾಗಾಗಿ ಬರಹಗಾರರ ಸಾಮಾಜಿಕ ಅರಿವು ಮತ್ತು ಅನುಭವವೇ ಅವರ ಸಾಹಿತ್ಯಕ ಪಠ್ಯದಲ್ಲಿ ಒಡ ಮೂಡಿರುತ್ತದೆ.
- ಕೃತಿಕಾರರ ಸಾಮಾಜಿಕ ಧೋರಣೆಯು ಅವರ ಪ್ರತ್ಯಕ್ಷ ಮತ್ತು ನೇರ ಅನುಭವದಿಂದಲೇ ನಿರ್ಮಾಣವಾಗುತ್ತದೆ. ಹಾಗಾಗಿ ಕೃತಿಕಾರರ ಬಗೆಗಿನ ಸಕಲ ವಿವರಗಳು ಗೊತ್ತಿದ್ದರೆ ಅವರು ಬರೆದಿರುವ ಬರವಣಿಗೆಯಲ್ಲಿ ಸಾಮಾಜಿಕ ಸಂಗತಿಗಳನ್ನು ತಿಳಿಯಲು ಅನುಕೂಲವಾಗುತ್ತದೆ. "ಬರಹಗಾರರು ತಮ್ಮ ಅನುಭವಗಳನ್ನು ಮೀರಿ ಬರೆಯಲಾರರು ಹಾಗೊಂದು ವೇಳೆ ಬರೆದರೆ ಅದು ಅಧಿಕೃತವಿರಲಾರದು"(2).
- ಸಾಹಿತ್ಯಕ ಪಠ್ಯದ ಸಾಮಾಜಿಕ ಆಯಾಮಗಳು ಆ ಪಠ್ಯ ರಚನೆಯಾದ ಕಾಲದ ಸಮಾಜದ ವಾಸ್ತವ ಸ್ಥಿತಿಯ ಪಡಿಯಚ್ಚುಗಳಾಗಿರುತ್ತವೆ. ಸಾಹಿತ್ಯ ಕೃತಿ ತಾನು ರಚನೆಯಾದ ಕಾಲದ ಚರಿತ್ರೆಯ ಮುಖ್ಯ ಸಂಗತಿಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿರುತ್ತದೆ. ಅದು "ರಚನೆಯಾದ ಕಾಲದ ಚರಿತ್ರೆಯ ವಾಸ್ತವ ಸಂಗತಿಗಳನ್ನು, ಆ ಕಾಲದ ಚರಿತ್ರೆಯ ಯುಗದ ಪ್ರಧಾನ ಧೋರಣೆಗಳ, ಮೌಲ್ಯಗಳನ್ನು, ಚರಿತ್ರೆಯ ಪಲ್ಲಟಗಳನ್ನು, ಸಂಘರ್ಷಗಳನ್ನು ಇದ್ದಂತೆಯೇ ದಾಖಲಿಸಿರುತ್ತದೆ"(3). ಸಾಹಿತ್ಯ ಕೃತಿಗಳನ್ನು ಓದುವ ಮೂಲಕ ಆ ಕೃತಿಗಳು ರಚನೆಯಾದ

ಕಾಲದ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಸಂಗತಿಗಳನ್ನು ತಿಳಿಯಬಹುದು. ಆ ಕಾಲದಲ್ಲಿದ್ದ ಜನಜೀವನ, ಕೌಟುಂಬಿಕ ವ್ಯವಸ್ಥೆ, ಗಂಡು ಹೆಣ್ಣಿನ ಸಂಬಂಧಗಳು, ಸಾಮಾಜಿಕ ಮೌಲ್ಯಗಳು ಮೊದಲಾದ ಸಂಗತಿಗಳನ್ನು ತಿಳಿಯಬಹುದು.

- ಸಾಹಿತ್ಯ ಪಠ್ಯದಲ್ಲಿರುವ ಸಾಮಾಜಿಕ ಸಂಗತಿಗಳನ್ನು ಅರಿಯುವುದು ಎಂದರೆ ಆ ಕೃತಿಯನ್ನು ರಚನೆ ಮಾಡಿದ ಕೃತಿಕಾರರು ಪ್ರತಿನಿಧಿಸುವ ಜಾತಿ, ಸಮುದಾಯ ಮತ್ತು ವರ್ಗ ಹಿನ್ನೆಲೆಯ ವಿವರ, ಸ್ವಭಾವ ಮತ್ತು ಮನೋಧರ್ಮಗಳನ್ನು ಅರಿತಂತೆ. ಅಂದರೆ ವ್ಯಕ್ತಿಗಳ, ಕುಟುಂಬಗಳ, ಸಮುದಾಯಗಳ, ವಿವಿಧ ಜಾತಿ ಧರ್ಮಗಳ ಜೀವನ ವಿವರಗಳು ಹಾಗೂ ಸಾಮಾಜಿಕ ಸಂಗತಿಗಳನ್ನು ತಿಳಿಯಬೇಕೆಂದರೆ ಸಾಹಿತ್ಯ ಪಠ್ಯಗಳನ್ನು ಅವಲಂಬಿಸಬೇಕು. ಸಾಹಿತ್ಯ ಕೃತಿಗಳಲ್ಲಿ ಅವು ಸಿಗುತ್ತವೆ.
- ಸಾಹಿತ್ಯ ಕೃತಿಗಳನ್ನು ಸಾಮಾಜಿಕ ನೆಲೆಯಿಂದ ಗ್ರಹಿಸಲು ಸಾಹಿತ್ಯ ಕೃತಿಯ ವಿವರಗಳ ಜೊತೆಗೆ ಅವುಗಳನ್ನು ಬೇರೆ ಬರವಣಿಗೆಗಳ ಮೂಲಕವೊ ಅಥವಾ ಪ್ರತ್ಯಕ್ಷ ಅನುಭವದ ಮೂಲಕವೊ ತಿಳಿದಿರಬೇಕು. ಈ ತಿಳುವಳಿಕೆ ಮತ್ತು ಅನುಭವದ ಮೂಲಕ ಸಾಹಿತ್ಯವನ್ನು ಗ್ರಹಿಸಬೇಕು.
- ಸಾಹಿತ್ಯವು ಲೋಕ ವಿವರಗಳ ದಾಖಲೆ ಎಂಬುದು ಸಾಮಾಜಿಕ ನೆಲೆಯಿಂದ ಸಾಹಿತ್ಯವನ್ನು ಗ್ರಹಿಸುವ ಒಂದು ಜನಪ್ರಿಯ ವಿಧಾನ. ಎಲ್ಲಾ ವಿವರಗಳ ವಾಸ್ತವಗಳು ಕೃತಿಯಲ್ಲಿ ದಾಖಲಾಗಿರುತ್ತವೆ. ಪ್ರತಿಯೊಬ್ಬ ಬರಹಗಾರರು ತಮ್ಮ ಕಾಲದ ಲೋಕ ವಿವರಗಳ ವಾಸ್ತವವನ್ನು ತಮ್ಮ ಕೃತಿಯಲ್ಲಿ ದಾಖಲಿಸುತ್ತಾ ಮತ್ತು ಅವನ್ನು ವಿವರಿಸುತ್ತಾರೆ. ಕೃತಿಯಲ್ಲಿ ದಾಖಲಾಗುವ ವಾಸ್ತವಗಳು ಕೃತಿಯ ಆಶಯವಾಗಿ, ಧೋರಣೆಯಾಗಿ ರೂಪು ಪಡೆಯುತ್ತವೆ. ಆ ವಾಸ್ತವಗಳನ್ನು ವಿವರಿಸುವ ವಿಧಾನವು ಸಾಹಿತ್ಯ ಆಕೃತಿಯ ಅಥವಾ ರೂಪದ ಸ್ವರೂಪವನ್ನು ಪಡೆಯುತ್ತದೆ. ಈ ಕಾರಣದಿಂದ ಸಾಹಿತ್ಯವನ್ನು ಯಾರು ಬರೆದಿದ್ದಾರೆ ಎಂಬುದು ಬಹಳ ಮುಖ್ಯ ಎನಿಸಿದೆ.
- ಸಾಹಿತ್ಯವು ಸಂಸ್ಕೃತಿ ವಿಶಿಷ್ಟತೆಯ ದಾಖಲೆ ಎನ್ನುವುದು ಸಾಮಾಜಿಕ ನೆಲೆಯಿಂದ ಸಾಹಿತ್ಯವನ್ನು ಗ್ರಹಿಸುವ ಮತ್ತೊಂದು ವಿಧಾನ.

**ಪ್ರಾದೇಶಿಕತೆ :**

"ಪ್ರಾದೇಶಿಕತೆ ಎಂಬುದು ಸಾರ್ವಜನಿಕ ಜೀವನ, ಆರ್ಥಿಕತೆ, ವಿವಿಧ ಉತ್ಪಾದನೆಗಳಿಗೆ ಬಳಸುವ ಉಪಕರಣಗಳು, ಉತ್ಪಾದನ ಸಾಧನಗಳು, ಉಡುಪು, ಕಟ್ಟಡಗಳು, ಆಹಾರ ಪದ್ಧತಿ, ಔಷಧ ಕ್ರೀಡೆಗಳು, ಸಂಗೀತ, ಕಲೆ, ಅಲಂಕಾರ, ಮನೋರಂಜನೆ, ಅಭಿರುಚಿ ಆಸ್ವಾದನೆ ಮುಂತಾದ ವಲಯಗಳಲ್ಲಿ ಪ್ರಸ್ತಾಪವಾಗುತ್ತಿದೆ. ಪ್ರಾದೇಶಿಕತೆಯ ಚರ್ಚೆಯು ವಾಗ್ವಾದ, ಒಪ್ಪಿಗೆ, ಅನುಮೋದನೆ, ಅನುಮಾನ, ನಂಬಿಕೆ ಅಪನಂಬಿಕೆ, ತಿರಸ್ಕಾರ ಈ ಆಯಾಮಗಳಲ್ಲಿ ಸ್ಥಾನ ಪಡೆದಿದೆ. ಸಾಹಿತ್ಯ ನಿರ್ಮಾಣ, ವಿಮರ್ಶೆ, ಸಂಶೋಧನೆಗಳಲ್ಲೂ ಇದರ ಚರ್ಚೆ ನಡೆಯುತ್ತಿದೆ"(4).

ಸಾಹಿತ್ಯದ ಆಶಯ ಮತ್ತು ಧೋರಣೆಗೆ ಸಂಬಂಧಿಸಿದ ಪ್ರಾದೇಶಿಕತೆಯನ್ನು ಗುರುತಿಸುವ ವಿಧಾನವಿದೆ. ಸಾಹಿತ್ಯದಲ್ಲಿ ಆಶಯ ಮತ್ತು ಧೋರಣೆಯನ್ನು ಗುರುತಿಸುವಾಗ ಇವು ಸಾಹಿತ್ಯ ಕೃತಿಯಲ್ಲಿ ಸಿದ್ಧರೂಪದಲ್ಲಿ ಇರುತ್ತವೆ ಎಂದು ತಿಳಿಯುವ ಒಂದು ಮಾದರಿ ಇದೆ. ಜೊತೆಗೆ ಒಂದು ಕೃತಿಯಲ್ಲಿ ಒಂದೇ ಪ್ರಧಾನ ಆಶಯ ಮತ್ತು ಧೋರಣೆ ಇರುತ್ತದೆ ಎಂದು ನಂಬಲಾಗಿದೆ. ಅಲ್ಲದೆ ಕೆಲವು ಕೃತಿ ಸಮೂಹಗಳಿಗೆ ಸಾಮಾನ್ಯವಾದ ಒಂದು ಆಶಯವಿರುತ್ತದೆ. ಸಾಹಿತ್ಯದ ಭಾಷಿಕ ನಿರೂಪಣೆ ಯಾವುದು ಎಂಬುದನ್ನು ಆಧರಿಸಿ ಪ್ರಾದೇಶಿಕತೆಯನ್ನು ಗುರುತಿಸಲಾಗುತ್ತಿದೆ. ಸಾಹಿತ್ಯದ ಕಥನ ನಿರೂಪಣೆ, ಸಂಭಾಷಣೆ ಮತ್ತು ವರ್ಣನೆ ಇದಕ್ಕೆ ಪ್ರಯೋಗ ಮಾಡಿರುವ ಭಾಷೆ ಅದನ್ನು ಅವಲಂಬಿಸಿ ಅದರ ಪ್ರಾದೇಶಿಕತೆಯನ್ನು ಗುರುತಿಸುವ ಕ್ರಮವಿದೆ.

ಪ್ರಾದೇಶಿಕತೆಯನ್ನು ಗುರುತಿಸುವಾಗ ಒಂದು ಆಯಾಮದಲ್ಲಿ ಸಾಧ್ಯವಾದುದು ಮತೊಂದು ಆಯಾಮದಲ್ಲಿ ಸಾಧ್ಯವಾಗದೆಯೂ ಇರಬಹುದು.

**ಅನಂತ ಕಾದಂಬರಿಯ ಸಾಮಾಜಿಕ ಅಂಶಗಳು :**

- ಅನಂತ ಕಾದಂಬರಿಯ ಸಾಮಾಜಿಕ ಅಂಶಗಳು ಯಾವುವೆಂದರೆ- ತಮ್ಮ ತೋಟದಲ್ಲಿ ಬೆಳೆದ ತರಕಾರಿಗಳನ್ನು ಪೇಟೆಗೆ ತೆಗೆದುಕೊಂಡು ಹೋಗಿ ಈಶ್ವರ ಭಟ್ಟರು ಮಾರಾಟ ಮಾಡಿ ಅದಕ್ಕೆ ಬದಲಾಗಿ ತಮ್ಮ ಮನೆಗೆ ಬೇಕಿರುವ ವಸ್ತುಗಳನ್ನು ತೆಗೆದುಕೊಳ್ಳುತ್ತಾರೆ. ಇವರ ಹಾಗೆ ಕೃಷ್ಣಪ್ಪಜಿಯು ಸಹ ಮಾಡುತ್ತಾರೆ. ಇಬ್ಬರು ಒಟ್ಟಿಗೆ ಸಂತೆಗೆ ಹೋಗುತ್ತಾರೆ. ಇಲ್ಲಿ ವಾಹನಗಳ ಸೌಲಭ್ಯವಿಲ್ಲದರಿಂದ ನಡಿಗೆಯಲ್ಲೆ ಎಲ್ಲಾ ಕಡೆ ಓಡಾಡುವುದು ಸಾಮಾನ್ಯವಾದ ಅಂಶವಾಗಿದೆ. ವಾರಕ್ಕೊಮ್ಮೆ ಸಂತೆ ನಡೆಯುತ್ತದೆ. ಅಲ್ಲಿಗೆ ಸುತ್ತ ಮುತ್ತಲಿನ ಗ್ರಾಮದವರು ಬಂದು ತಮಗೆ ಬೇಕಿರುವ ಪದಾರ್ಥಗಳನ್ನು ಖರೀದಿಸುತ್ತಾರೆ.

- ಅನಂತ ತಮ್ಮ ಊರಾದ ಆನೇಕಲ್ಲಿಗೆ ಹೋಗಲು ಭಾರತಿ ಮತ್ತು ಶಂಕರನನ್ನು ಕೆರೆದುಕೊಂಡು ಪುತ್ತೂರಿನಿಂದ ಮಂಜೇಶ್ವರಕ್ಕೆ ಬಂದು ಅಲ್ಲಿಂದ ಬಸ್ಸಿನ ಮೂಲಕ ಹೋಗುವ ವ್ಯವಸ್ಥೆ ಅದನ್ನು ಬಿಟ್ಟು ಬೇರೆ ದಾರಿ ಇರುವುದಿಲ್ಲ. ಸಾರಿಗೆ ವ್ಯವಸ್ಥೆಯು ಅಷ್ಟೊಂದು ವ್ಯವಸ್ಥಿತವಾಗಿರುವುದಿಲ್ಲ. ಬಸ್ಸಿನ ತುಂಬ ಜನರು ತುಂಬಿರುತ್ತಾರೆ. ಜೊತೆಗೆ ಸಾಮಾನುಗಳನ್ನು ಗೋಣಿ ಚೀಲದಲ್ಲಿ ತುಂಬಿಸಿ ಬಸ್ಸಿನಲ್ಲಿ ತರುತ್ತಾರೆ. ಆಗ ಅನಂತನಿಗೆ ಅನಿಸುತ್ತಿದೆ ಎಂತಹ ಜನ ಸ್ವಲ್ಪವು ಸಾಮಾನ್ಯ ಜ್ಞಾನವೂ ಇಲ್ಲ ಜನರಿಗೆ ನಿಲ್ಲಲು ಜಾಗವಿಲ್ಲದಿರುವಾಗ ಇವರು ಸಾಮಾನುಗಳನ್ನು ಬಸ್ಸಿನಲ್ಲಿ ಹಾಕಿ ಇನ್ನೂ ತೊಂದರೆ ಮಾಡುತ್ತಿದ್ದಾರೆ. ವೀಳ್ಯವನ್ನು ಜಗಿಯುತ್ತಾ, ಎಡೆಯಲ್ಲೇ ಬಾಯಲ್ಲಿ ಹೊರಹೊಮ್ಮಿದ ವೀಳ್ಯದ ರಸ್ವನ್ನು ಹೆಗಲಿಗೆ ಹಾಕಿದ ಬಟ್ಟೆಯಿಂದಲೇ ಒರೆಸಿಕೊಳ್ಳುತ್ತಿರುತ್ತಾರೆ. ಗಲೀಜು ಬಟ್ಟೆಗಳನ್ನು ತೊಟ್ಟಿರುತ್ತಾರೆ. ಎಷ್ಟೋ ದಿನಗಳಿಂದ ಸ್ನಾನ ಮಾಡಿರುವುದಿಲ್ಲ. ಹತ್ತಿರ ಕೂತರೆ ಮೈಗೆ ಅಂಟುವುದು ಮಣ್ಣು ಅಂತ ಅನಂತನಿಗೆ ಅನಿಸಿತು. "ಹತ್ತು ಗಜಕ್ಕೊಬ್ಬನ ಹಾಗೆ ಹತ್ತುವುದು ಇಳಿಯುವುದು, ಬಸ್ಸು ನಿಂತಾಗ ಮೋಡದ ಹಾಗೇ ಮುಸುಕುವ ಧೂಳು ಇವುಗಳನ್ನು ನೋಡಿ ಅನಂತನಿಗೆ ತನ್ನ ಬಿಳಿ ಪ್ಯಾಂಟು, ಶರ್ಟಿಗೆ ಚೆನ್ನಾಗಿ ಬಣ್ಣ ಹಾಕಿದ ಹಾಗೇ ಹಾಗಿರುತ್ತದೆ. ಆನೇಕಲ್ಲಿನಲ್ಲಿ ಲ್ಯಾಂಡ್ರಿ ಕೂಡಾ ಇಲ್ಲ, ತಾಯಿಗೆ ತೊಳೆಯುವುದಕ್ಕೆ ಬರವುದೂ ಇಲ್ಲ, ತಾನೇ ಹೊಳೆಯಲ್ಲಿ ಕುಳಿತು ಅಗಸನ ಕೆಲಸ ಮಾಡಬೇಕಾಗುವ ವ್ಯವಸ್ಥೆಯಾಯಿತು"(5). ಎಂದು ನೊಂದು ಕೊಳ್ಳುತ್ತಾನೆ ಇಂತಹ ಹಳ್ಳಿಯು ಬೇಡ ಈ ಪ್ರಯಾಣವೂ ಬೇಡ ಎಂದು ಅನಂತನಿಗೆ ಅನಿಸುತ್ತದೆ.
- ಇಲ್ಲಿ ಹಳ್ಳಿಯ ಜನ ಮತ್ತು ಅವರ ರೀತಿ ನೀತ ತಿಳಿಯ ಬಹುದಾಗಿದೆ. ಸ್ವಚ್ಛತೆ ಬಗೆಯಾಗಲಿ, ಅದರಿಂದ ಬೇರೆಯವರಿಗೆ ತೊಂದರೆ ಯಾಗುವುದನ್ನು ಗಮನೀಸುವುದಿಲ್ಲ. ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛತೆಯಿಂದ ಕಾಪಾಡಬೇಕು ಅದರಿಂದ ತಮಗೆ ಅನುಕೂಲ ಎಂಬ ಅಂಶ ಅಗತ್ಯ ವಾಗಿರುವುದಿಲ. ಇದು ಪ್ರತಿ ಮನುಷ್ಯನಿಗೂ ಅನ್ವಯವಾಗುತ್ತದೆ. ಇಂತಹ ಕೆಲವು ಸೂಕ್ಷ್ಮಗಳನ್ನು ಎಲ್ಲರೂ ಅರಿತು ನಡೆಯುವುದು ಉತ್ತಮ. ಇದರಿಂದ ನಮ್ಮ ಸುತ್ತ-ಮುತ್ತಲ ಪರಿಸರ ಸ್ವಚ್ಛ ವಾಗಿರುತದೆ.
- ಇಲ್ಲಿ ಗಮನಿಸಬೇಕಾದ ಮುಖ್ಯ ಸಾಮಾಜಿಕ ಅಂಶವೆಂದರೆ, ಬಳೆದ ಹೆಣ್ಣು ಗಂಡು ಮನೆಯಲ್ಲಿದ್ದರೆ ಅವರಿಗೆ ಯಾಕೆ, ಇನ್ನು ಮದುವೆಮಾಡಿಲ್ಲ ಎಂಬುವುದು ಮೆನಗೆ ಬಂದವರ, ಅಕ್ಕ ಪಕ್ಕದವರ ಪರಿಚಯದವರ ಎಲ್ಲರ ಪ್ರಶ್ನೆಯಾಗಿರುತ್ತದೆ. ಭಾರತಿಗೆ ಹತ್ತೊಂಭತ್ತು ವರ್ಷವಾಯಿತು ಇನ್ನು ಎಲ್ಲೂ ಗಂಡು ನೋಡಿಲ್ಲವ ಎಂಬುದು ಎಲ್ಲರ ಪ್ರಶ್ನೆ, ಬೆಳೆದ ಮಗಳು ಬೇಗ ಮದುವೆ ಮಾಡಬೇಕು ಎಂದು ಈಶ್ವರ ಭಟ್ಟರಿಗು ಅನ್ನಿಸ ತೊಡಗುತ್ತದೆ.

ಈಶ್ವರ ಭಟ್ಟರು ಅನಂತನ ಜೊತೆ ಮಾತನಾಡುವಾಗ ಭಾರತಿಗೆ ಮದುವೆ ಮಾಡ ಬೇಕು, ನಿಮ್ಮ ಕಾಲೇಜಿನಲ್ಲಿ, ನಮ್ಮ ಕಡೆಯ ವರ ಇದ್ದರೆ ನೋಡು ಎಂದು ಹೇಳುತ್ತಾರೆ. ಕೃಷ್ಣಭಟ್ಟರ ಜೊತೆ ಸಂತೆಗೆ ಹೋಗಿ ಬರುವಾಗ ದಾರಿಯಲ್ಲೂ ಇದೇ ವಿಷಯ ಬಂದು, ಕೃಷ್ಣ ಭಟ್ಟರೂ ಯಾರಾದರೂ ಒಳ್ಳೆಯ ಹುಡುಗ ಇದ್ದರೆ ಹೇಳುತ್ತೇನೆ ಎಂದರು. ಆಗ ಈಶ್ವರ ಭಟ್ಟರು ಹೇಳಿದರು ಈ ಕಾಲದಲ್ಲಿ ಸಾವಿರಗಟ್ಟೆಲ ಪೈಸೆ [ವರದಕ್ಷಿಣೆ] ಕೊಟ್ಟು ಮದುವೆ ಮಾಡಬೇಕು, ಎನ್ನ ಹತ್ತಿರ ಅಷ್ಟೊಂದು ಎಲ್ಲಿದೆ, ಹೆಣ್ಣು ನಮ್ಮ ಮನೆಯಲ್ಲಿ ಮಾತ್ರವಾ ಇರುವುದು, ದೊಡ್ಡ ದೊಡ್ಡೋರ ಮನೇಲೂ ಕೂಡಾ ಇರುವಾಗ, ಅಂತಹ ಹೆಣ್ಣುಗಳಿಗೆ ಗಂಡು ಸಿಗುವುದು ಕಷ್ಟವಾದ ಕಾಲದಲ್ಲಿ ನಾಲ್ಕು ಹೆಣ್ಣು ಮಕ್ಕಳು, ಎಲ್ಲಾ ಒಬ್ಬಳಿಗೆ ಮಾಡುವ ಹಾಗಿಲ್ಲ ಎಲ್ಲಾ ಮಕ್ಕಳಿಗೂ ಬೇಕು, ಇಂತಹ ಪರಿಸ್ಥಿತಿಯಲ್ಲಿ ನಮಗೆ ತಕ್ಕದಾದ ಮಾನಿ ಇದ್ದರೆ ಹೇಳು ಊಟ, ಬಟ್ಟೆಗೆ ತೊಂದರೆ ಇಲ್ಲದಿದ್ದರೆ ಸಾಕು ಎಂದು ಹೇಳುತ್ತಾರೆ. ಕೃಷ್ಣಭಟ್ಟರು ತಮ್ಮ ಕಾಲದಲ್ಲಿ ತಮ್ಮಗಳ ಮದುವೆ ಆದಾ ಬಗ್ಗೆ ಹೇಳುತ್ತಾರೆ. ತಮಗೆ ಹದಿನೆಂಟು ವರ್ಷ. ಅದಕ್ಕೆ [ಹೆಣ್ಣಿಗೆ] ಹನ್ನೊಂದು ವರ್ಷ ಈಗ ಕಾಲ ಬದಲಾಗಿದೆ ಎಂದು ಹೇಳಿದರು. ಕೃಷ್ಣಭಟ್ಟರು ತಮಗೆ ಗೊತ್ತಿರುವ ಕಡೆ ವರ ಇರುವ ವಿಷಯವನ್ನು ಈಶ್ವರ ಭಟ್ಟರಿಗೆ ಹೇಳಿದರೂ, ಆದರೆ ಆ ವರ ಮೊದಲೇ ಮದುವೆ ಆಗಿ ಹೆಂಡತಿ ಸತ್ತು ಹೋಗಿರುತ್ತಾಳೆ. ಅವನಿಗೆ ಮೂವತ್ತೈದು ವರ್ಷ, "ಮೂವತ್ತು ನಲವತ್ತು ಮುಡಿ ಅಕ್ಕಿ ಗೇಣಿ ಬರುತ್ತದೆ. ಮನೆಗೆ ಮೂರೋ ನಾಲ್ಕೋ ಖಂಡಿ ಅಡಕೆ ಇದ್ದು. ಆನು ಮಾತನಾಡಿದರೆ ಖಂಡಿತ ಮಾಣಿ ಬೇಡ ಹೇಳಿ ಹೇಳ"(6). ಆದರೆ ನಿನ್ನ ಅಭಿಪ್ರಾಯ ಮುಖ್ಯ ಎಂದು ಹೇಳಿದಾಗ, ಈಶ್ವರ ಭಟ್ಟರು ಯೋಚಿಸಿದರು ನಮಗಿಂತ ಅನುಕೂಲವಾಗಿರುವ ಹುಡುಗ, ಎರಡನೇ ಮದುವೆ ಯಾದರೇನು ಒಳ್ಳೆಯ ಕಡೆ ಭಾರತಿಗೆ ಮದುವೆ ಯಾಗಿ ಸುಖವಾಗಿದ್ದರೆ ಸಾಕು. ಇನ್ನು ಹುಡುಗನಿಗೆ ವಯಸ್ಸ ಹೆಚ್ಚು ಆದರೂ ಪರವಾಗಿಲ್ಲ ತಮ್ಮ ಅಕ್ಕ ಮತ್ತು ಭಾವನಿಗೆ ಹದಿಮೂರು ವರ್ಷ ವ್ಯತ್ಯಾಸ, ಗಂಡಸರಿಗೆ ಅರವತ್ತಾದರೂ ಮಕ್ಕಳಾಗುತ್ತವೆ ಎಂಬ ಅಭಿಪ್ರಾಯ ಈಶ್ವರ ಭಟ್ಟರದು, ಮಗಳ ಮದುವೆ ಯಾಗಬೇಕು ಅವಳು ಸುಖವಾಗಿರಬೇಕು ಎಂಬ ಆಸೆ ತಂದೆಯ ಸ್ಥಾನದಲ್ಲಿ ನಿಂತು ಯೋಚಿಸುವುದು ಸರಿಯಾಗಿದೆ. ಆದರೆ ತಮ್ಮ ಮಗಳ ಮನಸ್ಸಿನಲ್ಲಿ ಏನಿದೆ ಅವಳಿಗೆ ಈ ಮದುವೆ ಇಷ್ಟವೇ ಎಂದು ಕೇಳುವುದಿಲ್ಲ. ಪಾರ್ವತಿಯು ಗಂಡ ಹೇಳಿದನ್ನು ಕೇಳಿರುತ್ತಾಳೆ, ನಿನ್ನ ಮಗಳನ್ನು ಸಿಕ್ಕಿದೋರಿಗೆ ಕೊಡುತ್ತೆನೋ ಎಂದು ಹೇಳಿ ಈಶ್ವರ ಭಟ್ಟರು ಪಾರ್ವತಿಯು ಕೇಳಬೇಕಾದ ವಿಷಯವನ್ನು ಬಿಟ್ಟು, ಕೃಷ್ಣ ಭಟ್ಟರು ಮತ್ತು ತಮ್ಮ ಗಂಡ ಭಾರತಿಯ ಮದುವೆ ಹೇಗೆ ಮಾಡಬೇಕು, ಖರ್ಚು ವೆಚ್ಚಗಳ ಬಗ್ಗೆ ಮಾತನಾಡ ತೊಡಗುತ್ತಾರೆ. ಅದನ್ನು ಮೌನವಾಗಿ ಕೇಳಿಸಿ ಕೊಳ್ಳುತ್ತಾರೆ. ತನ್ನ ಮಗಳು ಒಳ್ಳೆಯ ಮನೆ ಸೇರಬೇಕು. ಚೆನ್ನಾಗಿರಬೇಕು

ಎಂಬುದು ತಾಯಿಯ ಆಸೆ, ಮಗಳಿಗೆ ಈ ಮದುವೆ ಇಷ್ಟವೊ ಇಲ್ಲವೊ ಎಂದು ಸಹ ಆಕೆ ಕೇಳುವುದಿಲ್ಲ, ತನ್ನ ಮನಸ್ಸಿನಲ್ಲಿ ಮೂಡಿದ ಪ್ರಶ್ನೆ ಪಾರ್ವತಿಗೆ ಪ್ರಶ್ನೆಯಾಗಿಯೇ ಉಳಿಯುತ್ತದೆ. ಭಾರತಿಯ ಸಾವು ಸಹ ಈಶ್ವರ ಭಟ್ಟ ಮತ್ತು ಪಾರ್ವತಿಗೆ ಪ್ರಶ್ನೆಯಾಗುತ್ತದೆ. ಆದರೆ ತಂದೆಯಾದ ಅವರಿಗೆ ಎಲ್ಲವೂ ಮುಗಿದ ಮೇಲೆ ಭಾರತಿಗೆ ಈ ಮದುವೆ ಇಷ್ಟವಿರಲಿಲ್ಲವೇನೂ ನಾನೇ ಅವಳ ಸಾವಿಗೆ ಹೊಣೆಯಾದನೆ ಎಂದು ಅನಿಸದಿರಲಿಲ್ಲ. ಕೃಷ್ಣಭಟ್ಟರಿಗೂ ಭಾರತಿಯ ಸಾವಿನಲ್ಲಿ ತಮ್ಮ ಅಂಶವಿದೆಯೇ ಎನ್ನಿಸತೊಡಗಿತು. ಇಂತಹ ಘಟನೆಗಳು ನಮ್ಮ ಸಮಾಜದಲ್ಲಿ ಅನೇಕ ನಡೆಯುತ್ತದೆ. ಬೆಳಕಿಗೆ ಬಾರದೆ ಅಲ್ಲೇ ಮುಗಿದು ಹೋಗುತ್ತದೆ.

ಭಾರತಿಯು ತನ್ನ ಅಜ್ಜಿ ಮನೆ ಆನೇಕಲ್ಲಿಗೆ ಹೋದಾಗಲೂ ಪಕ್ಕದ ಮನೆಯವರೂ ಸಹ ಭಾರತಿಯ ಮದುವೆಯ ವಿಷಯ ಕೇಳಿ ತಮ್ಮ ಕಡೆ ವರ ಇದ್ದಾನೆ, ನೋಡಬಹುದು ಎಂದು ಹೇಳಿದರು. ಇದು ಬರಿ ಹೆಣ್ಣು ಮಕ್ಕಳಿಗೆ ಸಂಬಂಧ ಪಟ್ಟಿರುವುದಿಲ್ಲ. ಗಂಡು ಮಕ್ಕಳು ಓದಿ ನೌಕರಿ ಮಾಡುತ್ತಿದ್ದಾರೆ ಎಂಬುದು ಗೊತ್ತಾದರೆ ಮದುವೆ ಎಂಬುದು ಶುರುವಾಗುತ್ತದೆ. ಅನಂತನಿಗೂ ಅವನ ತಂದೆ ಮಹಾಬಲಭಟ್ಟರು ಮದುವೆ ಮಾಡಬೇಕು ಎಂಬ ಯೋಚನೆಯಲ್ಲಿರುತ್ತಾರೆ. ಮಗನ ಮನಸ್ಸಿನಲ್ಲಿ ಏನಿದೆ ಎಂಬುದು ಅವರಿಗೆ ಅರ್ಥವಾಗುವುದೇ ಇಲ್ಲ. ಇದು ಒಂದು ಸಾಮಾಜಿಕ ಅಂಶವಾಗಿದೆ ಎಲ್ಲ ಸಮಾಜದಲ್ಲೂ ಈ ರೀತಿ ನಡೆಯುತ್ತಿರುತ್ತದೆ. ಈಗ ಕಾಲ ಬದಲಾಗಿರ ಬಹುದು ಆದರೂ ಕೆಲವು ಕಡೆ ಅಂದರೆ ಹಳ್ಳಿಗಳಲ್ಲಿ ಈಗಲೂ ಹೆಣ್ಣು ಮಕ್ಕಳಿಗೆ ಬೇಗ ಮದುವೆ ಮಾಡುತ್ತಾರೆ. ಕಾಲ ಬದಲಾದರೂ ಕೆಲವು ವ್ಯವಸ್ಥೆಗಳನ್ನು ಜನರು ಬದಲಾವಣೆ ಮಾಡಿಕೊಳ್ಳುವುದಿಲ್ಲ. ಉದಾ :- ವರದಕ್ಷಿಣೆ ಕೊಡುವುದು, ತಮ್ಮ ಅನುಕೂಲಕ್ಕೆ, ಮೀರಿದ ಹಾಗೆ ಇನ್ನೊಬ್ಬರು ಮೆಚ್ಚುವಂತೆ, ಬೇರೆಯವರಿಗೆ ತಾವೇನೂ ಕಡಿಮೆ ಇಲ್ಲ ಎನ್ನುವ ರೀತಿ ಸಾಲ ಮಾಡಿ ಮದುವೆ ಮಾಡುತ್ತಾರೆ. ತಮ್ಮ ಮುಂದಿನ ಜೀವನ ಬಗ್ಗೆ ಅವರು ಯೋಚಿಸುವುದಿಲ್ಲ. ಇದು ತಿಳಿದೂ – ತಿಳಿದು ಮಾಡುವ ತಪ್ಪಾಗಿದೆ. ಇದು ಕಾಲ ಬದಲಾದಂತೆ ಹೆಚ್ಚುತ್ತದೆಯೋ ಹೊರತು ಕಡಿಮೆ ಯಾಗುವ ಲಕ್ಷಣ ಕಂಡುಬಂದಿಲ್ಲ.

**ಪ್ರಾದೇಶಿಕ ಅಂಶಗಳು :**

ಕಾಸರಗೋಡು ಸುತ್ತಮುತ್ತಲಿನ ನೈಸರ್ಗಿಕ ಪರಿಸರ ಆ ಪ್ರದೇಶದಲ್ಲಿ ಆಚರಣೆಯಲ್ಲಿರುವ ವಿವಿಧ ರೀತಿ ನೀತಿಗಳನ್ನು ಗಮನಿಸಬಹುದು. ಮಲೆನಾಡು ಹೆಸರೇ ಸೂಚಿಸುವಂತೆ ಮಳೆಗಾಲದಲ್ಲಿ

ಮೂರು ತಿಂಗಳುಗಳ ಕಾಲ ಮಳೆ ಸುರಿಯುತ್ತಲೆ ಇರುತ್ತದೆ. ಮಳೆಗಾಲಕ್ಕೆ ಅನುಕೂಲವಾಗುವಂತೆ ಎಲ್ಲಾ ಸಿದ್ದತೆಗಳನ್ನು ಮಾಡಿಕೊಳ್ಳುತ್ತಾರೆ.

- ಮಳೆಗಾಲಕ್ಕೆ ಅನುಕೂಲವಾಗುವಂತೆ ಹಪ್ಪಳವನ್ನು ಬೇಸಿಗೆಯಲ್ಲಿ ಮಾಡಿ ಅದನ್ನು ಒಣಗಿಸಿ ತೆಗೆದಿರಿಸಬೇಕು. ಇದು ಸಾಮಾನ್ಯ ಎಲ್ಲಾ ಕಡೆಯು ನಡೆಯುವ ನಿಯಮವಾಗಿದೆ.
- ಮನೆಗೆ ಹೊರಗಿನಿಂದ ಯಾರಾದರೂ ಬಂದರೆ ಅವರಿಗೆ ಮೊದಲು ಕುಡಿಯಲು ನೀರು ಮತ್ತು ಬೆಲ್ಲ ನೀಡುವುದು ಇದು ಹೆಚ್ಚಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸುತ್ತಮುತ್ತಲು ಇರುವ ವಾಡಿಕೆಯಾಗಿದೆ. ಇಲ್ಲಿ ವೀಳ್ಯದ ತಟ್ಟೆಯಾವಾಗಲೂ ಸಿದ್ದವಾಗಿರುತ್ತದೆ. ಅದನ್ನು ಕೊಡುತ್ತಾರೆ. ಎಲ್ಲರೂ ವೀಳ್ಯ ಹಾಕೆ ಹಾಕುತ್ತಾರೆ. ಅಲ್ಲೆ ಹುಟ್ಟಿ ಬೆಳೆದವರು ಅದೇ ಪರಿಸರಕ್ಕೆ ಹೊಂದಿ ಕೊಂಡವರು ವೀಳ್ಯ ಹಾಕುವ ಅಭ್ಯಾಸ ವಿರುತ್ತದೆ. ಇದು ಅನಂತ ಮತ್ತು ಕನಸಿನ ಬಳ್ಳಿ ಎರಡು ಕಾದಂಬರಿಗಳಲ್ಲಿ ಕಾಣಬಹುದು. ಈಶ್ವರ ಭಟ್ಟರು, ಕೃಷ್ಣಭಟ್ಟ, ಮಹಾಬಲಭಟ್ಟ, ಸುಬ್ರಾಯ ಕಾರಂತರು ಹೀಗೆ ಕಾದಂಬರಿಯಲ್ಲಿ ಬರುವ ಅಲ್ಲೇ ನೆಲೆಸಿರುವ ಮಧ್ಯ ವಯಸ್ಸಿನ ಪಾತ್ರಗಳ ಮೂಲಕ ನೋಡಬಹುದಾಗಿದೆ.
- ಬೆಳಗ್ಗೆ ಎದ್ದು ದನಗಳಿಗೆ ಕಲಗಚ್ಚು ಇಡುವುದು ಇದು ನಿತ್ಯ ಕರ್ತವ್ಯದಂತೆ ಇಲ್ಲಿ ನಡೆಯುತ್ತದೆ. ನಂತರ ಅವುಗಳನ್ನು ಗುಡ್ಡಕ್ಕೆ ಮೇಯಲು ಅಟ್ಟುವುದು.
- ಊಟಕ್ಕೆ ಮೊದಲು ಕೈಕಾಲು ತೊಳೆದು ವಿಭೂತಿಯಿಟ್ಟು ಜಪ ಮಾಡುವುದು ಕಾಸರಗೋಡಿನ ಸುತ್ತಮುತ್ತ ಇರುವ ಹವ್ಯಕ ಬ್ರಾಹ್ಮಣರ ಒಂದು ಸಂಪ್ರದಾಯದಂತೆ ತೋರಿಸಿದ್ದಾರೆ. ಇದು ಈಶ್ವರಭಟ್ಟ ಮತ್ತು ಮಹಾಬಲಭಟ್ಟರ ಪಾತ್ರದ ಮೂಲಕ ತಿಳಿಯಬಹುದಾಗಿದೆ.
- ಮನೆಯಿಂದ ಸ್ವಲ್ಪ ದೂರದಲ್ಲಿ ಇದ್ದ ಗುಡ್ಡ ಹತ್ತಿರ ಈಶ್ವರ ಭಟ್ಟರ ಹಸು ಶಾರದೆ ಗುಡ್ಡಕ್ಕೆ ಮೇಯಲು ಹೋದದ್ದು ಸಂಜೆಯಾದರೂ ಬಂದಿರುವುದಿಲ್ಲ. ಆಗ ಈಶ್ವರ ಭಟ್ಟರು ತಾನೆ ಹೊರಡುತ್ತಾರೆ, ಹುಲಿ ಕಾಟ ಬೇರೆ ಏನಾಯಿತೋ ಎಂದು ಟಾರ್ಚ್ ಹಿಡಿದು ಗಾಬರೀಯಿಂದ ಗುಡ್ಡದ ಕಡೆ ಹೊರಡುತ್ತಾರೆ. ಸಿಕ್ಕಾಪಟ್ಟೆ ಬಿದಿರಿನ ಹಿಂಡು ಬೆಳೆದಿರುತ್ತದೆ ಏನೂ ಸರಿಯಾಗಿ ಕಾಣಿಸುತ್ತಿರುವುದಿಲ್ಲ, ಕೊನೆಗೆ ಹಸು ಸಿಗದೆ ವಾಪಸ್ಸು ಆಗುತ್ತಾರೆ. ಮಾರನೇ ದಿನ ಹಸು ವಾಪಸ್ಸು ಮನೆಗೆ ಬರುತ್ತದೆ. ಕಾಡು ದಟ್ಟವಾಗಿ ಹಬ್ಬಿರುವುದರಿಂದ ಹುಲಿಗಳ ವಾಸಸ್ಥಾನವಾಗಿರುತ್ತದೆ. ಇದರಿಂದ ಸಾರ್ವಜನಿಕರಿಗೆ ತೊಂದರೆ ತಪ್ಪಿದ್ದಲ್ಲ. ಎಷ್ಟೋ ಪ್ರಾಣಿಗಳು ಹುಲಿಗಳ ಆಹಾರವೂ ಸಹ ಆಗಿರುತ್ತದೆ.
- ಈಶ್ವರ ಭಟ್ಟರು ತಮ್ಮ ಹಸು ಗುಡ್ಡಕ್ಕೆ ಹೋದದ್ದು ವಾಪಸ್ಸು ಕತ್ತಲಾದರೂ ಬರದಿದ್ದಾಗ, ತಾವೇ ಹೋಗಿ ಒಮ್ಮೆ ನೋಡಿ ಕೊಂಡು ಬಂದರು. ಅದರ ಸುಳಿವು ಸಿಗದಿದ್ದಾಗ, ಹಸು ಸೌಖ್ಯವಾಗಿ

ಮನೆಗೆ ಬಂದರೆ "ಹುಲಿ ಭೂತಕ್ಕೆ ಒಂದು ಕೋಳಿ ಕೊಡುತ್ತೇನೆ"(7). ಹಸುಗೆ ಏನೂ ಆಗಬಾರದು ಎಂದು ಹರಕೆ ಕಟ್ಟುತ್ತಾರೆ. ಈ ರೀತಿ ಒಂದೊಂದು ಪ್ರದೇಶಕ್ಕೆ ಅನ್ವಯವಾಗುವ ರೀತಿ ಅನೇಕ ಪ್ರಸಂಗಗಳು ನಮ್ಮ ಗಮನಕ್ಕೆ ಬಂದಿರುತ್ತೇವೆ.



- ವಾರದಲ್ಲಿ ಒಂದು ದಿನ ಸತ್ತೆ ಇರುತ್ತದೆ. ಸುತ್ತಮುತ್ತಲಿನ ಊರಿನವರು ಬಂದು ಸೇರಿ ತಮಗೆ ಅಗತ್ಯವಿರುವ ಸಾಮಾನು ತೆಗೆದುಕೊಂಡು ಹೋಗುತ್ತಾರೆ. ಈಶ್ವರ ಭಟ್ಟರು ಸೋಮವಾರ ಸಂತೆ ತಮ್ಮ ಗದ್ದೆಯಲ್ಲಿ ಬೆಳೆದ ತರಕಾರಿಗಳನ್ನು ತೆಗೆದುಕೊಂಡು ಕೃಷ್ಣಭಟ್ಟರ ಜೊತೆ ಪುತ್ತೂರಿಗೆ ನಡೆದುಕೊಂಡು ಹೋಗುತ್ತಾರೆ. ವಾಹನ ವ್ಯವಸ್ಥೆ ಇರಲಿಲ್ಲ. ನಂತರ ತಾವು ತಂದ ತರಕಾರಿಗಳನ್ನು ಅಲ್ಲಿಯೇ ಕುಳಿತು ಹಳ್ಳಿಯ ಹೆಂಗಸರಿಗೆ ಮಾರಿ, ತಮ್ಮ ಮನೆಗೆ ಬೇಕಾದ ಸಾಮಾನನ್ನು ಖರೀದಿಸಿ ವಾಪಸ್ಸು ಆದರೂ, ಇದು ಸರ್ವೆ ಸಾಮಾನ್ಯ ಸಂಗತಿ ವಾರಕ್ಕೂ, ಎರಡೂ ವಾರಕ್ಕೂ ಹೀಗೆ ಸಂತೆಗೆ ಹೋಗಿ ತಮಗೆ ಅಗತ್ಯಕ್ಕಿಂತ ಹೆಚ್ಚಾಗಿರುವ ವಸ್ತು ಅಂದರೆ ದಿನನಿತ್ಯದ ವಸ್ತುಗಳನ್ನು ಮಾರಿ ತಮಗೆ ಬೇಕಾದ ವಸ್ತು ಅಥವಾ ಹಣವನ್ನು ತರುತ್ತಾರೆ. ಇದು ಅಲ್ಲಿನ ಪ್ರಾದೇಶಿಕತೆಯ ಮೇಲೆ ಗಮನ ಹರಿಸುವ ಅಂಶವಾಗಿದೆ.

- ಮನೆಗಳಿಗೆ ಸ್ವಲ್ಪ ದೂರದಲ್ಲೇ ಹಳ್ಳಗಳು ಇರುವುದರಿಂದ ಹಳ್ಳಕ್ಕೆ ಹೋಗಿ ಬಟ್ಟೆಯನ್ನು ಒಗೆಯುವುದು ಅಲ್ಲಿನ ಪ್ರದೇಶದಲ್ಲಿ ರೂಢಿಯಲ್ಲಿರುತ್ತದೆ. ಭಾರತಿಯೂ ತಮ್ಮ ಊರಿನಲ್ಲಿಯೂ ಹಳ್ಳಕ್ಕೆ ಹೋಗಿ 'ನೊರೆಕ್ಕಾಯಿ' ಬಟ್ಟೆ ಬಗೆಯಲು ಬಳಸುವ ವಸ್ತು. ಅದನ್ನು ಮನೆಯ ಅಟ್ಟದಲ್ಲಿ ಶೇಖರಿಸಿರುತ್ತಾರೆ. ಬೇಕಾದಾಗ ತೆಗೆದುಕೊಂಡು ಅದನ್ನು ಜಜ್ಜಿ ನೀರಿನಲ್ಲಿ ನೆನೆಸಿ ನೊರೆ ಬಂದಾಗ ಬಟ್ಟೆಗಳನ್ನು ಅದಕ್ಕೆ ಹಾಕಿ ನೆನೆಸಿ ನಂತರ ಹಳ್ಳಕ್ಕೆ ಹೋಗಿ ಬಟ್ಟೆಗಳನ್ನು ಒಗೆದು ಕೊಂಡು ಬರುವುದು [ಈ ಪದ್ದತಿ ಈಗ ನಗರಗಳಲ್ಲಿ ಬಟ್ಟೆ ಒಗೆಯಲು ಬಳಸುವ ಸರ್ಫ್ ಪೌಂಡರ್ ಬಳಕೆಯನ್ನು ಹೋಲುತ್ತಿದೆ]. ಇದೇ ರೀತಿಯ ಪದ್ದತಿ ಆನೇಕಲ್ಲು ಸುತ್ತಮುತ್ತಲಿನ ಗ್ರಾಮದಲ್ಲೂ ಕಾಣಬಹುದು. ಭಾರತಿ ತಮ್ಮ ತಾತಾನ ಮನೆ ಆನೇಕಲ್ಲುಗೆ ಬಂದಾಗಲೂ ಕೆರೆಗೆ ಹೋಗಿ ಬಟ್ಟೆಗಳನ್ನು ಒಗೆಯುವುದನ್ನು ಇಲ್ಲಿ ಕಾಣಬಹುದಾಗಿದೆ. ಮಳೆನಾಡಾದ್ದರಿಂದ ನೀರಿನ ಅಭಾವ ಅಷ್ಟಾಗಿ ಇರುವುದಿಲ್ಲ. ಆದರೆ ಕರ್ನಾಟಕದ ಕೆಲವೆಡೆ ಮಳೆಯ ಅಭಾವವಿದ್ದು ಕೆರೆಗಳಲ್ಲಿ ನೀರು ಇಲ್ಲವಾಗಿದೆ. ಒಣಗಿದ ಬರಿ ಕೆರೆಗಳು ಲೆಕ್ಕವಿಲ್ಲದಷ್ಟು ಇದೆ. ಪ್ರಾಣಿಗಳಿಗೆ ಕುಡಿಯಲು ನೀರು ಕೆರೆಗಳಲ್ಲಿ ಸಿಗದಿರುವ ಸಂದರ್ಭ ಒದಗಿದೆ. ಇನ್ನು ಬಟ್ಟೆಗಳನ್ನು ಒಗೆಯುವುದ, ಮಕ್ಕಳು ಈಜಲು ಹೋಗುವುದು ಸಾಧ್ಯವಾಗದ ಮಾತಾಗಿದೆ.

## ಕನಸಿನ ಬಳ್ಳಿ ಕಾದಂಬರಿಯ ಸಾಮಾಜಿಕ ಮತ್ತು ಪ್ರಾದೇಶಿಕತೆ

**ಕಾದಂಬರಿಯಲ್ಲಿ ಬರುವ ಸಾಮಾಜಿಕ ಅಂಶಗಳು :**

ಸದಾನಂದ ತಮ್ಮ ಆಸ್ಪತ್ರೆಯಲ್ಲಿ ನರ್ಸ್ ಆಗಿ ಕೆಲಸ ಮಾಡುವ ವಿಧವೆ ವಸಂತಿಯನ್ನು ಮೆಚ್ಚಿ ಮದುವೆ ಆಗಲು ತಂದೆ ತಾಯಿಯ ಒಪ್ಪಿಗೆ ಕೇಳಿದಾಗ, ನರ್ಸಪ್ಪಯ ಹೇಳುವ ಮಾತುಗಳು ನರ್ಸ್ ಕೆಲಸ ಅಂದರೆ ಕೀಳು ಕೆಲಸ ಅಂದೆನಾ ನಾನು, ಕೆಲಸ ಯಾವುದಾದರೇನು ಇಲ್ಲಿ ಕೆಲಸಕ್ಕಿಂತಲೂ ಮುಖ್ಯ ಪ್ರಶ್ನೆ, ಸಮಾಜದ ಸ್ಥಾನಮಾನದ ಬಗ್ಗೆ, ಅದೂ ಅಲ್ಲದೆ ಅವಳು ವಿಧವೆಯಾದರಿಂದಲೇ ನರ್ಸ್ ಕೆಲಸಕ್ಕೆ ಸೇರಿದ್ದು, ಒಮ್ಮೆ ಒಬ್ಬನ ಕೈ ಹಿಡಿದವಳನ್ನು ಒಮ್ಮೆ ಒಬ್ಬನನ್ನು ಪ್ರೀತಿಸಿದವಳನ್ನು ಪುನರ್ ವಿವಾಹವಾಗುವುದು ಎನ್ನುವಾಗ ನಿನಗೇನೋ ಅದು ಸರಿ ಅನಿಸೀತಾದರೂ ಬೆಂಗಳೂರಿನಲ್ಲಿ ನಾನು ಹೇಗೆ ತಲೆಯೆತ್ತಿ ನೆಡಯಬೇಕು ನೀನೇ ಹೇಳು ಎಂದು ಮಗನಿಗೆ ಪ್ರಶ್ನಿಸುತ್ತಾರೆ. ಇದು ಬರೀ ನರ್ಸಪ್ಪಯ್ಯ ಅಭಿಪ್ರಾಯವಲ್ಲ, ಇಂತಹವರು ನಮ್ಮ ಸಮಾಜದಲ್ಲಿ ಬೇಕಾದಷ್ಟು ಮಂದಿ ಇದ್ದಾರೆ. ಹೆಣ್ಣು ಒಮ್ಮೆ ಮದುವೆಯಾಗಿ ಗಂಡ ಸತ್ತರೆ ಆಕೆ ಪುನರ್ ವಿವಾಹಕ್ಕೆ ಯೋಗ್ಯವಲ್ಲ ಎಂಬುದು ಹಲವರ ಅಭಿಪ್ರಾಯ. ಆದರೆ ಈ ತತ್ವ ಗಂಡುಗಳಿಗೆ ಅನ್ವಯಿಸುವುದಿಲ್ಲ ಹೆಂಡತಿ ಸತ್ತರೂ ಪುನರ್ ವಿವಾಹ ವಾಗುವುದಕ್ಕೆ ಗಂಡುಗಳಿಗೆ ಯಾವುದೋ ನೀತಿ – ನಿಯಮಗಳಿಲ್ಲ. ಆದರೆ ಹೆಣ್ಣಿಗೆ ಮಾತ್ರ ಅದು ಅನ್ವಯಿಸುತ್ತದೆ. ಇದು ಬರಿ ಗಂಡಿನ ದೃಷ್ಟಿಕೋನವಲ್ಲ ಸರೋಜಮ್ಮನು ಸಹ ವಸಂತಿ ವಿಧವೆ ಎಂದು ಅವಳಿಗೆ ಮರು ಮದುವೆಯ ಅವಶ್ಯಕತೆ ಇಲ್ಲ ಎನ್ನುವಲ್ಲಿ, ಹೆಣ್ಣು ಹೆಣ್ಣನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ, ಹೆಣ್ಣು – ಹೆಣ್ಣಿಗೆ ಬೆಂಬಲ ಕೊಡುತ್ತಿಲ್ಲ ಎನ್ನುವುದನ್ನು ನೋಡಬಹುದು. ಆದರೆ ಸದಾನಂದ ಮತ್ತು ರಾಘವನನಂತಹ ಒಳ್ಳೆಯ ಮನಸ್ಸಿನವರು ಸಮಾಜದಲ್ಲಿ ಇರುತ್ತಾರೆ. ಅಂತವರ ಸಂಖ್ಯೆ ಕಡಿಮೆ ಎನ್ನುವುದೇ ಸೂಜಿಗದ ವಿಷಯವಾಗಿದೆ.

- ಸದಾನಂದ ಎಂ.ಬಿ.ಬಿ.ಎಸ್. ವಿದ್ಯಾರ್ಥಿಯಾಗಿದ್ದಾಗಲಿಂದಲೇ ತಮ್ಮ ತಂದೆಯ ಊರು ಕೋಳ್ಯೂರನ್ನು ಭೇಟಿ ಮಾಡಿದ್ದನು. ಅವನಿಗೆ ಅಲ್ಲಿನ ಪ್ರಕೃತಿ ಸೌಂದರ್ಯ ಬಹಳ ಹಿಡಿಸಿತ್ತು. ತಾನು ಮುಂದೆ ಈ ಹಳ್ಳಿಯಲ್ಲಿ ಶಾಫ್ ತೆಗೆದು ಬಡವರ ಸೇವೆ ಮಾಡಬೇಕು ಎಂಬ ಹಂಬಲವಿತ್ತು. ಆದರೆ ಯಾವುದಕ್ಕೂ ದುಡುಕ ಬಾರದು ಸಂದರ್ಭ ಬರಲಿ ಎಂದು ಕಾಯುತ್ತಿದ್ದನು ಅದು ತಾನು ಮೆಚ್ಚಿದ ವಸಂತಿಯನ್ನು ಮದುವೆಯಾಗಲು ತಂದೆ ತಾಯಿ ಒಪ್ಪದಿದ್ದಾಗ ತನ್ನ ಸರ್ಕಾರಿ ಕೆಲಸಕ್ಕೆ ರಾಜೀನಾಮೆ ನೀಡಿ ಹಳ್ಳಿಗೆ ಬರುತ್ತಾನೆ. ಅಲ್ಲಿ 'ಗೀತಾ ಕ್ಲಿನಿಕ್'ನ್ನು ಪ್ರಾರಂಭಿಸುತ್ತಾನೆ. ಜೊತೆಗೆ ಹಳ್ಳಿಯ ಮೂಲೆ ಮೂಲೆಗೂ ಹೋಗಿ ರೋಗಿಗಳನ್ನು ಪರೀಕ್ಷಿಸಲು ಕರೆ ಬರ ತೊಡಗುತ್ತದೆ, ಹೋಗದೆ ನಿರ್ವಾಹವಿಲ್ಲ ರೋಗಿಯ ಜೀವ

ಉಳಿಸಬೇಕಾದರೆ ಹೋಗಲೇ ಬೇಕು, ಆದರೆ ಯಾವುದೇ ರೀತಿಯ ವಾಹನ ಸೌಕರ್ಯವಿರಲಿಲ್ಲ. ದಾರಿಯು ಅಷ್ಟೆ ಕಷ್ಟದಾಯಕ ಅದರ ಜೊತೆಗೆ ಎಡಬಿಡದೆ ಸುರಿಯುವ ಮಳೆ, ಎಲ್ಲವೂ ದಾಟಿ ಹೋಗಿ ರೋಗಿಗೆ ಔಷಧಿ ಕೊಟ್ಟು ಬಂದರೆ, ರೋಗಿಯನ್ನು ಸರಿಯಾಗಿ ಉಪಚಾರ ಮಾಡಲು ಅರಿಯದ ಅವಿದ್ಯಾವಂತ ಹಳ್ಳಿಗರ ನಡೆವಳಿಕೆಯ ಬಗ್ಗೆ ಸದಾನಂದನಿಗೆ ನಗಬೇಕೋ – ಅಳಬೇಕೋ ಅರ್ಥ ವಾಗುತ್ತಿರಲಿಲ್ಲ.

- ಇಲ್ಲಿ ಗಮನಿಸಬೇಕಾದ ಎರಡು ಅಂಶಗಳಿವೆ. ಇದು ಈಗೀನ ಸಮಾಜದಲ್ಲಿ ಈಗಲೂ ನಡೆಯುತ್ತಿದೆ. ಡಾಕ್ಟರ್ ಓದಿ ನಗರಗಳಲ್ಲೆ ನೆಲೆ ನಿಲ್ಲಬೇಕು ಎಂಬ ತರುಣರು ಹೆಚ್ಚು ಯಾರೂ ಹಳ್ಳಿಗಳಿಗೆ ಹೋಗಿ ಸೇವೆ ಮಾಡಬೇಕು, ಹಳ್ಳಿಗರಿಗೆ ನೆರವಾಗಬೇಕು ಎಂಬ ಕಾಳಜಿಯಿಲ್ಲ ಕಾರಣ ಹಳ್ಳಿಗೆ ಹೋದರೆ ಅಲ್ಲಿ ಅವರಿಗೆ ಸರಿಯಾದ ವ್ಯವಸ್ಥೆಗಳಿರುವುದಿಲ್ಲ. ನಗರ ಪ್ರದೇಶದಲ್ಲಿ ಸಿಗುವಷ್ಟು ಹಣವಾಗಲಿ, ಸೌಕರ್ಯವಾಗಲಿ, ಹಳ್ಳಿಯಲ್ಲಿ ದೊರಕದೆ ಇರುವುದು.
- ಈಗ ಕಾಲ ಬದಲಾಗಿದೆ ಅವಿದ್ಯಾವಂತರಾದ ಹಳ್ಳಿಗರು ಸಹ ತಿಳುವಳಿಕೆಯನ್ನು ಬಳಸಿಕೊಂಡಿದ್ದಾರೆ. ಅದೂ ಎಷ್ಟರ ಮಟ್ಟಿಗೆ ಎನ್ನುವುದು ಇಲ್ಲಿ ಅನಗತ್ಯವಾದ ಅಂಶವಾಗಿದೆ. ವೈದ್ಯರು ಹೇಳಿದನ್ನು ಅರ್ಥ ಮಾಡಿಕೊಂಡು ಔಷಧಗಳನ್ನು ತೆಗೆದುಕೊಳ್ಳುವುದನ್ನು ಗಮನಿಸ ಬಹುದಾಗಿದೆ. ಹಳ್ಳಿಗರು ಗಟ್ಟಿಗರು ಏನೂದರೂ ತಡೆದು ಕೊಳ್ಳುತ್ತಾರೆ ಎಂಬ ನಂಬಿಕೆ ಒಂದು ಕಾಲದಲ್ಲಿತ್ತು, ಆದರೆ ಈಗ ಆ ನಂಬಿಕೆಯು ಸುಳ್ಳಾಗುತ್ತಾ ಬಂದಿರುವ ಉದಾಹರಣೆಗಳನ್ನು ನೋಡಬಹುದು. ತಮ್ಮ ಆರೋಗ್ಯದ ಬಗ್ಗೆ ಅವರಿಗೆ ಈಗ ಅರಿವು ಮೂಡಿತು. ಯಾವುದೇ ಕಾಯಿಲೆಯಾಗಲೀ ಪರೀಕ್ಷಿಸಿ ಸೂಕ್ತ ಸಮಯದಲ್ಲಿ ಔಷದಿ ತೆಗೆದುಕೊಳ್ಳಬೇಕು ಇಲ್ಲವಾದರೆ ಮುಂದೆ ಅದಕ್ಕೆ ತಕ್ಕ ಬೆಲೆ ತೆತ್ತಬೇಕು ಎಂಬುದು ಮನವರಿಕೆಯಾಗಿದೆ.
- ಸದಾನಂದನ ಆತ್ಮೀಯರಾದ ಕಾರಂತರಿಗೆ ಜ್ವರ, ಬಂದು ಅದರ ಜೊತೆಗೆ ಚಳಿ, ತಲೆನೋವು ಮೈಕೈ ಹೊಟ್ಟೆ ನೋವು ಬಂದು ಮಲಗಿದರು. ಸದಾನಂದ ಮೊದಲು ಮೂರು ಡೋಸ್ ಔಷಧಿ ಕೊಟ್ಟು ಜ್ವರ ಕಡಿಮೆಯಾಗಬಹುದು ಎಂದು ಕೊಂಡಿದ್ದೆ. ಆದರೆ ಮರುದಿನ ಜ್ವರ ವಿಪರೀತ ಜೋರಾಗಿ ಏನೇನೋ ಮಾತನಾಡಲು ಪ್ರಾರಂಭಿಸಿದ್ದರು. ಸದಾನಂದ ಥರ್ಮಾಮೀಟರ್ ನಲ್ಲಿ ಜ್ವರ ನೋಡಿದಾಗ 103 ಎಂದು ತೋರಿಸುತ್ತಿತ್ತು. ಕಾರಂತರ ಮೂತ್ರ ಪರೀಕ್ಷೆ ಮಾಡಿದಾಗ ಟೈಪಾಯ್ಡ್ ಆಗಿದೆ ಎಂದು ತಿಳಿಯುತದೆ, ಸದಾನಂದ ಕಟ್ಟುನಿಟ್ಟಿನ ಪಥ್ಯ ಮೋಸಂಬಿ, ಬಾರ್ಲಿ, ಗ್ಲೂಕೋಸು, ಸೀಯಾಳ ಇಷ್ಟರಲ್ಲೇ ಅವರ ಜೀವನ ರಕ್ಷಣೆ, ಜೊತೆಗೆ ಸದಾನಂದನ ಔಷದೋಪಚಾರದಿಂದಲೂ ಕಾರಂತರ ಜ್ವರ ಕಡಿಮೆ ಯಾಗಲಿಲ್ಲ. ಸದಾನಂದ ಇಂತಹ ನೂರಾರು ಕೇಸ್‌ಗಳನ್ನು ಗುಣಪಡಿಸಿದ್ದ. ಆದರೆ ಹದಿನಾಲ್ಕು ದಿನಗಳಾದರೂ

ಕಾರಂತರ ಜ್ವರ ಬಿಡುವ ಯಾವುದೇ ಸೂಚನೆಯು ಇರಲಿಲ್ಲ. ಇದು ಸದಾನಂದನಿಗೂ ಯೋಚನೆಗೆ ಕಾರಣವಾಯಿತು. ಕೊನೆಗೆ ಸದಾನಂದನ ಎಲ್ಲಾ ಪ್ರಯತ್ನ ವ್ಯರ್ಥವಾದಂತೆ ಕಾರಂತರು ಮರಣ ಹೊಂದಿದರು.

- ಇಲ್ಲಿ ಗಮನಿಸಬೇಕಾಗಿರುವುದು ಕಾರಂತರ ಮರಣವಲ್ಲ, ಸಮಾಜದ ವ್ಯವಸ್ಥೆಯನ್ನು ಸದಾನಂದ ಮನೆಯಲ್ಲಿಯೇ ಎಷ್ಟೇ ಔಷಧಿ ನೀಡಿದರು, ಪಥ್ಯ ಮಾಡಿದರು, ಅದು ವ್ಯರ್ಥ್ಯವಾಯಿತು. ಆಸ್ಪತ್ರೆಯಲ್ಲೇ ಇದ್ದು ಚಿಕಿತ್ಸೆ ಪಡೆದಿದ್ದರೆ ಕಾರಂತರೂ ಬದುಕುತ್ತಿದ್ದರೇನೋ ಎಂಬ ಒಂದು ಭರವಸೆ ಇತ್ತು. ಇದು ಹೌದೂ ಅಲ್ಲವೋ ಎನ್ನುವುದು ಮುಖ್ಯವಲ್ಲ. ಸಾರ್ವಜನಿಕರಿಗೆ ಅನುಕೂಲವಾಗುವಂತೆ ಹತ್ತಿರದಲ್ಲಿ ಬಂದು ಅಸ್ಪತ್ರೆ ಮತ್ತು ಎಲ್ಲಾ ರೀತಿಯ ಅನುಕೂಲಗಳು ದೋರಕಿದ್ದರೆ ಸಾರ್ವಜನಿಕರಿಗೆ ಉಪಯೋಗವಾಗುತ್ತದೆ. ಸದಾನಂದ ಇದ್ದುದರಿಂದ ಕಾರಂತರಿಗೆ ಔಷಧಿ ನಿಡಿದ, ಮನೆಯವರಿಗೆ ಟೈಫಾಯ್ಡ್ ಬಾರದಂತೆ ವ್ಯಾಸಿನೇಷನ್ ಹಾಕಿದೆ, ಇಲ್ಲವಾದರೆ ಏನಾಗಿದೆ ಎಂದು ಸಹ ತಿಳಿಯುತ್ತಿರಲಿಲ್ಲ. ಅದನ್ನು ಬೇರೆ ರೀತಿಯೇ ಅರ್ಥೈಯಿಸುವಂತಹ ಮುಗ್ದರು ಹಳ್ಳಿಗರು, ಆದರೆ ನಗರಗಳಲ್ಲಿ ತಕ್ಷಣ ಆಸ್ಪತ್ರೆಗೆ ದಾಖಲಿಸಿ ಸೂಕ್ತ ಸಮಯದಲ್ಲಿ ಔಷಧಿ ತೆಗೆದುಕೊಳ್ಳುತ್ತಾರೆ. ಅಂತಹ ಅನುಕೂಲವೂ ಹಳ್ಳಿಗರಿಗೆ ದೊರಕಬೇಕು.
- ಸದಾನಂದನ ತಾಯಿ ಸರೋಜಮ್ಮ ಬೆಂಗಳೂರಿನಲ್ಲಿ ಹುಟ್ಟಿ ಬೆಳೆದವರು, ಬೆಂಗಳೂರಿನಲ್ಲಿ ವಾಸವಾಗಿದ್ದ ಅವರಿಗೆ ನಗರ ಜೀವನ ಯಾವುದಕ್ಕೂ ತೊಂದರೆಯಿರಲಿಲ್ಲ ಎಲ್ಲವೂ ದೊರೆಯುತ್ತದೆ. ಸದಾನಂದ ತನ್ನ ಕೋರ್ಸು ಮುಗಿಸಿದ ಮೇಲೆ ಒಬ್ಬನೇ ಕೋಳ್ಯೂರಿಗೆ ಹೋರಟನು. ಅಲ್ಲಿನ ಪ್ರಕೃತಿ ಸೌಂದರ್ಯ ಅವನನ್ನು ಆಕರ್ಷಿಸಿತ್ತು. ಆಗ "ಸರೋಜಮ್ಮ ಇವನಿಗಿಂತ ಹುಚ್ಚಪ್ಪ – ಆ ಹಳ್ಳಿಯಲ್ಲಿ ಏನಿದೆ ಅಂತ ಅಲ್ಲಿಗೆ ಹೋಗ್ತಾನೋ, ಒಂದು ಸಿನಿಮಾ ನೋಡಬೇಕಾದರೆ, ಬೀಚಿಗೆ ಹೋಗಬೇಕಾದರೆ, ಯಾಕೆ ಒಳ್ಳೆಯ ಬಟ್ಟೆ ತೆಗೆಯ ಬೇಕಾದರೆ, ಸಾಮಾನುಗಳು ದೊರೆಯಬೇಕಾದರೆ ಪತ್ತೂರು ಅಥವಾ ಮಂಗಳೂರಿಗೆ ಬರಬೇಕು ಮತ್ತೇನಿದೆ ಆ ಹಳ್ಳಿಯಲ್ಲಿ ಎಂದು ನಗರಗಳಲ್ಲಿ ಸಿಗುವ ಸೌಲಭ್ಯಗಳು ಹಳ್ಳಿಯಲ್ಲಿ"(8) ಸಿಗುವುದಿಲ್ಲ, ಎಂಬುದನ್ನು ಸರೋಜಮ್ಮನ ಮಾತುಗಳಿಂದ ಸೂಪ್ತವಾಗಿ ತಿಳಿಯಬಹುದಾಗಿದೆ.
- ನಗರ ಮತ್ತು ಹಳ್ಳಿಯ ಜೀವನ ಅಲ್ಲಿನ ರೀತಿ – ನೀತಿಗಳೇ ಬೇರೆ ಅದನ್ನು ಒಂದಕ್ಕೊಂದು ಹೋಲಿಕೆ ಮಾಡಲು ಸಾಧ್ಯವಾಗುವುದಿಲ್ಲ. ನಗರದ – ಯಾಂತ್ರಿಕ ಜೀವನದ ಬಿಸಿ ಹಳ್ಳಿಗರಿಗೆ ಇರುವುದಿಲ್ಲ. ಸ್ವಚ್ಚಂದವಾದ ಜೀವನ ಹಳ್ಳಿಗರದು. ಆದರೆ ಮೂಲಭೂತವಾದ ಕೆಲವು ಸೌಲಭ್ಯಗಳು ಎಲ್ಲರಿಗೂ ಎಲ್ಲ ಕಡೆಯೂ ದೊರೆಯುವಂತಾಗಬೇಕು. ಅದಕ್ಕೆ ಹಳ್ಳಿ – ನಗರವೆಂಬ

ಭೇದ ಭಾವ ವಿರಬಾರದು. ನಗರಗಳಲ್ಲಿ ಮನೋರಂಜನೆ ಸಿನಿಮಾ ಅಥವಾ ಬೇರೆ ರೀತಿಯ ಮಾಧ್ಯಮವಾದರೆ ಹಳ್ಳಿಗರಿಗೆ ನಾಟಕ, ಮೇಳ, ಯಕ್ಷಗಾನ ಇವು ಅವರ ಮನೋರಂಜನೆಯ ತಾನವಾಗಬಹುದು.

- ಹಳ್ಳಿಗಳಲ್ಲಿ ಸಿಗುವ ವಾತಾವರಣ ಅಲ್ಲಿನ ಪರಿಸರ ಬೆಟ, ಗುಡ್ಡ, ನದಿ, ಕೆರೆ, ನೈಸರ್ಗಿಕ ಸೌಂದರ್ಯ ನಗರದಲ್ಲಿ ವಾಸ ಮಾಡುವವರಿಗೆ ದೊರೆಯುವುದಿಲ್ಲ. ವ್ಯವಸಾಯವನ್ನೇ ನಂಬಿಕೊಂಡು ಬದುಕುವ ಹಳ್ಳಿಗರ ಜೀವನದ ಜೊತೆ ನಗರದ ಜೀವನದ ಹೋಲಿಕೆಯು ಅಸಾಧ್ಯವೆನ್ನಿಸುತ್ತದೆ. ನಗರದಲ್ಲಿ ಇದ್ದವರಿಗೆ ಹಳ್ಳಿಯನ್ನು ಹೊಂದಿಕೊಳ್ಳುವುದು ಕಷ್ಟ. ಆದರೆ, ಹಳ್ಳಿಯಲ್ಲಿ ಇದ್ದವರು ನಗರ ಜೀವನಕ್ಕೆ ಹೊಂದಿ ಕೊಳ್ಳುತ್ತಾರೆ.

**ಕನಸಿನ ಬಳ್ಳಿ ಕಾದಂಬರಿಯಲ್ಲಿ ಬರುವ ಪ್ರಾದೇಶಿಕ ಅಂಶಗಳು :**

- ಕೋಳ್ಯೂರಿನ ಪ್ರಕೃತಿ ಸೌಂದರ್ಯ ಸದಾನಂದನ ಮನಸ್ಸಿಗೆ ತುಂಬ ಹಿಡಿಸಿರುತ್ತದೆ. ಸಂಜೆಯ ಹೊಂಬಿಸಿಲು ಗುಡ್ಡದ ಮೇಲೆ ಬಿದ್ದಿರುವ ಸೌಂದರ್ಯವನ್ನು ಸವಿಯುವದೇ ಹೆಮ್ಮೆ. ನದಿಯ ಇಕ್ಕೆಲಗಳಲ್ಲಿ ಹರಡಿ ನಿಂತ ಹಸಿರು ಪೈರು, ಅಲ್ಲಲ್ಲಿ ಎದ್ದು ನಿಂತ ಕಾಡು ಗುಡ್ಡ, ಗುಡ್ಡ ಏರಿ ಸಂಜೆಯ ಹೊತ್ತು ಕುಳಿತರೆ ಸೂರ್ಯನ ಕಿರಣಕ್ಕೆ ಪಳಪಳನೆ ಹೊಳೆಯುವ ಸಮುದ್ರ, ಅದರಲ್ಲಿ ಕಾಣುವ ಹಾಯ ದೋಣಿಗಳು, ಸಮುದ್ರದ ಈಚೆಗೆ ಕಾಣುವ ಗಾಳಿ ಮರಗಳ ಸಾಲು ಸಾಲು,. ಅವುಗಳ ನಡುವೆ ಹಾದು ಹೊಗುವ ರೈಲು, ಅದರ ಹೊಗೆ, ಸಿಳ್ಳೆ, ಆಕಾಶದಲ್ಲಿ ಅಲ್ಲಲ್ಲಿ ಬೆಳ್ಳಿ ಮೋಡಗಳು, ಸಂಜೆಗೆ ಗೂಡಿಗೆ ಹೊರಟ ಹಕ್ಕಿಗಳ ಹಾಡು ಇವುಗಳನ್ನು ಆಸ್ವಾದಿಸುವುದು ಒಂದು ರೀತಿಯ ಮನೋರಂಜನೆ ಯಾಗುತ್ತದೆ.
- ಸದಾನಂದ ಮೈಸೂರಿನಿಂದ ಹೊರಟು ಪುತ್ತೂರಿನ ಮಾರ್ಗವಾಗಿ, ಮಂಜೇಶ್ವರದ ಬಸ್ಸಿನಲ್ಲಿ ಬಂದು ಸುಂಕದ ಕಟ್ಟೆಯಲ್ಲಿ ಇಳಿದಾಗ, ಅವನಿಗಾಗಿ ಕಾರಂತರು ಕಾಯುತ್ತ ಕುಳಿತಿದ್ದರು. ಸದಾನಂದನನ್ನು ಆತ್ಮೀಯವಾಗಿ ಸ್ವಾಗತಿಸಿದರು. ಸದಾನಂದನ ಬಿಡಾರ ತುಸು ಜಾಸ್ತಿ ಇತ್ತು. ಅದನ್ನು ನೋಡಿ ಕಾರಂತರು ನಿಮಗೆರ ಈಗ ಅಗತ್ಯವಿರುವ ಸಾಮಾನಿನ ಬ್ಯಾಗ್ ತೆಗೆದು ಕೊಳ್ಳಿ ಅದಕ್ಕೆ ನಾನು ಹೆಗಲು ಕೊಡುತ್ತೇನೆ ಮಿಕ್ಕ ಸಾಮಾನು ನಮ್ಮ ಇಬ್ರಾಹಿಂ ಸಾಹೇಬ ಅಂಗಡಿಯಲ್ಲಿ ಇರಲಿ ನಾಳೆ ಕೆಲಸದಾಳನ್ನು ಕಳುಹಿಸಿ ತರಿಸಿದಾರಾಯಿತು ಎಂದು ಅವನ ಕೈ ಚೀಲಗಳನ್ನು ತಾವೇ ಹೊತ್ತು ದಾರಿ ತೋರಿಸುತ್ತ ಮುಂದೆ ನಡೆದರು.
- ಸದಾನಂದ ನನ್ನು ಕಾರಂತರ ಪತ್ನಿ ಸ್ವಾಗತಿಸಿ ನಂತರ ಕುಡಿಯಲು ಬೆಲ್ಲ – ನೀರನ್ನು ತಂದು ಕೊಟ್ಟರು. ನಂತರ ಸದಾನಂದನಿಗೆ ಸ್ನಾನ ಮಾಡಲು ಎಲ್ಲ ವ್ಯವಸ್ಥೆ ಕಾರಂತರೇ ಮಾಡಿದರು.

- ಸದಾನಂದ ಹಳ್ಳಿಗೆ ಬಂದು ಅಲ್ಲಿ 'ಗೀತಾ ಕ್ಲಿನಿಕ್' ಪ್ರಾರಂಭಿಸಿದ ಮೇಲೆ ಹಳ್ಳಿಗರಿಗೆ ಅನುಕೂಲವಾಗತೊಡಗುತ್ತದೆ. ಆದರೆ ಕೆಲವೊಂದು ಸಮಯದಲ್ಲಿ ಸದಾನಂದನೇ ಹಳ್ಳಿಯ ಮೂಲೆ ಮೂಲೆಗೂ ಹೋಗಿ ರೋಗಿಗಳನ್ನು ಪರೀಕ್ಷಿಸಲು ಕರೆ ಬರತೋಡಗುತ್ತದೆ. ಹೊಗದೆ ನಿರ್ವಾಹವಿಲ್ಲ. ರೋಗಿಗಳ ಜೀವ ಉಳಿಸಬೇಕಾದರೆ ಹೋಗಲೇಬೇಕು. ಹೋಗುವುದೆಂದರೆ ಅದೇನೋ ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ಕಾರಣ ಗದ್ದೆ-ಹುಣೆಗಳನ್ನು ದಾಟಿ, ತಡೆದು ದಾರಿ ಗುಂಟೆಗಳನ್ನು ಹತ್ತಿ, ಇಳಿದು ಗುಡ್ಡೆ ಬಯಲುಗಳನ್ನು ಸುತ್ತಿ ಹೋಗುವುದು ಎಷ್ಟು ತ್ರಾಸದಾಯಕವೋ ಅಷ್ಟೇ ಶ್ರಮದಾಯಕವೂ ಹೌದು. ಒಂದು ಕಡೆ ಹಳ್ಳಿಯ ಅಡಚಣೆಯ ದಾರಿಗಳು ಈ ರೀತಿಯ ತಾಪತ್ರಯ ಕೊಟ್ಟರೆ, ಇನ್ನೊಂದು ಕಡೆ ಜೋರಾಗಿ ಬಿಡದೆ ಸುರಿಯುವ ಮಳೆ ಇವುಗಳನ್ನು ಮೀರಿ ಹೋಗಿ ಸದಾನಂದ ರೋಗಿಗಳ ಪರೀಕ್ಷೆ ಮಾಡಿ ಔಷಧಿ ನೀಡಬೇಕಾಗಿತ್ತು.
- ಸದಾನಂದನ ತಾತನ ತಂಗಿ ಕಾವೇರಜ್ಜಿಯು ಅಸೌಖ್ಯ ಎಂದು ತಿಳಿದಾಗ ಅವರನ್ನು ನೋಡಲು, ಮುನ್ನಿಪ್ಪಾಡಿ ಹೊಳೆದಾಟಿ ಕಾರ್ಯದ ಬಯಲಿನಲ್ಲಿ ಹಾದು, ಕುರುಡುಪದವು ಬೆಟ್ಟ ಹತ್ತಿ ಆಚೆ ಇಳಿದರೆ ಎರಡು ಮೈಲಿಗೆ ವಡಿಯೂರು ಸಿಗತ್ತದೆ ಆದರೆ ದಾರಿ ತುಂಬಾ ಕಷ್ಟದಾಯಕ ಮಾರ್ಗದಲ್ಲಿ ಹೋಗುವುದಾದರೆ ಒಂಬತ್ತು ಮೈಲು ಇದು ಒಳದಾರಿ ಆರು ಮೈಲಿ ಒಳಗೆ ಅಷ್ಟೆ, ಬರೀ ಎರಡು ಗಂಟೆಯ ದಾರಿ ಎಂದು ಕಾರಂತರು ಹೇಳುತ್ತಾರೆ. ಆಗ ಸದಾನಂದು ಮತ್ತು ಕಾರಂತರು ರಾತ್ರಿಯೇ ಹೊರಟು ಸುಮಾರು ಹತ್ತುವರೆ ಗಂಟೆಗೆ ವಡಿಯೂರು ತಲುಪುತ್ತಾರೆ.
- ಇಲ್ಲಿ ವಾಹನಗಳ ಸೌಲಭ್ಯವೂ ಕಡಿಮೆ ಮತ್ತು ಸರಿಯಾದ ಮಾರ್ಗದ ವ್ಯವಸ್ಥೆಯೂ ಇರುವುದಿಲ್ಲ. ಇದೆಲ್ಲವೂ ಅಲ್ಲಿ ನೆಲಸಿರುವವರಿಗೆ ಸರ್ವೆ ಸಾಮಾನ್ಯವಾದಂತೆ ಅಲ್ಲಿನ ಪ್ರಾದೇಶಿಕತೆಗೆ ಹೊಂದುಕೊಂಡಿರುತ್ತಾರೆ.
- ಸದಾನಂದ ತಮ್ಮ ಜಮೀನನ್ನು ಅಭಿವೃದ್ದಿ ಪಡಿಸುವ ಬಗ್ಗೆ ಸದಾನಂದ ತಾತಾನ ಆಸ್ತಿ ನಾಲ್ಕು ಬಾಕಿ ಮಾರು ಗದ್ದೆ, ಇಲ್ಲಿ ಭತ್ತ ಬೆಳೆಯುತ್ತಿದ್ದರು. ಸದಾನಂದ ಒಂದು ಕಂಬಳದ ಗದ್ದೆಯಲ್ಲಿ ಅಡಿಕೆ ಸಸಿ ನೆಡಲು ಸುಮಾರು ಮೂರಡಿ ಚದುರಳತೆಯ ಹೊಂಡಗಳನ್ನು ಒಂದರಿಂದ ಇನ್ನೊಂದು ಹನ್ನೆರಡು ಅಡಿಯಷ್ಟು ದೂರಬಿಟ್ಟು ಅಗೆಸುವ ಸಿದ್ದತೆಗೆ ತೊಡಗಿದ, ಸುಮಾರು ಒಂದೂವರೆ ಸಾವಿರದಷ್ಟು ಅಡಿಕೆ ಸಸಿ ನಡುವ ಹೊಂಡಗಳ ಸಿದ್ದತೆಯಾಯಿತು. ಸದಾನಂದ ಮಂಜೇಶ್ವರದ ಬಿ.ಡಿ.ಓ. ಆಫೀಸಿನ ಫಾರ್ಮಿನಿಂದ ಅಡಿಕೆ ಸಸಿಗಳನ್ನು ತಂದು ತನ್ನ ಜಮೀನಿನಲ್ಲಿ ನಡೆಸಿದ. ಇದಾದ ಮೇಲೆ ತಮ್ಮ ಮನೆಯ ಹಿಂದೆ ಸುಮಾರು ಒಂದು,

ಒಂದೂವರೆ ದಕರೆ ಸ್ಥಳದಲ್ಲಿ ತೆಳ್ಳಗೆ ಕಾಡು ಹರಡಿತ್ತು. ಭೂಮಿ ಅಲ್ಲಲ್ಲಿ ಏರುಪೇರು ಇದ್ದರೂ ಕಣ್ಣ ನೋಟಕ್ಕೆ ಸಮತಟ್ಟಾಗಿತ್ತು ಅದನ್ನು ಕಡಿದು ಗದ್ದೆ ಮಾಡಬೇಕೆಂಬ ಆಲೋಚನೆ ಅವನದಾಗಿತ್ತು. ತಮ್ಮ ಗದ್ದೆಯಲ್ಲಿ ಅಡಿಕೆ ಸಸಿ ನಟ್ಟಷ್ಟು ಭೂಮಿ ಗದ್ದೆಯಾಗಿ ಸಿಕ್ಕಿದರೆ ಇನ್ನು ಹೆಚ್ಚಿನ ಬೆಳೆ ಬೆಳೆಯಲು ಸಹಾಯವಾಗುವುದು ಎಂಬ ಅಭಿಪ್ರಾಯ ಅವನದಾಗಿತ್ತು. ಅದರಮತೆ ಕಾಡುಗಳ, ಗಿಡ, ಪೊದರುಗಳನ್ನು, ಮುಳ್ಳ ಮರಗಳನ್ನು ಕಡಿದು, ಭೂಮಿಯನ್ನು ಸಮತಟ್ಟು ಮಾಡಿ, ಓರೆಕೋರೆಯಾದ ಕಂದಕ ಅಗೆದು ಅದರ ಹೊರಗೆ ಮುಳ್ಳ ಬೇಲಿಯನ್ನು ಹಾಕಿ, ಹೊರಗಿನಿಂದ ದನಕರುಗಳ ಹಾವಳಿ ಗದ್ದೆಗೆ ಆಗದಮತೆ ಮಾಡಿಸಿದ. ನಂತರ ಹೊಳೆಯ ಬದಿಯ ಗದ್ದೆಗಳಲ್ಲಿ ಹೆಚ್ಚು ಪೈರು ಬರುತ್ತದೆ ಎಂಬ ಮಾತು ಸುಳ್ಳ ದಡ ಉಕ್ಕಿ ಹರಿದರೆ, ನೀರು ನಾಲ್ಕೈದು ದಿವಸ ಗದ್ದೆಯಲ್ಲಿ ನಿಂತರೆ, ಹೊಗೆ ಗದ್ದೆಯನ್ನು ಆರಿಸುವುದಷ್ಟೆ ಹೊರತು ನದಿಯ ನೀರಿನಲ್ಲಿ ಬಂದ ಕೆಸರು ಮಣ್ಣು ಹೆಚ್ಚು ಫಲ ಕೊಡಲು ಕಾರಣವಾದರೂ, ಈ ಹೋಗೆ ಅದಕ್ಕೆ ಅಡೆತಡೆಯಾಗಿ ಬರುವುದು, ಅದರಿಂದ "ಮರಳಿನ ರಾಶಿಯನ್ನು ಕಡಿದು ಹೊಳೆದು ಮಧ್ಯಭಾಗಕ್ಕೆ ರಾಶಿ ಹಾಕಿ, ಹೊಳೆಯ ದಡದಲ್ಲಿ ಒಂದರ ಮೇಲೊಂದರಮತೆ ಉದ್ದಕ್ಕೂ ಸುಮಾರು ಒಂದೂವರೆ ಫರ್ಲಾಂಗಿ ನಷ್ಟು ದೂರ ಕಲ್ಲು ಕಟ್ಟಲಾಯಿತು. ದಡದಿಂದ ಮೇಲೆ ಕಲ್ಲುಏರಿಸುವಾಗ ಎರಡು ಅಡಿಯಷ್ಟು ಅಗಲಕ್ಕೆ ಕಲ್ಲು ಇರಿಸಿ, ನಡುವೆ ಗಾರೆ ಹಾಕಿ, ನಾಲ್ಕು ನಾಲ್ಕು ಅಡಿಯಷ್ಟು ಎತ್ತರಕ್ಕೆ ಏರಿಸಿ, ಅದರ ಮೇಲೆ ಮಣ್ಣು ಹಾಸಿ, ಅದರಲ್ಲಿ ಕಳ್ಳರು ಬಾರದಂತೆ ಮುಂಜಾಗರೂಕತೆಗಾಗಿ ಕಳ್ಳಗಿಡಗಳನ್ನು, ಮುಳ್ಳ ಸಸಿಗಳನ್ನು ನೆಡಲಾಯಿತು"(9). ಹೀಗೆ ಸದಾನಂದ ತನ್ನ ಯೋಜನೆಗಳನ್ನು ಒಂದರಂತೆ ಒಂದನ್ನು ಸಂಪೂರ್ಣ ಮಾಡಲು ತೊಡಗಿದ.

- "ಅಡಿಕೆ ಸಸಿಗಳಿಗೆ ನೀರಿನ ಅಭಾವವನ್ನು ತಪ್ಪಿಸಲು ಮುನ್ನಿಪ್ಪಾಡಿ ಹೊಳೆಗೆ ಪಂಪು ಇಟ್ಟರೆ, ಮಳೆಗಾಲ ಬರುವ ತನಕ ನೀರಿನ ಕೊರತೆ ಇಲ್ಲ. ಹೊಳೆಯಲ್ಲಿ ನೀರಿನ ಒರತೆ ಬಲವಾಗಿ ಇಲ್ಲದಿದ್ದರೂ ಅಲ್ಪ ಸ್ವಲ್ಪ ನೀರು ಹರಿಯುತ್ತಲೇ ಇರುತ್ತದೆ. ಹತ್ತು – ಹದಿನೈದು ಅಡಿ ಉದ್ದಕ್ಕೆ ಅಷ್ಟೇ ಆಳಕ್ಕೆ ದಡದ ಬದಿಯಲ್ಲಿ ಅಗೆದು ಅದಕ್ಕೆ ಪಂಪು ಇರಿಸಿದರೆ, ನೀರಿನ ಕೊರತೆ ನಿವಾರಣೆ ಯಾಗುತ್ತದೆ"(10). ಆದರೆ ಇದರಿಂದ ಬೇರೆಯವರು ತಗಾದೆ ತೆಗೆಯಬಹುದು ಎಂದು ತಿಳಿದು, ಹೊಳೆಯ ದಡಕ್ಕೆ ತಾಗಿಯೇ ತನ್ನ ತೋಟದೊಳಗೆ ಹೊಳೆಯಾದ ಎಂಟು – ಹತ್ತು ಅಡಿ ಅಳವಾದ ಕೆರೆ ತೆಗೆಸಿದ ನೀರು ಸಹ ದೊರಕಿತು. ಕೆರೆಯನ್ನು ವಿಸ್ತಾರನ್ನಾಗಿಯೂ ಮಾಡಿ ಅದರ ಸುತ್ತಲೂ ಕಲ್ಲುಕಟ್ಟಿಸಿ ಮಣ್ಣು ಕುಸಿದು ಬೀಳದ ಹಾಗೆ ಮಾಡಿ ಪಂಪ ತರಿಸಿ ಫಿಟ್ ಮಾಡಿಸಿ ತೋಟದಲ್ಲಿ ಇದ್ದೆ ನೀರಿನ ಕೊರತೆಯನ್ನು

ನೀಗಿಸಿಕೊಂಡ. ಹೀಗೆ ಸದಾನಂದ ತನ್ನ ಯೋಜನೆಗಳನ್ನು ಒಂದೊಂದಾಗಿ ಕಾರ್ಯಗತ ಮಾಡಿಕೊಂಡನು.

- ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ ಎಂದರೆ ವೈದ್ಯನಾದ ಸದಾನಂದನಿಗೆ ಕೃಷಿಯ ಬಗ್ಗೆ ಯಾವುದೋ ರೀತಿಯ ಅನುಭವವಿರುವುದಿಲ್ಲ. ಅದೂ ಅಲ್ಲದೆ ಅವನು ಹುಟ್ಟಿ ಬೆಳೆದು. ವಿದ್ಯಾಭ್ಯಾಸವನ್ನು ಮಾಡಿದ್ದು, ಎಲ್ಲ ನಗರದಲ್ಲಿ, ಹಳ್ಳಿಯಾಗಲೀ ಹಳ್ಳಿಯ ಜೀವನವಾಗಲಿ, ಕೃಷಿಯಾಗಲೀ ದೂರದಿಂದ ನೊಡಿದವನು. ತಮ್ಮ ಪೂರ್ವಿಕರ ಆಸ್ತಿಯನ್ನು ಮಾರಬಾರದು ತಾನು ಅಲ್ಲಿ ಕೃಷಿ ಮಾಡಿಸಬೇಕು ಎಂಬ ಆಸೆಯಿಂದಲೇ ತನ್ನ ಪ್ರತಿ ಯೋಜನೆಗಳನ್ನು ಸೂಕ್ತವಾದ ರೀತಿಯಲ್ಲಿ ಎಲ್ಲೂ ಎಡವದೆ ಹೆಜ್ಜೆ ಇಡುವ ರೀತಿ ಈಗೀನ ಯುವಕರಿಗೆ ಮಾದರಿ ಎನಿಸಿದೆ. ಹಣವನ್ನು ಹಾಳು ಮಾಡದೆ, ಒಂದೊಂದೆ ಕೆಲಸವನ್ನು ಪೂರೈಸುವ ಬಗ್ಗೆ ಹೆಮ್ಮೆ ಎನಿಸುತ್ತವೆ. ರಾಘವನು ತಮ್ಮ ಅಣ್ಣ ಜಮೀನಿನಲ್ಲಿ ಮಾಡಿದ ಸಾಹಸ ನೋಡಿ ಹೆಮ್ಮೆ ಎನಿಸುತ್ತದೆ. ಇಂತಹ ಒಳ್ಳೆಯ ನೆಲವನ್ನು ಬಿಟ್ಟು ಯಾರೂ ಕೈ ಕೆಳಗೆ ಕೆಲಸ ಮಾಡುವಂತಾಯಿತು ತನಗೆ, ಇನ್ನು ಇಲ್ಲೆ ಇದ್ದು ಅಣ್ಣನಿಗೆ ಸಹಾಯಕವಾಗಿರುತ್ತೇನೆ ಎನ್ನುವ ಮನಸ್ಥಿತಿಗೆ ಬರುತ್ತಾನೆ. ಈಗೀನ ಎಷ್ಟೋ ಹಳ್ಳಿಯ ಹುಡುಗರು ತಮ್ಮ ಜಮೀನಿನಲ್ಲಿ ಕೃಷಿ ಮಾಡದೆ ನಗರ ಜೀವನಕ್ಕೆ ಕಾತರಿಸುತ್ತಿದ್ದಾರೆ. ಕಷ್ಟಪಟ್ಟರೆ ಸುಖ ಎಂಬ ತತ್ವ ಈಗೀನ ಹುಡುಗರಿಗೆ ಅನ್ವಯಿಸುವುದಿಲ್ಲ. ನಗರದ ಐಶಾರಾಮಿ ಜೀವನ ಅವರನ್ನು ಮರಳು ಮಾಡಿದೆ. ದೂರದ ಬೆಟ್ಟ ನೊಣ್ಣಗೆ ಎಂಬಂತೆ ನಗರ ಜೀವನಕ್ಕೆ ಮುಗಿ ಬೀಳುತ್ತಿದ್ದಾರೆ.

ಪ್ರತಿನಿತ್ಯ ಬೆಳಗ್ಗೆ ಮತ್ತು ಸಂಜೆ ಪಾರ್ವತಿಯು ಮುಖ ತೊಳೆದೊಡನೆ ಹೊಸ್ತಿಲಲ್ಲಿ ಹೂ ಇರಿಸಿ, ಬಿಂದಿಗೆಯಲ್ಲಿ ನೀರಿರಿಸಿ ನಮಸ್ಕರಿಸುತ್ತಾಳೆ. ಆ ಮೇಲೆ ಹಟ್ಟಿಗೆ ಹೋಗಿ ದನದ ಮುಖಕ್ಕೆ ಕುಂಕುಮ ಇಡುತ್ತಾಳೆ. ಅದಕ್ಕೆ ತಿನ್ನಲು ಸಣ್ಣ ತುಂಡು ಬೆಲ್ಲ ಈಯುತ್ತಾಳೆ. ಸಂಜೆಯೂ ಹಾಗೇ ತುಳಿಸಿ ಕಟ್ಟೆಯ ಎದರು ಹಣತೆಯಲ್ಲಿ ದೀಪ ಇರಿಸಿ, ತುಳಸಿ ಕಟ್ಟೆಗೆ ಸುತ್ತು ಬಂದು ನಮಸ್ಕರಿಸುತ್ತಾಳೆ. ಇದನ್ನೆಲ್ಲಾ ನೋಡಿದಾಗ ಸದಾನಂದನಿಗೆ ಭಾರತೀಯ ಸಂಸ್ಕೃತಿಯು ಉಳಿದಿದ್ದರೆ ಅದು ಈಗಲೂ ಇರುವುದು ಹಳ್ಳಿಯಲ್ಲಿ ಎಂಬ ಅರಿವಾಗುತ್ತದೆ. ಇಂತಹ ಆಚರಣೆಗಳು ಅಲ್ಲಿನ ಪ್ರಾದೇಶಿಕತೆಯ ಮೇಲೆ ಬೆಳಕು ಚೆಲ್ಲುತ್ತವೆ. ಆ ಪ್ರದೇಶದ ಪ್ರಾದೇಶಿಕತೆಯನ್ನು ತಿಳಿಯಲು ಸಹಾಯಕವಾಗುತ್ತದೆ. ಇಂತಹ ಆಚರಣೆಗಳು ಪ್ರದೇಶವಾರು ಬೇರೆ ಬೇರೆ ಯಾಗಿರುತ್ತದೆ. ಒಂದು ಪ್ರದೇಶದಲ್ಲಿ ಆಚರಿಸುವ ಆಚರಣೆಗಳು ಮತ್ತೊಂದು ಪ್ರದೇಶದಲ್ಲಿ ಕಾಣಲು ಸಾಧ್ಯವಿಲ್ಲ. ಸ್ವಲ್ಪ ಮಟ್ಟಿಗಾದರೂ ವ್ಯತ್ಯಾಸವನ್ನು ಕಾಣಬಹುದು. ಹಬ್ಬ, ಪೂಜೆಗಳು, ಸಹ ಪ್ರದೇಶವಾರು ವ್ಯತ್ಯಾಸದಿಂದ ಕೂಡಿರುತ್ತದೆ. ಕೆಲವೊಂದು

ಹಬ್ಬಗಳು ಆಯಾ ಪ್ರದೇಶಕ್ಕೆ ಮಾತ್ರ ಸೀಮಿತವಾದ ಆಚರಣೆಗಳಾಗಿರುತ್ತದೆ. ಅಂತಹ ಆಚರಣೆಗಳು ಬೇರೆ ಪ್ರದೇಶದಲ್ಲಿ ಕಾಣಲು ಸಾಧ್ಯವಿಲ್ಲ.

ಹೀಗೆ ಅನಂತ ಕಾದಂಬರಿಯಲ್ಲಿ ಬರುವ ಸಾಮಾಜಿಕ ಮತ್ತು ಪ್ರಾದೇಶಿಕ ಅಂಶಗಳನ್ನು ಗಮನಿಸಬಹುದಾಗಿದೆ. ಎರಡೂ ಕಾದಂಬರಿಗಳಲ್ಲಿ ಕಂಡು ಬರುವ ಸಾಮಾಜಿಕ ಮತ್ತು ಪ್ರಾದೇಶಿಕ ಅಂಶಗಳನ್ನು ಗಮನಿಸಿದಾಗಿದೆ. ಅನಂತ ಕಾದಂಬರಿಯಲ್ಲಿ ಸಾಮಾಜಿಕ ಅಂಶ ಹೆಚ್ಚಾಗಿದೆ ಮತ್ತು ಪ್ರಾದೇಶಿಕ ಅಂಶವೂ ಗಮನಿಸಬಹುದಾಗಿದೆ. ಆದರೆ ಕನಸಿನ ಬಳ್ಳಿ ಕಾದಂಬರಿಯಲ್ಲಿ ಸಾಮಾಜಿಕ ಮತ್ತು ಪ್ರಾದೇಶಿಕ ಅಂಶ ಎರಡೂ ಇದೆ. ಸದಾನಂದನು ಹಳ್ಳಿಯಲ್ಲಿ ತಮ್ಮ ಜಮೀನಿನ ಅಭಿವೃದ್ಧಿಯು ಸಾಮಾಜಿಕ ಮತ್ತು ಪ್ರಾದೇಶಿಕ ಎರಡೂ ಕಡೆ ನೋಡಬಹುದಾಗಿದೆ. ಪ್ರಾದೇಶಿಕ ಹಿನ್ನೆಲೆಯಲ್ಲಿಯೂ ಮುಖ್ಯವಾಗುತ್ತದೆ. ಸಮಾಜದಲ್ಲಿ ವೃತ್ತಿ ಯಾವುದಾದರೂ ಶ್ರಮ ಮತ್ತು ನಂಬಿಕೆಗಳಿಂದ ಕೆಲಸ ಮಾಡಿದರೆ ಅದರ ಫಲ ದೊರಕುತ್ತದೆ. ಅದು ನಿಧಾನವಾದರೂ ಒಳ್ಳೆಯದೇ ಆಗುತ್ತದೆ ಎಂಬುದನ್ನು ಗಮನಿಸಬಹುದಾಗಿದೆ. ವಿದ್ಯಾವಂತ, ವಿಚಾರವಂತರೂ ಸಹ ಸಮಾಜದಲ್ಲಿ ಎಂತಹ ರೀತಿ ಇರುತ್ತಾರೆ. ಎಂಬುದಕ್ಕೆ ಒಂದು ಕಡೆ ವಿಧವೆ ನರ್ಸ್ ಆಗಿ ಕೆಲಸ ಮಾಡುವ ವಸಂತಿಯನ್ನು ಮೆಚ್ಚಿದ ಸದಾನಂದ ಅಣ್ಣ ಬೆಂಬಲ ತಮ್ಮ ರಾಘವ. ಆದರೆ ನ್ಯಾಯಧೀಶರಾದ ನರ್ಸಪ್ಪಯ್ಯ ಮತ್ತು ಹೆಂಡತಿ ಸರೋಜಮ್ಮ ಅವಳನ್ನು ಸೊಸೆಯಾಗಿ ಸ್ವೀಕರಿಸಲು ತಮಗೆ, ತಮ್ಮ ಅಂತಸ್ತಿಗೆ ಕುಂದು ಎಂಬ ಭಾವನೆ ಬರುತ್ತದೆ ಎಂದು ನಿಲುವು ತಾಳಿರುತ್ತಾರೆ. ಇದು ಉತ್ತಮ ಉದಾಹರಣೆಯಾಗಿದೆ. ಅನಂತ ಮತ್ತು ಕನಸಿನ ಬಳ್ಳಿ ಎರಡು ಕಾದಂಬರಿಗಲ ಕಾಸರಗೋಡಿನ ಸುತ್ತಮುತ್ತಲಿನ ಪ್ರದೇಶದಲ್ಲಿ ನಡೆಯುವುದರಿಂದ ಅಲ್ಲಿನ ಪ್ರಾದೇಶಿಕತೆ ಮತ್ತು ಜೀವನದ ಬಗ್ಗೆ ತಿಳಿಯ ಬಹುದಾಗಿದೆ. ಅಲ್ಲಿನ ಸುಂದರ ಪರಿಸರದ ವರ್ಣನೆಯನ್ನು ಗಮನಿಸಬಹುದಾಗಿದೆ. ಅನಂತ ದಿಲ್ಲಿ ಸಾಮಾಜಿಕ ಅಂಶವಾಗಿ ಕಾಣುವುದು ವಿವಾಹ ಮಾತ್ರ, ಬೆಳೆದು ನಿಂತ ಹೆಣ್ಣು ಅಥವಾ ಗಂಡು ಮಕ್ಕಳಿಗೆ ವಿವಾಹ ಮಾಡಿ ತಮ್ಮ ಜವಾಬ್ದಾರಿ ಕಳೆದುಕೊಳ್ಳಬೇಕು ಎಂಬುದು ಎಲ್ಲ ತಂದೆ ತಾಯಿಯ ಆಸೆಯಾಗಿರುತ್ತದೆ. ಈ ಅಂಶದ ಮೇಲೆ ಇಲ್ಲಿ ಬೆಳಕು ಚೆಲ್ಲಿದೆ ಇದು ಎಲ್ಲಾ ಸಮಾಜದಲ್ಲೂ ನಡೆಯುವ ಮುಖ್ಯ ಸಂಗತಿಯೂ ಆಗಿದೆ.

ಹೀಗೆ ಎರಡೂ ಕಾದಂಬರಿಗಳಲ್ಲಿ ಮುಖ್ಯವಾದ ಸಾಮಾಜಿಕ ಮತ್ತು ಪ್ರಾದೇಶಿಕ ಅಂಶಗಳು ಯಾವುದು ಎಂಬುದನ್ನು ಪಟ್ಟಿ ಮಾಡಲಾಗಿದೆ.

ಅಡಿ ಟಿಪ್ಪಣಿ

(1). ಡಾ. ಬಿ. ಎಂ. ಪುಟ್ಟಯ್ಯನವರ ಸಂಶೋಧನೆಯ ತಾತ್ವಿಕ ಆಯಾಮಗಳು, ಪುಟ-100

(2). ಡಾ. ಬಿ. ಎಂ. ಪುಟ್ಟಯ್ಯನವರ ಸಂಶೋಧನೆಯ ತಾತ್ವಿಕ ಆಯಾಮಗಳು, ಪುಟ-100

(3). ಡಾ. ಬಿ. ಎಂ. ಪುಟ್ಟಯ್ಯನವರ ಸಂಶೋಧನೆಯ ತಾತ್ವಿಕ ಆಯಾಮಗಳು, ಪುಟ-100

(4). ಡಾ. ಬಿ. ಎಂ. ಪುಟ್ಟಯ್ಯನವರ ಸಂಶೋಧನೆಯ ತಾತ್ವಿಕ ಆಯಾಮಗಳು, ಪುಟ-135

(5). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-215

(6). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-189

(7). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-191

(8). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-280

(9). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-321

(10). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-321

# ಅಧ್ಯಾಯ – 5

**ಭಾಷೆ ಮತ್ತು ಸಾಹಿತ್ಯದ ಸಂಬಂಧ :**

ಭಾಷೆ ಸಾಹಿತ್ಯಕ್ಕೆ ವಾಹಕವಾಗಿರುವುದು ಮಾತ್ರವಲ್ಲದೆ ಭಾಷೆಯೇ ಕೆಲವು ವೇಳೆ ಸಾಹಿತ್ಯವಾಗಿಯೂ, ಸಾಹಿತ್ಯವೇ ಭಾಷೆಯಾಗಿಯೂ ಕಾಣಿಸಿಕೊಳ್ಳಬಹುದು. ಭಾಷೆಗೂ ಸಾಹಿತ್ಯಕ್ಕೂ ನಿಕಟವಾದ ಸಂಬಂಧವಿದೆ, ಭಾಷೆ ಇಲ್ಲದೆ ಸಾಹಿತ್ಯವಿಲ್ಲ, ಸಾಹಿತ್ಯದಲ್ಲಿ ಮುಖ್ಯವಾಗಿ ಎರಡು ವಿಧ. ಅವುಗಳಲ್ಲಿ ಒಂದು ಲಿಖಿತ ಸಾಹಿತ್ಯ, ಇನ್ನೊಂದು ಅಲಿಖಿತ ಸಾಹಿತ್ಯ. ಇವೆರಡರಲ್ಲಿಯೂ ಭಾಷೆಯ ಪಾತ್ರ ಮುಖ್ಯವಾದುದಾಗಿದೆಯಲ್ಲದೆ. ಸಾಹಿತ್ಯದ ಈ ಪ್ರಕಾರಗಳಿಗೆ ಅವುಗಳಲ್ಲಿ ಬಳಕೆಯಾಗಿರುವ ಭಾಷೆಯೇ ಮುಖ್ಯ ಕಾರಣವಾಗಿದೆ. ಲಿಖಿತ ಸಾಹಿತ್ಯವು ಗ್ರಾಂಥಿಕ ಅಥವಾ ಬರಹದ ಭಾಷೆಗೆ ಸಂಬಂಧಿಸಿದ್ದರೆ, ಜಾನಪದ ಸಾಹಿತ್ಯವು ಆಡು ಭಾಷೆಗೆ ಸಂಬಂಧಿಸಿದ್ದಾಗಿರುತದೆ, ಅದು ಅಭಿಜಾತವಾಗಿರಲಿ, ಜಾನಪದ ಸಾಹಿತ್ಯವಾಗಿರಲಿ, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಭಾಷೆ ಒಂದೇ ಬಗೆಯಲ್ಲಿ ಬಳಕೆಯಾಗಿಲ್ಲ, ಅದು ಪ್ರಕಾರದಿಂದ ಪ್ರಕಾರಕ್ಕೆ ಬೇರೆ ಬೇರೆಯಾಗಿ ಕಂಡು ಬರುವುದು. ಪದ್ಯದ ಭಾಷೆ, ಗದ್ಯದ ಭಾಷೆಗಿಂತ ಬೇರೆ, ನಾಟಕದ ಭಾಷೆ, ಕಥೆ ಕಾದಂಬರಿಗಳ ಭಾಷೆ ಬೇರೆ. ಭಾಷೆ ಮತ್ತು ಸಾಹಿತ್ಯ ಇವುಗಳ ನಡುವಿನ ಸಂಬಂಧವನ್ನು ನಿರ್ಧರಿಸಿ ವಿವರಿಸಿಕೊಳ್ಳಬೇಕಾದರೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಭಾಷೆ ಯಾವ ಯಾವ ಬಗೆಯಲ್ಲಿ ಬಳಕೆಯಾಗಿದೆ ಎಂಬುದನ್ನು ಗಮನಿಸಬೇಕಾಗುತ್ತದೆ.

ಭಾಷೆಯು ಬೇರೆ ಬೇರೆ ಅಭಿವ್ಯಕ್ತಿ ಮಾಧ್ಯಮಗಳಾಗಿವೆ. ಇವುಗಳಲ್ಲಿ ಬಳಸಿರುವ ಭಾಷೆಯನ್ನಾಗಲಿ, ಅದರಿಂದ ಹೊರ ಬರುವ ಸಾಹಿತ್ಯವನ್ನಾಗಲಿ, ಅದು ಶುದ್ದ ಅಥವಾ ಅಶುದ್ದವೆನ್ನುವುದು ಎಲ್ಲಾ ವೇಳೆಯಲ್ಲಿಯೂ ಅಷ್ಟೊಂದು ಸಮಂಜಸವಾದುದ್ದೇನಲ್ಲ.

ಲಿಖಿತ ಸಾಹಿತ್ಯದಲ್ಲಿ ಪದ್ಯ, ಗದ್ಯ, ಕತೆ, ಕಾದಂಬರಿ, ನಾಟಕ, ಪ್ರಬಂಧ ಮುಂತಾದ ಪ್ರಕಾರಗಳು ಕಂಡು ಬಂದರೆ, ಜಾನಪದ ಸಾಹಿತ್ಯದಲ್ಲಿ ಗೀತೆ, ಹಾಡು, ಪದ, ಕತೆ, ಲಾವಣಿ, ಗಾದೆ, ಒಗಟು, ಮುಂತಾದ ಪ್ರಕಾರಗಳು ಕಂಡು ಬರುತ್ತವೆ. ಸಾಹಿತ್ಯ ಪ್ರಕಾರಗಳು ಭಾಷೆಯಿಂದ ಭಾಷೆಗೆ ಬೇರೆ ಬೇರೆಯಾಗಿ ಕಂಡು ಬರಬಹುದಾದ ಸಾಧ್ಯತೆಗಳು ಇಲ್ಲದೇ ಇಲ್ಲ. ಸಾಹಿತ್ಯದಲ್ಲಿ ಭಾಷೆಗೆ

ಸಂಬಂಧಿಸಿದ ಹೆಚ್ಚು ಸಾಮಗ್ರಿ ದೊರೆಯಬಹುದು ಸಾಹಿತ್ಯ ಭಾಷೆ ಮತ್ತು ವಸ್ತುವಿನ ದೃಷ್ಟಿಯಿಂದ ಅಭ್ಯಾಸ ಯೋಗ್ಯವಾದುವುಗಳಾಗಿವೆ.

ಭಾಷೆಯನ್ನು ಆಡುವವರು ಒಂದೇ ರೀತಿಯಲ್ಲಿ ಆಡುವುದಿಲ್ಲ. ಅದು ವ್ಯಕ್ತಿಯಿಂದ ವ್ಯಕ್ತಿಗೆ, ಕಾಲದಿಂದ ಕಾಲಕ್ಕೆ, ಸ್ಥಳದಿಂದ ಸ್ಥಳಕ್ಕೆ, ಬೇರೆ ಬೇರೆಯಾಗಿ ಕಂಡು ಬರುವುದು, ಭಾಷೆಯಲ್ಲಿ ಉಂಟಾಗುವ ಭಾಷಿಕ ಬದಲಾವಣೆ ಸಾಹಿತ್ಯದ ಮೇಲೆ ಸಾಕಷ್ಟು ಪರಿಣಾಮವನ್ನುಂಟು ಮಾಡಬಲ್ಲದು. ಭಾಷೆ ಬದಲಾದಂತೆಲ್ಲಾ ಸಾಹಿತ್ಯದ ವಿವಿಧ ಅಂಶಗಳು ಅವುಗಳ ವಿಶಿಷ್ಟ ಶೈಲಿಗಳು ಬದಲಾಗುತ್ತದೆ, ಸಾಹಿತ್ಯದಲ್ಲಿ ಸಾಹಿತಿಯ ಪ್ರತಿಭೆ ಎಷ್ಟೇ ಮುಖ್ಯವಾಗಿದ್ದರೂ ಅವನು ಭಾಷೆಯನ್ನು ಕಡೆಗಣಿಸುವಂತಿಲ್ಲ. ಅಲ್ಲದೆ ಅವನು ಭಾಷೆಯ ಒಳ ರಚನೆಗೆ ಸಂಬಂಧಿಸಿದ ಪರಿಮಿತಿಗಳನ್ನು ದಾಟಿ ಹೋಗಲು ಸಾಧ್ಯವಾಗುವುದಿಲ್ಲ, ಭಾಷೆಯು ಜಾಯಮಾನಕ್ಕೆ ತಕ್ಕಂತೆ, ಭಾಷೆ ಒದಗಿಸುವ ಪರಿಮಿತಿಗಳ ಮಧ್ಯದಲ್ಲಿಯೇ ತನ್ನತನವನ್ನು ಮೆರೆಯುವುದು ಶ್ರೇಷ್ಠ ಸಾಹಿತಿಯ ಬಹುಮುಖ್ಯ ಲಕ್ಷಣ.

## ಕಾದಂಬರಿಯ ಭಾಷಾ ಸ್ವರೂಪ

### 'ಅನಂತ' ಕಾದಂಬರಿಯಲ್ಲಿ ಬಳಕೆಯಾಗಿರುವ ಭಾಷೆ :

'ಅನಂತ' ಕಾದಂಬರಿಯಲ್ಲಿ ಬಳಸಿರುವ ಭಾಷೆ ಹವ್ಯಕ ಕನ್ನಡ. ಹವ್ಯಕ ಕನ್ನಡ ಭಾಷೆಯನ್ನು ಹವಿಗನ್ನಡ ಎಂತಲೂ ಕರೆಯುತ್ತಾರೆ. ಸಮಗ್ರವಾದ ಕನ್ನಡ ಸಂಸ್ಕೃತಿಯ ಅವಿಭಾಜ್ಯ ಘಟಕವೂ ಕನ್ನಡದ ಅತ್ಯಂತ ಹಳೆಯ ಉಪಭಾಷೆಯೂ ಆದ ಹವಿಗನ್ನಡ ನುಡಿಗೂ ಇತರ ಭಾಷೆಗಳಂತೆಯೇ ಒಂದು ಸಮುದಾಯದ ಪರ್ಯಾವತರಣವಿದೆ. ಈ ಜನಾಂಗದ ವಿಶಿಷ್ಟವಾದ, ಮಹತ್ವದ ವಿಚಾರಗಳು ಈ ನುಡಿಯೊಳಗೆ ಅಡಗಿರುತ್ತದೆ. ಬರಹಗಾರ ತನಗನ್ನಿಸಿದ್ದನ್ನು ತನ್ನದೇ ಹೃದಯದ ಆಪ್ತವಾದ ನುಡಿಯಲ್ಲಿ ಬರೆಯುತ್ತಾ ಸಹಜತೆಯನ್ನೂ ಜೀವಂತಿಕೆಯನ್ನು ತರುವಲ್ಲಿ ಯಶಸ್ವಿಯಾಗುವುದು ಈ ರೀತಿಯಾದ ಅಭಿವ್ಯಕ್ತಿಯಿಂದಲೇ, ಎಂದರೆ ಸಂವೇದನೆಯ ಸೂಕ್ಷ್ಮಾತಿಸೂಕ್ಷ್ಮ ವಲಯಗಳನ್ನೆಲ್ಲಾ ನೈಜವಾಗಿಯೂ, ಅಷ್ಟೇ ಸುಲಭ – ಸರಳವಾಗಿಯೂ ಹೊರಹೊಮ್ಮಿಸಲು ಸಾಧ್ಯವಾಗುವುದು ಆ ಹೃದಯದ ಭಾಷೆಯಿಂದಲೇ.

ಆಡು ನುಡಿಗಳನ್ನು ಸಾಹಿತ್ಯ ಕೃತಿಗಳಲ್ಲಿ ಅಲ್ಲಲ್ಲಿ ಬಳಸಿಕೊಳ್ಳುವುದು ಕನ್ನಡದಂತೆ ಇನ್ನಿತರ ಭಾಷೆಗಳಲ್ಲೂ ಕಾಣುತ್ತೇವೆ. "ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೊತ್ತ ಮೊದಲ ಸ್ವತಂತ್ರಯ ಸಾಮಾಜಿಕ ನಾಟಕ ಸೂರಿ ವೆಂಕಟರಮಣ ಶಾಸ್ತ್ರಿಗಳ ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ [1887] ದಿಂದ ಇದರ ಚರಿತ್ರೆಯು ಆರಂಭಗೊಳ್ಳುತ್ತಾ ಇನ್ನೂ ಹಲವಾರು ಕೃತಿಗಳಲ್ಲಿ ಅಲ್ಲಲ್ಲಿ ಸಾಂದರ್ಭಿಕವಾಗಿ ಪ್ರಾದೇಶಿಕ / ಗ್ರಾಮ್ಯ ನುಡಿಗಳನ್ನು ಬಳಸಿಕೊಂಡ ರಚನೆಗಳನ್ನು ನೋಡುತ್ತೇವೆ. ಸಾಹಿತ್ಯದಲ್ಲಿ ಹವಿಗನ್ನಡ ಆಡು ನುಡಿಯು ನೇರವಾಗಿ ಹಾಗೂ ಪೂರ್ಣ ಪ್ರಮಾಣದಲ್ಲಿ ಪ್ರವೇಶವಾದದು ಸೂರಿಯವರಿಂದಲೇ"(1) ಎಂದರೂ, ಈ ಪರಂಪರೆ ಮಾತ್ರ ಮುಂದುವರಿದುದು ಎಷ್ಟೋ ವರ್ಷಗಳ ನಂತರವಷ್ಟೇ. ಹವಿಗನ್ನಡವನ್ನು ಚೆನ್ನಾಗಿ ಬಲ್ಲವರು [ಹವ್ಯಕರೂ ಹವ್ಯಕೇತರರೂ] ಅನೇಕ ಮಂದಿ ಕನ್ನಡ ಹಾಗೂ ಇನ್ನಿತರ ನುಡಿಗಳಲ್ಲಿ ದೊಡ್ಡ ಮೆಟ್ಟಿನ ಕೃಷ್ಟಿಯನ್ನು ನಡೆಸಿದರೂ, ಸಾಹಿತ್ಯಕ ರಚನೆಗಳಲ್ಲಿ ತಮ್ಮ ಹವಿಗನ್ನಡದ ಬಗೆಗೆ ಅಷ್ಟಾಗಿ ಗಮನಹರಿಸದೇ ಇರುವುದು ಸೋಜಿಗವೇ ಸರಿ. ಇದಕ್ಕೆ ಅವರಿಗೆ ನುಡಿಯ ಬಗೆಗೆ ಇದ್ದ ಕೀಳರಿಮೆ ಮತ್ತು ಆ ನುಡಿಯಲ್ಲಿ ಬರೆದರೆ ಇತರರಿಗೆ ಇದು ತಲುಪಲಾರದೇನೋ ಎಂಬ ಶಂಕೆಯೂ ಕಾರಣ ವಿರಬಹುದು. "ಇದನ್ನೆಲ್ಲಾ ಮೀರಿ ಮುಂದೊಂದು ಸಲ ಇದು ಅಭಿವ್ಯಕ್ತಿಯ ನುಡಿಯಾಗಿ ಹೊಮ್ಮಲು ಸುರುವಾದದ್ದು 1968 ರಿಂದ ಈಚೆಗೆ ಹವಿಗನ್ನಡದಲ್ಲಿ ಸಾಹಿತ್ಯ ರಚನೆ, ಕಾದಂಬರಿಗಳು, ಸಂಭಾಷಣಾ ಭಾಗಗಳಲ್ಲಿ ಈ ಭಾಷೆಯ

ರಚನೆಯಾಗುತ್ತಿದೆ. ಹವಿಗನ್ನಡದಲ್ಲಿ ಕಾದಂಬರಿ ರಚಿಸಿ, ಈ ನುಡಿಯನ್ನು ಎದೆಗಾರಿಕೆಯಿಂದ ಬಳಸಿ ಕೊಂಡವರು ಡಾ। ಮೊಗಸಾಲೆಯವರು"(2).

'ಅನಂತ' ಕೃತಿಯಲ್ಲಿ ಮೊದಲಾಗಿ ಗುರುತಿಸಿರುವುದು ಇದೊಂದು ಹವ್ಯಕ ಸಮಾಜದ ಕತೆ ಎಂಬುದಾಗಿ, ಬಳಸಿರುವ ಭಾಷೆಯೂ ಸಹ ಹವ್ಯಕರ ಭಾಷೆ. ಕತೆಯು ಒಂದು ನಿಷ್ಕಲ್ಮಷ ಪ್ರೇಮದ ಹಿಂದೆ ಆ ಪ್ರಾದೇಶಿಕ ಸಮಾಜದ ರೂಢಿಯ ಸಂಪ್ರದಾಯವೊಂದೇ ಸಮಸ್ಯೆ ಎಂದಾಗಿರುವುದಿಲ್ಲ. ಕಥಾನಿರೂಪಣೆಯಲ್ಲಿ ಬರುವ ಸಂಭಾಷಣಾ ಗದ್ಯ ಭಾಗಗಳಲ್ಲಿವೂ ವಿಟ್ಲ ಸೀಮೆಯ ಹವಿಗನ್ನಡದಲ್ಲೇ ಬಿಂಬಿತವಾಗಿರುವುದು. ಭಾಷೆಯ ದೃಷ್ಟಿಯಿಂದ ಸಹಜವಾದ ಮಾತಿನ ಶೈಲಿ, ನಿರಾಯಾಸವಾಗಿ ಹಾಸು ಹೊಕ್ಕಾಗಿ ಮೂಡಿಬಂದಿದೆ. ಇಲ್ಲಿ ಪಡೆ ನುಡಿಗಳು, ಗಾದೆಗಳು, ಬೈಗಳು ಇತ್ಯಾದಿಗಳೂ ಸರಾಗವಾಗಿ ಬಳಕೆಗೊಂಡಿದ್ದು, ಸಹಜತೆಗೆ ಮೆರುಗನ್ನು ಕೊಟ್ಟಿವೆ. ಹವ್ಯಕ ಜನಾಂಗಕ್ಕೆ ಇಲ್ಲಿನ ವಿಚಾರ ಮಂಡನೆಯು ಹೊಸದೆನಿಸಿದರೂ, ಈ ಸಂಪ್ರದಾಯವು ಸರ್ವೇ ಸಾಮಾನ್ಯವೆಂಬಂತಿರುವ ಕರ್ನಾಟಕದ ಇತರ ಪ್ರದೇಶದವರಿಗೆ ಹೊಸದೇನೂ ಕಾಣಿಸದು, ಆದರೆ ಹೊಸ ಸಂಪ್ರದಾಯದ ವಿಚಾರಗಳೊಂದಿಗೆ ಹೊಸದೊಂದು ನುಡಿ ಹಾಗೂ ಸಂಸ್ಕೃತಿಗಳನ್ನು ಕಟ್ಟಿಕೊಟ್ಟಂತಾಗಿರುವುದು ಇದರ ಹೆಗ್ಗಳಿಕೆ.

ಸಾಹಿತ್ಯದಲ್ಲಿ ಇಂಥಾ ಆಡು ನುಡಿ ಪ್ರಯೋಗವು ಮುಂದಿನ ಅನೇಕ ಮಂದಿ ಲೇಖಕರಿಗೆ ಪ್ರೇರಣೆಯನ್ನು ನೀಡಿದ್ದು ಹೌದು. ಹೀಗೆ ಇದೇ ನುಡಿಯಲ್ಲಿ ವಿವಿಧ ಪ್ರಭೇದಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಕತೆ, ಕಾದಂಬರಿ, ನಾಟಕ, ಕಾವ್ಯ, ಮಹಾಕಾವ್ಯಗಳೇ ಮೊದಲಾದ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ರಚನೆಯಾದುದು ಈಗ ಇತಿಹಾಸ. ಇದು ಕನ್ನಡ ಅವಿಭಾಜ್ಯ ಘಟಕ, ಸಾಹಿತ್ಯ ಹಾಗೂ ಸಾಮಾಜಿಕ ಸಂಸ್ಕೃತಿಯೂ ಹೌದು. ಈ ಹಳೆಯ ಉಪಭಾಷೆಗೆ ಸಲ್ಲುತ್ತಿರುವ ಮನ್ನಣೆ – ಗೌರವವೂ ಹೌದು. ಈ ಸಾಲಿನಲ್ಲಿ ಮೊದಲಿಗರಾಗಿ ಗೌರವಕ್ಕೂ ಮನ್ನಣೆಗೂ ಪಾತ್ರರಾಗಿರುವ ಡಾ। ಮೊಗಸಾಲೆಯವರಿಗೆ ಹೃತ್ಪೂರ್ವಕ ಅಭಿನಂದನೆಗಳು.

**ಅನಂತ ಕಾದಂಬರಿಯಲ್ಲಿ ಬರುವ ಕೆಲವು ಸಂಭಾಷಣೆಗಳು :**

- 'ವಸಂತೀ, ಏ ವಸಂತೀ'

  'ಅದಾರು ದಿನಗೇಳೋದು?'

  'ಹ್ಣ? ಕೇಳುತ್ತಿಲ್ಲೆಯ ಕೂಸೆ, ಆದ ಭಾರತಿ ನಿನ್ನನ್ನೇ ದಿನಗೇಳುತ್ತದೋ! ಹೋಗಿ ಎಂತ ಕೇಳಿಕೊಂಡು ಬಾ'

  'ವಸಂತಿ – ಎಂತಗಪ್ಪಾ ಹೀಂಗುದೇ ಬೊಜ್ಜಿ ಹಾಕೋದು? ಎಂತಾತಪ್ಪ ಅದಕ್ಕೆ'

  'ಬೇಗ ಹೋಪಲಾಗದಾ ನಿನಗೆ?

- ಓಹೋ! ಇದ ಏ ಭಾರತಿ ಅಕ್ಕ... ಆಗ ಎನ್ನ ಲೂಟಿ ಮಾಡಿದ್ದೆ ಹೇಳಿ ಸುಮ್ನೆ ಕೆಮಿ ಹಿಂಡಿದ್ದೆ, ಅಪ್ಪಾ? 'ಹ್ಣೂ, ಎಂತಾತು?'

ಭಾರತಿಯೂ ವಸಂತಿಯನ್ನು ಕರೆದಾಗ, ವಸಂತಿ ಆಟದಲ್ಲಿ ಮಗ್ನವಾಗಿರುತ್ತಾಳೆ. ಆಗ ಪಾರ್ವತಿಯು ಭಾರತಿ ಕೂಗುತ್ತಿದ್ದಾಳೆ ಹೋಗಿ ನೋಡು ಎನ್ನುವ ಸಂಭಾಷಣೆಯ ಭಾಗವಾಗಿದೆ.

ಹೀಗೆ ಕಾದಂಬರಿಯಲ್ಲಿ ಸಂಭಾಷಣೆಗಳನ್ನು ನೋಡಬಹುದು./

- "ಅಕ್ಕ, ಆನೋ ಮಾವನೂ ಜಾರುಗಲ್ಲಿಂಗೆ ಹೋವುತ್ತೆಯೂ, ನೀನು ಬತ್ತೆಯಾ?'
- 'ಯಾವಾಗ ಹೋಪದು? ಈಗಳಾ?'
- ಹ್ಣೂ
- ಆನು ಬತ್ತೆಯು ಇಲ್ಲೆಯಾ ಹೇಳಿ ಕೇಳಿಗೊಂಡು ಬಪ್ಪಲೆ, ಆರು, ಮಾವ ಹೇಳಿ ಕಳುಹಿಸಿದ್ದು ನಿನ್ನ?
- 'ಹ್ಣೂ ಆರಾಧರೆಂತ? ಬತ್ತರೆ ಬಾ ಮಾವ ಅಕ್ಕ ಬತ್ತರೆ ಬರಲಿ ಹೇಳಿದ್ದ ಹೇಳಿ ಹೋಗು ಹೇಳು' ಎಂದು ಹೇಳಿ 'ಎಂತಾ'? ಎಂದ ಯಾವುದಕ್ಕೂ ರಜಾ ನಿಲ್ಲು... ಇನ್ನೊಂದು ನಾಲ್ಕು ಮೊಗ್ಗು ಮಾಂತ್ರ ಇಪ್ಪದು ಕೊಯ್ಪಲೆ, ಮತ್ತೆ ಹೇಳ್ತೆ!"(3)

ಶಂಕರನು ಅನಂತ ಮಾವ ತಾನು ಜಾರುಗಲ್ಲಿಂಗೆ ಹೋಗುವುದು, ಮಾವ ಕೇಳಿಕೊಂಡು ಬಾ ಎಂದು ಹೇಳಿದ ಎಂದು ಭಾರತಿಯನ್ನು ಬಂದು ಕೇಳಿದಾಗ ಭಾರತಿ ಮತ್ತು ಶಂಕರನ ನಡುವೆ ನಡೆಯುವ ಸಂಭಾಷಣೆ ಮೇಲಿನ ರೀತಿ ಇದೆ.

ಅನಂತ ಮತ್ತು ಭಾರತಿಯ ನಡೆಯುವ ಸಂಭಾಷಣೆಗಳು :

- ಅನಂತ ಭಾರತಿಯ ಮುಖವನ್ನೆ ಎವೆಯಿಕ್ಕದೆ ನೋಡಿದಾಗ ಭಾರತಿಗೆ ನಾಚಿಕೆ ಆಗಿ –

  'ಎಂತ ಮಾವ, ಎನ್ನ ಮೋರೆಲಿ ಎಂತ ಇದ್ದು ಹೇಳಿ ಹಾಂಗೆ ನೋಡುತ್ತೆ?

  'ಎನಗೆಯಾವುದು ಬೇಕೋ? ಅದೆಲ್ಲ ಇದ್ದು!

  ಈಗೀಗ ನಿನ್ನ ಕವಿತ್ವ ಮಾತಿಲಿ ಕೂಡಾ ಬಪ್ಪಲೆ ಶುರುವಾತು ಅಲ್ಲವಾ?

  'ಎಂತ ಹೇಳಿ ತೋರಸೆಕ್ಕಾ ಕೂಸೆ,

  ಅನಂತ ತಾನು ಬರೆದ ಕಾದಂಬರಿಯ ಬಗ್ಗೆ ಭಾರತಿಗೆ ಹೇಳಿ, ಅವಳ ಅಭಿಪ್ರಾಯ ಏನು ಎಂಬುದನ್ನು ತಿಳಿಯಬೇಕು ಎಂಬ ಆಸೆ ಅವನದು.

  'ಸೊಸೆಯ ಮದುವೆ ಅಪ್ಪ ಸಂಪ್ರದಾಯ ಇಲ್ಲೆ ಅಲ್ಲದಾ? ಅದನ್ನೇ ಕುರಿತು ಆನು ಬರದ್ದು! ಒಂದು ಗಂಡು ಹೆಣ್ಣಿನ ಜೀವನ ಮೌಲ್ಯವನ್ನು ನಿರ್ಮಿಸುವಾಗ ಅದರಲ್ಲಿ ಕಟ್ಟು ಕಟ್ಟಳೆ ಎಂತಗೆ? ಅಪ್ಪಾ ಅಲ್ಲದಾ? ಇಂತಹ ವಿಚಾರದ ಮೇಲೆಯೇ ಅನುಕತೆ ಬರೆದ್ದು...

  'ಎಂತ ಹೇಳುತ್ತೆ ಭಾರತಿ ಇದಕ್ಕೆ ನೀನು?

  'ಇದೆಲ್ಲ – ಕತೆಲಿ ಮಾಂತ್ರ ಸಾಧ್ಯ ಮಾವ, ಜೀವನದಲಿ'?

  'ಎಂತಗ ಸಾಧ್ಯ ಇಲ್ಲೆ?

  ಶಂಕರ ಯಾವೂ ಎಂದು ಕೂಗಿದ ಅವರ ಮಾತು ಅರ್ಧಕ್ಕೆ ಅಲ್ಲಿಗೆ ನಿಲ್ಲುತ್ತದೆ.

- ಭಾರತಿ ಮತ್ತು ಅನಂತ ನಡುವಿನ ಸಂಭಾಷಣೆ, ಅನಂತ ತಾನು ಭಾರತಿಯನ್ನು ಸಣ್ಣ ಹುಡುಗನಾಗಿದ್ದಾಗಲೇ ಮೆಚ್ಚಿರುವುದು, ಅದಕ್ಕೆ ನಿನ್ನನ್ನು ತಮಾಷೆ ಮಾಡುವುದು ಎಂದೆಲ್ಲಾ ಸುತ್ತಿ ಬಳಸಿ ಭಾರತಿಗೆ ಹೇಳಿದಾಗ ಭಾರತಿ ಕೊಡುವ ಉತ್ತರ –

- ನಿನ್ನ ಮಾತು ಎನಗೂ ಅರ್ಥ ಆವುತ್ತು ಮಾವ, ಆದರೆ ಅದು ನೆರವೇರುದು ಮಾತ್ರ ಕಷ್ಟ!

- 'ಹ್ಹೂ ಎಂತಗೆ ಸಾಧ್ಯ ಇಲ್ಲೆ ಭಾರತಿ ಅದು?

- "ನಮ್ಮ ಪ್ರೀತಿಗೆ ಜನ ತಪ್ಪು ತಿಳಿಕೊಳ್ಳತ್ತವು ಮಾವ. ಇದು ಪಾಪ ಕೃತ್ಯ ಹೇಳಿ ಅವರ ಭಾವನೆ. ಆ ದೃಷ್ಟಿಲಿ ನಮಗೆ ಇದರಿಂದ ಎಂದಿಂಗೂ ಮುಕ್ತಿ ಇಲ್ಲೆ!"(4)

- ' ಏಕೆ ಇಲ್ಲೆ? ನೀನು ಒಪ್ಪು ಭಾರತಿ!

- ಇಲ್ಲೆ ಮಾವಾ, ಆನು ಒಪ್ಪಿ ಎಂತ ಮಾಡುಲೆ ಸಾಧ್ಯ?

- ಹೀಗೆ ಅವರಿಬ್ಬರ ನಡುವಿನ ಸಂಭಾಷಣೆಯನ್ನು ನೋಡಬಹುದು. ಭಾರತಿ ಮತ್ತು ಅನಂತರ ಸಂಭಾಷಣೆಯಲ್ಲಿ ಎಲ್ಲೂ ಎಲ್ಲೇ ಮೀರಿದ ರೀತಿ ಅಥವಾ ಮುಜುಗರದ ರೀತಿ ಪ್ರಣಯದ

ಸಂಭಾಷಣೆ ಇಲ್ಲ. ಪ್ರೀತಿಯ ಭಾವ ತೀವ್ರತೆಯ ಸನ್ನಿವೇಶ, ಸಂದರ್ಭದ ಸಂಭಾಷಣೆ, ಕಿರಿ ಕಿರಿ ಎನಿಸುವ ರೀತಿಯದು ಕಾಣಲು ಸಾಧ್ಯವಿಲ್ಲ.

ನೆರೆ ಹೊರೆಯವರ ನಡುವೆ ಸಂಭಾಷಣೆ ಹೇಗೆ ನಡೆಯುತ್ತದೆ ಎಂಬುದಕ್ಕೆ ಇದು ಉತ್ತಮ ಉದಾಹರಣೆಯಾಗಿದೆ. ಭಾರತಿ ಅಜ್ಜಿ ಮನೆಗೆ ಹೋದಾಗ ಅವರ ಪಕ್ಕದ ಮನೆಯ ಕಾಂಬಕ್ಕೆ ಮತ್ತು ಸರಸ್ವತಮ್ಮರ ನಡುವೆ ನಡೆಯುವ ಸಂಭಾಷಣೆ ಇದಾಗಿದೆ.

'ಇವು ಯಾವಾಗ ಬಂದುದು ಸರಸಕ್ಕ...? ಭಾರತಿ? ಎಂತ ಕೂಸೆ, ಸೌಖ್ಯವಾ ಎಲ್ಲೂ ಮನೆಲಿ?... ಯಾವಾಗ ಬಯಿಂದೆ?

'ಹ್ಞೂ, ಸೌಖ್ಯವೇ... ಇದ, ಈಗ ಬಂದದಷ್ಟೆ!

ಇದೆಂತ ಕಾಂಬಕ್ಕೆ ಇಂದು ಇಷ್ಟು ಬೇಗ ಸವಾರಿ?

ಹೀಗೆ ಬಂದದಪ್ಪಾ ಆನು ಯಾವಾಗಲೂ ಅಂತೇ ಬಪ್ಪ ಕ್ರಮ ಇದ್ದಾ? ಎಂಗಳ ತೋಟಲ್ಲಿ ಹಲಸಿನ ಕಾಯಿ ಒಳ್ಳೆ ಬೆಳದ್ದು ಈಗ, ರಜಾ ಹಪ್ಪಳ ಮಾಡಿದರೆ ಅಕ್ಕಾ ಹೇಳಿ? ಅದಕ್ಕೆ ಹಪ್ಪಳ ಮಾಡುವ ಮಣಿ ಕೊಂಡು ಹೋಪಲೆ ಬಂದೆ... ಅಪ್ಪ ಕೂಸೆ, ನಿಂಗ ಹಪ್ಪಳ ಮಾಡಿದ್ದೀರಾ?

'ಹೂಂ'

'ಅಂಬಗ ಇಷ್ಟರವರೆಗೂ ನಿಂಗ ಹಪ್ಪಳ ಮಾಡಿದ್ದಿಲ್ಲಿರಾ ಕಾಂಬಕ್ಕಾ? ಎಲ್ಲಿಂದ ಹೇಳಿ? ಆರಿಂಗೆ ಇದಕ್ಕು ಪುರುಸೊತ್ತು? ಎನ್ನ ಸೊಸೆ ಅದರ ಅಪ್ಪನ ಮನೆಗೆ ಹೋದ್ದು ನಿನ್ನೆ ಬಂತು, ಹ್ಯಾಂಗೆ ಇಂದು ಉದಿಯಪ್ಪಗ 'ಹಪ್ಪಳ ಮಾಡುವನಾ ಅತ್ತೇ? ಹೇಳಿ ಕೇಳಿತ್ತು. 'ಹೂಂ' ಹೇಳದೆ ಹ್ಯಾಂಗೆ ನಾಳೆ ರಜಾ ಮಾಡಿದರೆ ಅಕ್ಕಾ ಹೇಳಿ!'

ಹೀಗೆ ಕಾದಂಬರಿಯಲ್ಲಿ ಬರುವ ಪ್ರಮುಖ ಸಂಭಾಷಣೆಗಳನ್ನು ಗಮನಿಸಿದಾಯಿತು.

- ಕಾದಂಬರಿಯಲ್ಲಿ ಬಳಕೆಯಾಗಿರುವ ಕೆಲವು ಬೈಗುಳಗಳು ಸಂದರ್ಭ ಅನುಸಾರ ಇದು ಕೋಪ ಬಂದಾಗ, ಮಕ್ಕಳನ್ನು ಮುದ್ದಿನಿಂದ ಗದರಿಸುವುದಾಗಿದೆ. ಕಾದಂಬರಿಯಲ್ಲಿ ಎಲ್ಲೂ ಅವ್ಯಾಚ ಪದಗಳನ್ನು ಬಳಸಿಲ್ಲ. ಕಿರಿಕಿರಿ ಎನಿಸುವ ರೀತಿಯಲ್ಲಿ ಎಲ್ಲೂ ಪದ ಪ್ರಯೋಗ ನಡೆದಿಲ್ಲ.

ಶಂಕರ ಭಾರತಿಯಿಂದ ಕೇದಿಗೆ ಹೂವನ್ನು ತೆಗೆದುಕೊಂಡು ಹೋಗಿ ಕೆರೆಯ ನೀರಿಗೆ ಹಾಕಿದಾಗ ಭಾರತಿ ಕೋಪದಿಂದ ಶಂಕರನ್ನು ಗದರಿಸುವುದು ಹೀಗೆ..

- 'ನಿನ್ನ ಹಿಡಿದು ಎರಡು ಕೊಡದಿದ್ದರೆ'

- 'ಮಂಗ ಬುದ್ದಿದು, ರಜವೂ ಭಾಷೆ ಇದ್ದರಲ್ಲದಾ? ಎಂತಾಗೆ ಹೇಳಿ ಹಿಲಿಂಗಿದ್ದೊವು ಶಾಲೆಗೆ ಹೋಪದು?
  ಮಗುವನ್ನು ಮುದ್ದಿನಿಂದ ಗದರಿಸುವಾಗ ಭಾರತಿ ಹೇಳುವ ಮಾತು..
- 'ಛಿ! ಕಳ್ಳ, ತಂಟ್ಲು ಮಾರಿ!'
  ಅನಂತ ಭಾರತಿಯನ್ನು ತಾವು ಸಣ್ಣವರಾಗಿದ್ದಾಗ ಹಸ-ಹುಲಿಯಾಟ ಆಡಿದ ದಿನಗಳನ್ನು ನೆನಪಿಸಿದಾಗ ಭಾರತಿ ಅನಂತನನ್ನು ಹೀಗೆ ರೇಗಿಸುತ್ತಾಳೆ –
- 'ನೀನು ದೊಡ್ಡ ತುಂಟ್ಲು ಮಾರಿ ಮಾವ!' 'ಅಂದು ನೀನು ಹುಲಿ ಮಾಡಿ ಎನ್ನ – ಅಬ್ಬ ಸಾಕು ಸಾಕು ಮಾಡಿದ್ದೆ'
  ಪಾರ್ವತಿ ತನ್ನ ತಮ್ಮ ಅನಂತ ಊರಿಗೆ ಬಂದಾಗ ವಿಶೇಷ ಅಡುಗೆ ಸಿದ್ದತೆ ನಡೆಸಿದ್ದಳು ಆಗ ಅನಂತ ಅಕ್ಕನಾದ ಪಾರ್ವತಿಗೆ ಹೇಳುವ ಹೊಗಲಿಕೆಯ ಮಾತು ಹೀಗಿದೆ –
- ಇದ ಅಕ್ಕ ಆನು ಬಯಿಂದ ಹೇಳಿ ಸಿಕ್ಕಾಪಟ್ಟೆ ಸಮ್ಮಾನ ಮಾಡದ ಎನಗೆ ಮೈಸೂರಿಗೆ ಹೋದ ಮೇಲೆ ಇದೆಲ್ಲಾ ಸೇರುತ್ತೇ ಇಲ್ಲೆ, ಈಶ್ವರ ಭಟ್ಟರು ಮತ್ತು ಕೃಷ್ಣಪ್ಪಜ್ಜಿ ಇಬ್ಬರು ಭಾರತಿಯ ಮದುವೆ ಬಗ್ಗೆ ಮಾತನಾಡುವಾಗ ಈಶ್ವರ ಭಟ್ಟರು ಹೇಳುವ ಮಾತು –
- ರಜಾ ಪೈಸೆ ಪೀಂಕಿಸುವ ಜಾತಿ ಹೇಳಿ ಕಾಣುತ್ತು.
  ಅನಂತ ತಾನು ಹೊಸ ಬಟ್ಟೆ ಹಾಕಿಕೊಂಡು, ಭಾರತಿಯನ್ನು ಕೂಗಿ ತಾನು ಹೀಗೆ ಕಾಣುತ್ತೇನೆ ಎಂದು ಅಭಿಪ್ರಾಯ ಕೇಳಿದಾಗ ಭಾರತಿ ಕೊಡುವ ಉತ್ತರ ಹೀಗಿದೆ –
- 'ಹೇಂಗೆ ಕಾಣುತ್ತೆ ಆನು'?
- 'ಒಳ್ಳೆ ಮದುಮಾಯನ ಹಾಗೆ ಕಾಣುತ್ತೆ'
- ಹಾಗಾದರೆ ಮಾದುಮ್ಮಳು ರೇಡಿ ಅಪ್ಪಲೆ ಅಕ್ಕು'
  ಊಟದ ಸಮಯದಲ್ಲಿ ಅನಂತ ತಾನು ಇಷ್ಟು ಊಟ ಮಾಡಲಾಗುವುದಿಲ್ಲ ಸ್ವಲ್ಪ ತೆಗೆ ಅಕ್ಕ ಎಂದು ಹೇಳಿದಾಗ ಭಾವ ಈಶ್ವರ ಭಟ್ಟರು ಹೇಳುವ ಮಾತು –
- 'ತಿಂಬೊದಕ್ಕೆ ಮಾರ್ಯಾಎ ಮಾಡುಲೆ ಆಗ ಅನಂತ, ಮತ್ತೆಂತ ಜವ್ವನಿಗ ನೀನು? ನಿನ್ನ ಪ್ರಾಯದಲ್ಲಿ ಎಂಗ ಎಷ್ಟು ಹೊಡದ್ದೆಯಾ ಗೊಂತಿದ್ದಾ? ಅರ್ಥ ಸೇರು ಅಕ್ಕಿ ಬೇಕು ಒಂದು ಊಟಕ್ಕೆ'!
  ಆಗ ಭಾರತಿ ಹೇಳುವ ಮಾತು

- 'ಮಾವ ಈಗ ಡಾಕ್ಟ್ರ ಅಲ್ಲದಾ? ಹ್ಯಾಂಗೆ ಈಗ ಸಿಕ್ಕಾಪಟ್ಟೆ ತಿನ್ನಲೇ ತಿನ್ನ, ಆರೋಗ್ಯ ಶಾಸ್ತ್ರ ಪ್ರಕಾರ ಅಂವ ಈಗ' ಎಂದು ಅನಂತನನ್ನು ಚೇಡಿಸುತ್ತಾಳೆ.
- ಶಂಕರ ಅನಂತನನ್ನು ಛೇಡಿಸಿದಾಗ ಅನಂತ ಶಂಕರನನ್ನು ಗದರಿಸುವ ರೀತಿ –
- 'ಎಂಗಳ ಕಾದು ಕೂಡುಗೊಂಡೇ ಇತ್ತಿದ್ದ ಅವ ಅವ ಅಲ್ಲಿ! ಎಂದು ಶಂಕರ ಅನಂತನನ್ನು ಉದ್ದೇಶಿಸಿ ಹೇಳಿದಾಗ,
- 'ಥತ್ ಮಂಗ, ಎನಗೆ ಎಂತ ಗೊಂತ್ತೋ ನಿಂಗ ಬತ್ತಿಹೇಳಿ? ಎಂದು ಅನಂತ ಪ್ರತಿಕ್ರೀಯಿಸುತ್ತಾನೆ.

  ಕೃಷ್ಣಪ್ಪಜಿ ಈಶ್ವರ ಭಟ್ಟರ ಮನೆಗೆ ಬಂದಾಗ ಪಾರ್ವತಿ ನಾಯಿಯನ್ನು ಗದರಿಸಲು ಬಳಸುವ ವಾಕ್ಯ ರಚನೆ –
- 'ಥತ್ – ಮಂಗ, ಯಾವಾಗಲೂ ಒಪ್ಪೋರ ಕೂಡಾ ಗುರ್ತು ಸಿಕ್ಕುತಿಲ್ಲೆ ಈ ನಾಯಿಗೆ..

  ಭಾರತಿ ಮಗುವನ್ನು ಗಲಾಟೆ ಮಾಡುತ್ತಿದ್ದಾಗ ಗದರಿಸುವ ಪರಿ –

  'ಎಂತ ಲೂಟಿ ಇದಕ್ಕೆ? ಜಾಲಿಲಿ ಬಿಡಲೂ ಗೊತಿಲ್ಲ'

  ಭಾರತಿಯ ಸಾವು ಎಲ್ಲರಿಗೂ ಅನಿರೀಕ್ಷಿತವಾಗಿದ್ದು ಕೃಷ್ಣಪ್ಪಜಿಯು ಈಶ್ವರ ಭಟ್ಟರಿಗೆ ಹೇಳುವ ಸಮಾದಾನದ ಮಾತುಗಳು–

  "ಎಂತ ಮಾಡಲಾವುತ್ತು ಈಶ್ವರ? ಎಲ್ಲಾ ಅವರವರ ಋಣ! ಅವರ ತಲೇಲಿ ಹಾಂಗೆ ಸಾಯಕ್ಕು ಹೇಳಿ ಬರದ್ದು ಇದ್ದರೆ ಅದರ ಆರಿಂದ ತಪ್ಪುಸೇ ಸಾಧ್ಯ? ಅಪ್ಪರಲ್ಲಿ ತಪ್ಪುಸೋದು ದೇವರೆ! ಅಪ್ಪದು ಆವುತ್ತು! ಇಷ್ಟು ದಿನದವರೆಗೆ ಅದು ನಿಂಗಳ ಮಗಳಾಗಿತ್ತು. ಇನ್ನು ಇಲ್ಲೆ ಅಪ್ಪೆ! ಇದ್ದ ಮಕ್ಕಳ ನೋಡಿ ಅದರ ಮರವದು ಅಪ್ಪೆ!"(5)

  ವೆಂಕಟರಮಣ ಅನಂತ ಮತ್ತು ಭಾರತಿ ಪ್ರೇಮದ ವಿಷಯವನ್ನು ಅನಂತನ ಒತ್ತಾಯ ಮೇರೆಗೆ ಅವರ ತಂದೆ ಮಹಾಬಲಭಟ್ಟರಿಗೆ ತಿಳಿಸಲು ಅವರ ಮನೆಗೆ ಬಂದಾಗ, ತನ್ನ ಇಕ್ಕಟ್ಟಿನ ಪರಿಸ್ಥಿತಿಗೆ ಮನಸ್ಸಿನಲ್ಲಿ ಹೇಳಿ ಕೊಳ್ಳುವ ಮಾತು –
- ನಾಯಿಯನ್ನು ನೀರಿಗೆ ಎಳೆದ ಹಾಗೆ, ಅನಂತ ತನ್ನನ್ನು ಈ ಸುಳಿಯಲ್ಲಿ ಸಿಕ್ಕಿಸಿ, ತನ್ನನ್ನು ನಜ್ಜುಗುಜ್ಜಾಗಿಸುತ್ತಾನೆಂದು ಕೊಳ್ಳುತ್ತಾನೆ.

ಹೀಗೆ ಅನಂತ ಕಾದಂಬರಿಯಲ್ಲಿ ವಿಶೇಷವಾಗಿ ಬಳಕೆಯಾಗಿರುವ ಸಾಲುಗಳನ್ನು ಗಮನಿಸಿದಾಯಿತು. ಇಲ್ಲಿ ಹೆಚ್ಚಾಗಿ ಬಳಕೆಯಾಗಿರುವುದು ಮಂಗ. ತಂಟ್ಲು ಮಾರಿ ಎಂಬ ಪದ ಮತ್ತು

ವಾಕ್ಯ ಪ್ರಯೋಗಗಳು. ಇವು ಅಷ್ಟಾಗಿ ಮುಜಗರಕ್ಕೆ ಇಡು ಮಾಡುವ ಪ್ರಯೋಗಗಳಲ್ಲ. ಹಾಗೇ ನೋಡಿದ ಅನಂತ ಕಾದಂಬರಿಯಲ್ಲಿ ಹೆಚ್ಚಾಗಿ ಬೈಗುಲಗಳ ಬಳಕೆಯಲ್ಲಿ ಇನ್ನು ಒಂದೆರಡು ಗಾದೆಗಳು, ಹೋಲಿಕೆಗಳನ್ನು ನೋಡಬಹುದು. ಆದರೂ ಅನಂತ ಕಾದಂಬರಿಯಲ್ಲಿ ನಡೆಯುವ ಕೆಲವು ಮಕ್ಕಳ ಆಟದ ಸಂಭಾಃಣೆ, ನೆರೆಹೊರೆಯವರ ಸಂಭಾಷಣೆ, ಅನಂತ ಮತ್ತು ಭಾರತಿಯರ ಸಂಭಾಷೆಗಳನ್ನು ಗಮನಿಸೋಣ. ಭಾಷಾ ಬಳಕೆಯಿಂದ ಅಲ್ಲಿನ ಸಾಮಾಜಿಕ ಜೀವನದ ಚಿತ್ರಣ ನಮ್ಮ ಮುಂದೆ ಸುಳಿಯುತ್ತದೆ.

**'ಕನಸಿನ ಬಳ್ಳಿ' ಕಾದಂಬರಿಯ ಭಾಷೆಯ ಬಗ್ಗೆ :**

ಕನಸಿನ ಬಳ್ಳಿ ಕಾದಂಬರಿಯಲ್ಲಿ ಬಳಸಿರುವ ಭಾಷೆ ಮೈಸೂರು ಮತ್ತು ಬೆಂಗಳೂರಿನ ಕಡೆ ಮಾತನಾಡುವ ಜನಬಳಕೆ ಭಾಷೆಯಾಗಿದೆ. ಕಥೆ ಪ್ರಾರಂಭವಾಗುವುದು ಸಹ ಇಲ್ಲೆ ಆದರಿಂದ, ಇಲ್ಲಿನ ಭಾಷಾ ಪ್ರಯೋಗವಾಗಿದೆ. 'ಅನಂತ ಕಾದಂಬರಿಯಲ್ಲಿ ಬಳಸಿದಂತೆ ದೇಸಿ ಭಾಷೆಯನ್ನು ಇಲ್ಲಿ ಎಲ್ಲಿಯೂ ಬಳಸಿಲ್ಲ. ಮೂಲ ಕೋಳ್ಯೂರು ಆದರೂ, ಕಥೆ ಬೆಳೆಯುವುದು ಮೈಸೂರಿನ ಕಡೆ ಮುಕ್ತಾಯ ಕೋಳ್ಯೂರು ಆದರೂ ಅಲ್ಲಿಗೂ ಸಹ ಇಲ್ಲಿನ ಭಾಷೆಯನ್ನೇ ಸಂಭಾಷಣೆಯಲ್ಲಿ ಬಳಸಿದ್ದಾರೆ. ಇಲ್ಲಿ ಬರುವ ಪಾತ್ರಗಳು ಹೆಚ್ಚಾಗಿ ವಿದ್ಯಾವಂತ, ನಗರ ಜೀವನಕ್ಕೆ ಹೊಂದಿ ಕೊಂಡಿರುವುದು ಕಾಣಬಹುದು. ಮೈಸೂರಿನ ಭಾಷೆಯ ಬಳಕೆ ಪ್ರಾರಂಭದಲ್ಲಿ ಕಾಣುತ್ತೇವೆ. ನಂತರ ಆ ಭಾಷೆಯನ್ನೇ ಸಂಭಾಷಣೆಯಲ್ಲೂ ಬಳಸಿದ್ದಾರೆ. ಕಾಸರಗೂಡಿನ ದೇಸೀ ಭಾಷೆಯ ಬಳಕೆಯನ್ನು ಮಾಡಲು ಹಿಂದೆಗೆದಂತೆ ಕಾಣುತ್ತೇವೆ. ಈ ಕಾದಂಬರಿಯಲ್ಲಿ ಹೆಚ್ಚಾಗಿ ಬೈಗುಳಗಳ ಬಳಕೆಯಾಗೆ ಇಲ್ಲ. ಇಲ್ಲಿನ ಪ್ರಾದೇಶಕತೆಯನ್ನು ಚಿತ್ರಿಸುವಾಗಲೂ ಇದೆ. ಭಾಷೆಯನ್ನು ಮುಂದುವರೆಸಿದ್ದಾರೆ. ಕಾಸರಗೋಡು, ಕೋಳ್ಯೂರಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೆಲೆಸಿರುವ ಪಾತ್ರಗಳಾಗಿ ಕಾರಂತರೂ ಮತ್ತು ಅವರ ಕುಟುಂಬ, ಸದಾನಂದನ ತಾತಾನ ತಂಗಿ ಕಾವೇರಜ್ಜಿ ಇವರ ಪಾತ್ರಗಳ ಸಂಭಾಷೆಣೆಯಲ್ಲೂ ಕಾಸರಗೋಡಿನ ಹವ್ಯಕರ ದೇಸೀ ಭಾಷೆಯಲ್ಲಿ ಸಂಭಾಷಣೆಯನ್ನು ನೋಡಲು ಸಾಧ್ಯವಾಗಿಲ್ಲ. ಅಲ್ಲೂ ದಕ್ಷಿಣ ಕನ್ನಡದ ಗ್ರಾಂಥಿಕ ಶೈಲಿಯ ಸಂಭಾಷಣೆಯನ್ನು ಕಾಣಬಹುದು.
ಇಲ್ಲಿ ಭಾಷೆ ಹಿಡಿತ ಸಾಧಿಸಿರುವುದು ವಿದ್ಯಾವಂತ ಪಾತ್ರಗಳು ಎನಿಸುತ್ತದೆ. ಅದಕ್ಕೆ ತಕ್ಕಂತೆ ಮಿಕ್ಕ ಪಾತ್ರಗಳು ತಮ್ಮ ಕೈ ಜೋಡಿಸಿದೆ ಹಾಗಿದೆ.

ಕಾದಂಬರಿಯಲ್ಲಿ ಬರುವ ಕೆಲವು ಚುಚ್ಚು ಮಾತುಗಳು ಅತಿಶಯೋಕ್ತಿಗಳು ಮತ್ತು ಕೆಲವು ಸಂಭಾಷಣೆಯ ಭಾಗಗಳನ್ನು ನೋಡಬಹುದು.

ವಸಂತಿ ತಂದೆ ಸತ್ತ ಮೇಲೆ ಮನೆಯ ಕಷ್ಟ ತಿಳಿದು ಅಣ್ಣನಿಗೆ ಸಹಾಯಕನಾಗಿ ನಿಲ್ಲುತ್ತೇನೆ ಎಂದಾಗ ಮೋಹನ ಹೇಳುವ ಮಾತು –

- "ಹ್ಞೂ, ಇನ್ನು ಅದೊಂದು ಬಾಕಿ, ನೀನು ದುಡಿದು ನಾನು ತಿನ್ನಬೇಕಂತಲೋ? ಅಪ್ಪ ಸತ್ತ ಮೇಲೆ ಸರಿಯಾಗಿ ನಮ್ಮನ್ನು ನೋಡಿಕೊಳ್ಳಲಿಲ್ಲ ಎಂಬ ಅಪವಾದಕ್ಕೇ ನೀನು ನೌಕರಿ ಹಿಡಿಯೋದು? ನೀನು ನೌಕರಿ ಹಿಡಿಯೋದು ಬೇಡ, ಏನು ಬೇಡ"(6)

  ಎಂದು ವಸಂತಿಗೆ ಚುಚ್ಚು ಮಾತನಾಡುತ್ತಾನೆ.

  ಆಸ್ಪತ್ರೆಗೆ ಬರುವಾಗ ವಸಂತಿ ಮತ್ತು ರಾಜೀವಿ ತಮ್ಮ ಸಹದ್ಯೋಗಿಗಳ ಮುಜುಗರ ತರಿಸುವ ಗುಣವನ್ನು ರಾಜೀವಿ ವಸಂತಿಯಲ್ಲಿ ಹೇಳುವ ರೀತಿ –

- ವಸಂತಿ ನೋಡೇ ಅಲ್ಲಿ ಬರ್ತಿದ್ದಾಳಲ್ಲ – ಆ ಎಡ್ವರ್ಡ್ ಎಂತಹ ಗಂಡು ಬೀರಿ ಗೊತ್ತಾ? ಅವಳು ಯಾವಾಗಲೂ ಮೇಲೆ ನರ್ಸುಗಳೊಂದಿಗೆ, ಡಾಕ್ಟ್ರ ಮೂರ್ತಿ, ರಮೇಶ್‌ರೊಂದಿಗೆ ಮೇಲು ಬಿದ್ದೇ ಮಾತಡೋದು, ಯಾಕಪ್ಪ ಇವುಗಳಲ್ಲಿ ಇಲ್ಲಿಗೆ ಬರೋದು".

  ಡಾ। ಮೋಹನ್‌ಗೆ ವಸಂತಿ ಮತ್ತು ರಾಜೀವಿ, "ಗುಡ್ ಮಾರ್ನಿಂಗ್' ಹೇಳಿದಾಗ ಆತನ ಪ್ರತಿಕ್ರಿಯೆ ಮತ್ತು ವಸಂತಿಯ ಮಾತು ಹೀಗಿದೆ.

- ಕೋತಿಯ ಹಾಗೆ ನಕ್ಕು ಮುಂದೆ ಹೋದೊಡನೆ ವಸಂತಿ ಹೇಳಿದಳು ಪಕ್ಕಾ ಅಸಾಮಿ ಇವನು; ಹ್ಞೂ, ಕೃಷ್ಣನ ಮತ್ತೊಂದು ಅವತಾರ"

ಸದಾನಂದ ವಸಂತಿಯ ಪ್ರೀತಿಯ ವಿಷಯ ಮನೆಯವರಿಗೆ ತಿಳಿದಾಗ, ಸರೋಜಮ್ಮ ತಮ್ಮ ಗಂಡನ ಮೇಲೆ ಸದಾನಂದನ ಮೇಲೆ ಇದ್ದ ಸಿಟ್ಟನ್ನು ಕಾರುತ್ತಾರೆ. ಆಗ ನರ್ಸಪ್ಪಯ್ಯ ಈ ರೀತಿ ಹೇಳುತ್ತಾರೆ.

"ಹ್ಞೂ, ಸದಾನಂದ ಹಾಗೆ ಮಾಡಿದ, ನೀನು ನನ್ನ ಮೇಲೆ ದೋಷಾರೋಪಣೆ ಮಾಡು, ಅಂತೂ ನನಗೆ ನಡು ನೀರಲ್ಲಿ ಮುಳುಗವ ಗತಿ!"

ಸದಾನಂದ ವಸಂತಿಯನ್ನು ಬಿಟ್ಟು ಬೇರೆ ಮದುವೆಯಾಗುವುದಿಲ್ಲ, ಅದಕ್ಕೆ ತಂದೆ ತಾಯಿ ಒಪ್ಪಿಗೆ ಬೇಕು ಅವರು ಒಪ್ಪದೆ ಮದುವೆ ಯಾಗುವುದಿಲ್ಲ, ಅವರ ಒಪ್ಪಿಗೆ ಕಾಯುತ್ತೇನೆ ಎಂದು ಮನಸ್ಸಿನಲ್ಲಿ ನಿರ್ಧರಿಸಿದ್ದನು. ಆದರೆ ಸರೋಜಮ್ಮನ ಚುಚ್ಚು ಮಾತು ಹೇಗಿದೆ –

- "ಏನು ನನ್ನ ಒಪ್ಪಿಗೇನಾ? ಅವನು ಆ ನರ್ಸನ್ನು ಈ ಮನೆಯ ಒಳಗೆ ತರಬೇಕಾದರೆ ನಾನು ಸಾಯಬೇಕು. ನಾನು ಜೀವಂತ ಇರುವಾಗ ಅವಳು ಬಂದು ಇದು ಆಸ್ಪತ್ರೆಯಾಗುವುದು ಬೇಡ, ಅಷ್ಟು ಉಪಾಹಾರ ಮಾಡಿದರೆ ಸಾಕು ಅಂತ ನಿಮ್ಮ ಮಗನಿಗೆ ಹೇಳಿ".

ಕಾವೇರಮ್ಮನನನ್ನು ಭೇಟಿ ಮಾಡಿ ಹಿಂದಿರುಗಿದಾಗ ಸದಾನಂದ. ಸದಾನಂದನ ನಡವಳಿಕೆಯನ್ನು ಮೆಚ್ಚಿ ನರ್ಸಪ್ಪಯ್ಯನ ಬಗ್ಗೆ ಹೇಳುವ ಮಾತು –

- "ಅಣ್ಣನಂಥದ್ದೆ ರೂಪ, ಅವನದ್ದೇ ಗುಣ, ಅವನಿಗೆ ಹೇಗೆ ಹುಟ್ಟಿ ಕೊಂಡನೋ ಏನೋ ಆ ನರ್ಸಪ್ಪಯ್ಯ, ಎಲ್ಲವನ್ನೂ ಮರೆತು ಹೋದ ಆ ಬುದ್ದಿವಂತ"(7).

ಸದಾನಂದ ರಾಘವನಿಗೆ ಅಪಘಾತವಾಗಿದೆ ಎಂದು ತಿಳಿದು ಬೆಂಗಳೂರಿಗೆ ಬಂದು ತಮ್ಮನ ಯೋಗಕ್ಷೇಮ ವಿಚಾರಿಸಿ ತನ್ನ ಜೊತೆ ಹಳ್ಳಿಗೆ ಬಾ ಎಂದಾಗ ರಾಘವನೂ ಹಳ್ಳಿಗೆ ಹೋಗಲು ನಿರ್ಧರಿಸುತ್ತಾನೆ. ಆಗ ಸರೋಜಮ್ಮನ ಪ್ರತಿಕ್ರಿಯೆ –

- "ಯಾರನ್ನು ಮರುಳು ಮಾಡುವಿಯಪ್ಪಾ ನೀನು? ಆ ಹಳ್ಳಿಗೆ ಕರೆದೊಯ್ಯಲು ಏನಿದೆಯಪ್ಪಾ, ಅಲ್ಲಿ, ಈ ಬೆಂಗಳೂರಿಗಿಂತ ಮಿಗಿಲಾದುದು"?
- ಕಾದಂಬರಿಯಲ್ಲಿ ಬರುವ ಕೆಲವು ಮನುಷ್ಯ ಜೀವನದ ನಿಜ ಸತ್ಯಗಳನ್ನು ಕೆಲವು ಸಂದರ್ಭದಲ್ಲಿ ಬಳಸಿದ್ದಾರೆ ಅದು ತುಂಬಾ ಒಪ್ಪುವಂತಹದು ಸಹ ಆಗಿದೆ.

ಸದಾನಂದ ತಾನು ದಿನ ಊಟಕ್ಕೆ ಹೋಗುತ್ತಿದ್ದ ಅಶೋಕ ಭವನ ಪ್ರೋಪ್ರ್ಯಾಟರ್ ಸಾವು ಸಂಭವಿಸಿದಾಗ ಸದಾನಂದನಿಗೆ ಅನಿಸುವುದು ಈ ರೀತಿ –

- ಪ್ರಕೃತಿಯ ವಿರುದ್ದ ಮನುಷ್ಯನ ಹೋರಾಟ ಎಷ್ಟೊಂದು ಸೀಮಿತ ಏನಿದೆ. ಈ ಮನುಷ್ಯನಲ್ಲಿ? ಬರೇ ಒಂದು ಗುಳ್ಳೆಯ ಹಾಗೆ".
- ನಿನ್ನೇ ರಾತ್ರಿ ಹೋಟೆಲಿಗೆ ಹೋದಾಗ ನಗುಮುಖದಿಂದ ಸ್ವಾಗತಿಸಿದ ಈ ಮನುಷ್ಯ ಇಂದು ಒಂಭತ್ತುವರೆಗೆ ಹೆಣ! ಎಂದು ಜೀವನದ ದಿಕ್ಕೆ ಹೇಗೆ ಎಂದು ಯಾರು ತಿಳಿಯಲು ಸಾಧ್ಯವಿಲ್ಲ ಅನಿಸುತ್ತದೆ.

ಸದಾನಂದ ಹಳ್ಳಿಯಲ್ಲಿ ಆಸ್ಪತ್ರೆಯನ್ನು ಪ್ರಾರಂಭ ಮಾಡಲು ದಿನ ನಿಶ್ಚಯಿಸಿದಾಗ ಕಾರಂತರೂ ಹೇಳು ಮಾತು –

- ಯಾವುದೇ ಶುಭ ಕಾರ್ಯ ಮಾಡುವಾಗ ವಿಷಗಳಿಗೆ ಬರಬಾರದು ಡಾಕ್ಟ್ರೆ ನಾವು ನಮ್ಮ ಸಂಸ್ಕೃತಿ ಮೀರಿ ನಡೆಯಬಾರದು. ಯಾವುದಕ್ಕೂ ನಮ್ಮ ಪುರೋಹಿತಭಟ್ಟರಲ್ಲಿ ದಿನ ಕೇಳಿಯೇ ಆರಂಭಿಸಿ ಬಿಡಿ ಆಸ್ಪತ್ರೆ".
- ಕಾರಂತರು ಮತ್ತು ಸದಾನಂದ ಒಮ್ಮೆ ಧರ್ಮಸ್ಥಳದ ಮೇಳಕ್ಕೆ ಹೋದಾಗ ಅಲ್ಲಿ ನರಸಿಂಹಮಯ್ಯರು ಕಾರಂತರನ್ನು ಮಾತಾಡಿಸಿದಾಗ ಸದಾನಂದನ ಪರಿಚಯವಾಗಿ,

ಮಯ್ಯರು ತಮ್ಮ ತಾತಾನ ತಂಗಿ ಮಗ ಎಂದು ತಿಳಿಯುತ್ತದೆ. ಕಾರಂತರು ಆಗ ಸದಾನಂದನಿಗೆ ವೇಷಧಾರಿಗಳ ಇತಿಹಾಸವನ್ನು ಹೇಳುವುದು ಹೀಗೆ.

- "ಕಲಾಭಿಮಾನದಿಂದ ಮೇಳಕೆ, ಹೋಗುವವರು ಕಡಿಮೆ ಡಾಕ್ರ್ರೀ ಜೀವನೋಪಾಯವಾಗಿ ಅದನ್ನು ಬಳಸುವವರೇ ಹೆಚ್ಚು ಮಂದಿ. ಕಲೆಗಾಗಿ ಕಲೆ ಎನ್ನುವ ಮಾತು – ವ್ಯವಹಾರದಲ್ಲಿ ಸುಳ್ಳು"(8) ಎಂದು ತಿಳಿಸುತ್ತಾರೆ.

ಕಾವೇರಜ್ಜಿಯನ್ನು ನೋಡಲು ಅವರ ಮನೆಗೆ ಸದಾನಂದ ಹೋದಾಗ, ಅವನು ತನ್ನ ಯೋಜನೆಗಳ ಬಗ್ಗೆ ತಿಳಿಸಿದಾಗ ಸಂತೋಷಗೊಂಡ ಕಾವೇರಜ್ಜಿ ವಿದ್ಯೆ ಕಲಿಸುವುದು ಮುಖ್ಯ ಅಲ್ಲ ಅದು ತಮ್ಮ ಹಳ್ಳಿಯ ಕಡೆಯು ಗಮನ ಹರಿಸುವಂತೆ ಇರುಬೇಕು ಎಂದು ಹೇಳುವುದು ಹೀಗೆ –

- ಮಕ್ಕಳಿಗೆ ಕಲಿಸೋದು ಸುಮ್ಮನೆ, ಕಲಿತ ವಿದ್ಯೆ ಹಿರಿಯರ ನೆಲದತ್ತ ಕೂಡ ಕಣ್ಣಾಡಿಸುವುದಿಲ್ಲ. ನಿನ್ನ ಅಪ್ಪನನ್ನೇ ನೋಡು, ಈಗ ಆಸ್ತಿಯನ್ನು ಮಾರೋದು ಎನ್ನುವಷ್ಟರ ತನಕ ಮುಂದೆ ಬಂದಿದ್ದಾನೆ. ಅಂದರೆ ಎಲ್ಲಿ ತನಕ ಬಂತು"?

  ರಾಘವನಿಗೆ ಅಪಘಾತವಾಗಿ ಬಲಗಾಲು ಸಂಪೂರ್ಣ ಕಳೆದು ಕೊಂಡಾಗ ಮಗಣ ದುರ್ವ್ಯವಸ್ಥೆಯನ್ನು ಕಂಡು ನರ್ಸಪ್ಪಯ್ಯನವರು ದು:ಖಿತರಾದಾಗ ರಾಘವನೇ ತಂದೆಗೆ ಸಮಾಧಾನದ ಮಾತುಗಳನ್ನು ಹೇಳಿ ಅವನ ಮನಸ್ಸಿನಲ್ಲಿ ಮೂಡುವ ಯೋಚನೆಗಳು ಹೀಗಿವೆ "ಬದುಕು ನಾವೆಣಿಸಿದಂತೆ ಇಲ್ಲ ಅಪ್ಪಯ್ಯ, ಹಾಗಿದ್ದರೆ ಈ ಪ್ರಪಂಚವೇ ಆಗುತ್ತಿದ್ದಿಲ್ಲ, ಏನೋ ಇಷ್ಟರತನಕ ಓದಿ ಕೆಲಸ ಮಾಡುವ ಯೋಗ ನನಗೆ ಇತ್ತು. ದೇವರಿಗೆ ಇನ್ನು ಸಾಕು ಅನಿಸಿತು ಅಷ್ಟೇ ಹಾಗೇ ಆಯಿತು. ಅದರಲ್ಲಿ ಅಳುವಂತಾದ್ದು ಬೇಸರಿಸುವಂತಾದ್ದು ಏನು ಇಲ್ಲ".

- "ಬರೀ ವಿದ್ಯೆಯನ್ನು ನಂಬಿದವನ ಗತಿ ಇಷ್ಟೆ! ವಿದ್ಯೆಯಷ್ಟೆ, ಕೃಷಿ ಉದ್ಯೋಗವೂ ಇದ್ದರೆ ಮಾತ್ರ, ಇನ್ನು ಪ್ರಪಂಚದಲ್ಲಿ ನನ್ನಂಥವರಿಗೆ ಕಾಲಹರಣ ಸಾಧ್ಯ".

- "ಯಾವುದರ ಇತ್ಯರ್ಥಕ್ಕೂ ಬಂದಿಲ್ಲ ಅಷ್ಟು ಸುಲಭವಾಗಿ ಜೀವನದ ಪ್ರಶ್ನೆ ಬಿಡಿಸಲಾಗುತ್ತದೆಯೇ"? ನಾನು ಯಾವ ನಿರ್ಧಾರಕ್ಕೂ ಬಂದಿಲ್ಲ"(9).

**ಕನಸಿನ ಬಳ್ಳಿ ಕಾದಂಬರಿಯಲ್ಲಿ ಬರುವ ಕೆಲವು ಸಂಭಾಷಣೆಗಳು :**

ಈ ಸಂಭಾಷಣೆಯು ಸದಾನಂದ ಮತ್ತು ಅವರ ತಂದೆ ತಾಯಿಯ ಜೊತೆ ನಡೆಯುವುದಾಗಿದೆ

ಈ ವರ್ಷ ನಿನ್ನ ಅಪ್ಪ ನಿನಗೆ ಮದುವೆ ಮಾಡಬೇಕೂಂತ ಮನಸ್ಸು ಮಾಡಿದ್ದಾರೆ. ಸದಾನಂದ ಒಳ್ಳೇ ಕಡೆಯ ಒಂದು ಹುಡುಗಿಯೂ ಅವರ ಕಣ್ಣಿಗೆ ಬಿದ್ದಿದೆ.

"ಮದುವೆ?"

ಹಾಲು ಕುಡಿಯುತ್ತಿದ್ದ ಸದಾನಂದ ಆಕಸ್ಮಾತ್ ತನ್ನ ಮುಂದೆ ಬಂದು ನಿಂತ ಹೊಸೆ ಪ್ರಶ್ನೆ ನೋಡಿ ದಂಗಾದ.

"ಹ್ಞೂ ಮದುವೇನೇ? ಅದೇನು ಹಾಗೆ ನಿನಗೆ?"

"ಸದ್ಯ ನಾನೇನು ಅದರ ಬಗ್ಗೆ ಯೋಚಿಸಿಲ್ಲಮ್ಮ?"

"ಯೋಚನೆ ಏನುಂಟೋ ಸದಾನಂದ. ಹುಡುಗಿ ನೋಡಿದರಾಯಿತು. ನೋಡಿ ಒಪ್ಪಿದರಾಯಿತು ಅಷ್ಟೇ! ನರ್ಸಪ್ಪಯ್ಯನವರು ಮುಖ್ಯ ವಿಚಾರಕ್ಕೆ ಬಂದರು.

"ನಿಮಗೇನೂ ಅದು ಅಷ್ಟು ಸುಲಭ ಕಾಣಬಹುದು. ಆದರೆ ನನ್ನ ದೃಷ್ಟಿಯಲ್ಲಿ ಮದುವೆಯನ್ನು ಅಷ್ಟು ಸುಲಭವಾಗಿ ತೆಗೆದುಕೊಳ್ಳಲಾಗೊದಿಲ್ಲ!

ಹಾಗಾದರೆ ಮತ್ತೇನಪ್ಪ ನಿನ್ನ ಆಲೋಚನೆ? ಮದುವೇನೇ ಬೇಡ ಅಂತೀಯಾ? ಹಾಗಲ್ಲ, ಸದ್ಯ ಅದರ ಯೋಚನೆ ಮಾಡಲಿಲ್ಲ, ಮಾಡಬೇಕು ಅಂತ, ಅಷ್ಟೆ".

ಹೀಗೆ ಕಾದಂಬರಿಯಲ್ಲಿ ಸಂಭಾಷಣೆಗಳನ್ನು ಕಾಣಬಹುದಾಗಿದೆ. ಇಲ್ಲಿ ಬಳಸಿರುವ ಭಾಷೆ ದೇಸೀಯತೆಯನ್ನು ಕಾಣಬಹುದಾಗಿದೆ. ಸದಾನಂದ ಕೋಳ್ಳೂರಿಗೆ ಬಂದಾಗ ಅಲ್ಲಿ ನಡೆಯುವ ಸಂಭಾಷಣೆಗಳಲ್ಲಿ ಕೆಲವನ್ನು ಗಮನಿಸೋಣ.

ಕಾರಂತರು ಸದಾನಂದನನ್ನು ಬಸ್ಸ ನಿಲ್ದಾಣದಿಂದ ಸ್ವಾಗತಿಸಿ ಮನೆಗೆ ಕರೆದು ಕೊಂಡು ಹೋಗುವ ಸಂದರ್ಭದ ಸಂಭಾಷಣೆ –

"ಏನು ಕಾರಂತರೇ ಒಂದರ್ಧ ಮೈಲು ಎಂದ ನಿಮ್ಮ ದೂರ ಒಂದೂವರೆ ಮೈಲು ಆದ ಹಾಗೆ ಇದೆಯಲ್ಲ! ಇನ್ನೂ ಮೂಡು ಮನೆ ಬಂದಿಲ್ಲ?

"ಹಾಗೆ ಹೇಳಿ – ಡಾಕ್ಟ್ರೇ! ಇದು ಮೈಲೇಜಿನ ಮಿಸ್ಟಿಕಲ್ಲ, ಇದು ನನ್ನ ಕಾರುಬಾರಿನಿಂದ ಮೂಡು ಮನೆ ದೂರವಾಯಿತು ಅಷ್ಟೆ"!

ಇಲ್ಲೂ ಸಹ ದೇಸೀ ಭಾಷೆಯನ್ನು ಬಳಸಲಾಗಿದೆ. ಕಾಸರಗೋಡಿನ ಸುತ್ತ ಮುತ್ತಲಿನ ಪ್ರದೇಶದಲ್ಲಿಯೂ ಸಹ ಬಳಕೆಯಾಗಿರುವ ಭಾಷೆ ದೇಸೀ ಭಾಷೆ ಕತೆ ಪ್ರಾರಂಭವಾಗುವುದು ಮೈಸೂರು ಮತ್ತು ಬೆಂಗಳೂರಿನಲ್ಲಿ ಇಲ್ಲಿ ಬರುವ ಪಾತ್ರಗಳು ವಿದ್ಯಾವಂತ ಪಾತ್ರಗಳು ಅದಕ್ಕೆ ತಕ್ಕಂತೆ ಬೇರೆ ಪಾತ್ರ ಸಹಕರಿಸಿರುವುದನ್ನು ಕಾಣಬಹುದಾಗಿದೆ.

- ಸದಾನಂದ ಕಾರಂತರ ಜೊತೆ ತಮ್ಮ ತಾತನ ತಂಗಿ ಕಾವೇರಜ್ಜಿಯನ್ನು ನೋಡಲು ಹೋದಾಗ ಅವರ ನಡುವಿನ ಸಂಭಾಷಣೆ ಹೀಗಿದೆ –
- "ಏನು ಕಾರಂತರೇ, ಭಾರಿ ಅಪರೂಪವಾಗಿ ಬಂದಿದ್ದೀರಿ ಇದು ಯಾರು, ನಿಮ್ಮಜೊತೆಗೆ ಬಂದವರು?"

ಕಾರಂತರು, "ಮೊದಲು ನಿಮ್ಮ ವೀಳ್ಯದ ಹರಿವಾಣ ಕೊಡಿ, ಆ ಮೇಲೆ ಅವರ ಪರಿಚಯ ಅದು ದೊಡ್ಡ ಹರಿ ಕಥೆ" ಎಂದು, ವೀಳ್ಯ ಪಡೆಯುತ್ತಾ ಕಾವೇರಮ್ಮನಿಗೆ ಹೇಳಿದರು.

"ನಿಮ್ಮ ರಾಮಹೊಳ್ಯರ ಮಗ ನರ್ಸಪ್ಪಯ್ಯ ನಿಮಗೆ ಗೊತ್ತಲ್ಲಾ?"

:ಹ್ಞೂ'

"ಅವರಿಗೆ ಇವರು ಹಿರೇ ಮಗ, ಸದಾನಂದ ಅಂತ ಹೆಸರು – –

ಎಂ.ಬಿ.ಬಿ. ಎಸ್. ಡಾಕ್ಟ್ರು"

"ಹ್ಞೂ! ನರ್ಸಪ್ಪಯ್ಯನ ಮಗನಾ? ರಾಮ! ರಾಮ! ಅದೇ, ಎಲ್ಲೋ ನೋಡಿದ ಹಾಗೆ ಕಾಣುತ್ತದೆ, ಇವನ ಮುಖ ಯಾರದ್ದು ಅಂತೀರಾ ಕಾರಂತರೇ ನಮ್ಮ ಅಣ್ಣಂದೇ ರೂಪ ಇವನಿಗೆ, ಅವನಿಗಿಂತ ಸ್ವಲ್ಪ ಬೆಳ್ಳಗೆ ಜಾಸ್ತಿ ಅಷ್ಟೆ"(10).

ಹೀಗೆ ಕಾದಂಬರಿಯಲ್ಲಿ ಸಂಭಾಷಣೆಗಳನ್ನು ಕಾಣಬಹುದಾಗಿದೆ. ಇಲ್ಲಿಯೂ ಕಾಸರಗೂಡಿನ ಸುತ್ತ ಮುತ್ತಲ ಪ್ರದೇಶವಾದರೂ ಕಾವೇರಮ್ಮ ಬಳಸಿರುವ ಭಾಷೆ ದೇಸೀ ಭಾಷೆಯ ಪ್ರಯೋಗವಾಗಿದೆ.

ಸದಾನಂದ ಮತ್ತು ರಾಘವನ ಸಂಭಾಷಣೆ, ರಾಘವ, ತಂದೆ ತಾಯಿ ಯ ಜೊತೆ ಅಣ್ಣನ ಮದುವೆಯ ಬಗ್ಗೆ ಮಾತಾಡಿ ಒಪ್ಪಿಸಿದ ಮೇಲೆ ಆ ವಿಷಯ ಅಣ್ಣನಿಗೆ ತಿಳಿಸುವುದು ಈ ರೀತಿ.

- ನಿನ್ನ ನರ್ಸಿಂಗ್ ಹೋಮಿನ ಆಲೋಚನೆ ಎಲ್ಲೀ ತನಕ ಬಂತಣ್ಣ?

"ಹ್ಞೂ ಈ ಮಳೆಗಾಲ ಹೋಗಲಿ ಅಂತ ಕಾಯುತ್ತಿದ್ದೇನೆ. ಅಷ್ಟೆ ಬರುವ ಮೇದ ಒಳಗೆ ಉದ್ಘಾಟನೆ ಕೂಡ ಆಗಬೇಕು!' "ನರ್ಸಿಂಗ್ ಹೋಂ ಅಂದ ಮೇಲೆ ನರ್ಸ್ ಬೇಕು ತಾನೆ?"

"ಮತ್ತೆ ನರ್ಸ್ ಇಲ್ಲದೆ ನರ್ಸಿಂಗ್ ಹೋಂ ಹೇಗಾಗುತ್ತದೆ.

ರಾಘವ? ಏನು ತಮಾಷೆ ಮಾಡುತ್ತೀಯಾ ಏನು"?

"ಅಲ್ಲ, ಈ ಹಳ್ಳಿಗೆ ಯಾವ ನರ್ಸ್ ಬಂದು ಕೂತು ಕೊಂಡಾಳು ಅಂತ ಹಾಗೆ ಕೇಳಿದೆ, ತಮಾಷೆಗೆ ಅಲ್ಲ". ಬೇಕಾದರೆ ಕೂತ್ಕೊಳ್ಳುತ್ತಾರೆ ಇಲ್ಲ ಹೋಗಲಿ, ಒಬ್ಬರಲ್ಲದಿದ್ದರೆ ಇನ್ನೊಬ್ಬರು ಯಾರನ್ನೂ ನಂಬಿ ನಾನು ನರ್ಸಿಂಗ್ ಹೋಂ ತೆರೆಯುವುದಲ್ಲವಷ್ಟೆ.

ಅದು ಸರಿ. ಅಂದರೆ ನನ್ನಲ್ಲಿ ಒಂದು ಅಪ್ಲಿಕೆಂಟ್ ಇದೆ.

"ಏನು? ನಿನ್ನಲ್ಲಿ ಇದೆಯಾ? ತಮಾಷೆ ಮಾಡ್ತೋದಿಲ್ಲ ತಾನೇ?"

"ನಿಜವಾಗಿಯೂ ಈ ತಮಾಷೆ ಅಲ್ಲಣ್ಣ"

"ಯಾರು ಆ ಅಪ್ಲಿಕೆಂಟ್",

"ವಸಂತಿ"

ಎಂದು ನಕ್ಕ ರಾಘವ ತಾನು ತಂದೆ ತಾಯಿಯನ್ನು ಮದುವೆಗೆ ಒಪ್ಪಿಸಿದ ವಿಷಯ ತಿಳಿಸುತ್ತಾನೆ ಇಲ್ಲಿ ಸಹೋದರ ಆತ್ಮೀಯತೆಯನ್ನು ನೋಡಬಹುದಾಗಿದೆ. ಕಾದಂಬರಿಯಲ್ಲಿ ಬರುವ ಕೆಲವು ಸಂಭಾಷಣೆಗಳನ್ನು ನೋಡಬಹುದಾಗಿದೆ. ಇಲ್ಲಿ ಎಲ್ಲಾ ಕಡೆ ಬಳಕೆಯಾಗಿರುವ ಭಾಷೆ ದೇಸೀ ಭಾಷೆಯಾಗಿದೆ.

ಹೀಗೆ ಅನಂತ ಮತ್ತು ಬಳ್ಳಿ ಕಾದಂಬರಿ ಬಳಕೆಯಾಗಿರುವ ಭಾಷೆ, ಸಂಭಾಷಣೆ, ಗಾದೆ, ಬೈಗಳಗಳು ಜೀವನ ಕೆಲವು ಸತ್ಯಗಳು ಆಯಾ ಸಂದರ್ಭಕ್ಕೆ ಅನುಸಾರವಾಗಿ ಬಳಕೆ ಮಾಡಿದ್ದಾರೆ. ಅವುಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಎರಡೂ ಕಾದಂಬರಿಯಲ್ಲೂ ಗಾದೆ, ಬೈಗಳಗಳು ಪ್ರಯೋಗ ಕಡಿಮೆ ಇದೆ. ಅನಂತದಲ್ಲಿ ಮಕ್ಕಳನ್ನು ಪ್ರೀತಿಯಿಂದ ಗದರಿಸುವಾಗ ಕೆಲವೊಂದು ಪದ ಅಂದರೆ ಮಂಗ, ತಂಟ್ಲ ಮಾರಿ ಎನ್ನುವ ಪದ ಪ್ರಯೋಗವಾಗಿದೆ. ಕನಸಿನ ಬಳ್ಳಿ ಕಾದಂಬರಿಯಲ್ಲಿ ಇಂತಹ ಪದ ಪ್ರಯೋಗ ಕಾಣಲು ಸಾಧ್ಯವಾಗಿಲ್ಲ. ಗಾದೆಯೂ ಕೆಲವೊಂದು ಸನ್ನಿವೇಶಕ್ಕೆ ಅನುಗುಣವಾಗಿ ಒಂದೂ, ಎರಡೂ ಪ್ರಯೋಗವಾಗಿದೆ ಅಷ್ಟೇ? ಕನಸಿನ ಬಳ್ಳಿ ಕಾದಂಬರಿಯಲ್ಲಿ ಜೀವನದ ಕೆಲವು ಸತ್ಯಗಳನ್ನು ಹೇಲುವು ಕೆಲವು ವಾಕ್ಯಗಳು ಸಂದರ್ಭಾನುಸಾರ ಪ್ರಯೋಗವಾಗಿದೆ. ಇದರಿಂದ ಕಾದಂಬರಿಯಲ್ಲಿ ಒಂದು ಗಟ್ಟಿತನ ನೆಲೆಸಿದೆ.

ಅನಂತ ಕಾದಂಬರಿಯಲ್ಲಿ ಬಳಕೆಯಾಗಿರುವ ಕೆಲವು ಪದಗಳ ಅರ್ಥ

| | |
|---|---|
| ದಿನಗೇಳು- ಕರೆಯುವುದು | ಹೋಪದು- ಹೋಗುವುದು |
| ಎಂತ- ಏನು | ಕೂದರೆ- ಕೂತರೆ |
| ಎಂತಗಪ್ಪಾ- ಯಾಕಪ್ಪ | ಆನು- ನಾನು |
| ಎಂತಾತಪ್ಪ- ಏನಾಯಿತು | ಆತು- ಆಯ್ತು |
| ಎನ್ನ- ನನ್ನ | ಅಪ್ಪು- ಹೌದಾ |
| ಕೆಮಿ- ಕಿವಿ | ಹಾಂಗೆ- ಹಾಗೆ |
| ಅಪ್ಪಾ- ಹೌದ | ಹೋತ್ತು- ಸಮಯ |
| ಎಂತಾತು- ಏನಾಯಿತು | ಹೆರ- ಹೊರಗೆ |
| ಹೋಪಲಾಗದಾ- ಹೋಗಬಾರದೇ | ಹೀಂಗೆ- ಹೀಗೆ |
| ಕೊಡದ್ದರೆ- ಕೊಡದಿದ್ದರೆ | ಹಿಡುದು- ಹಿದಿದು |
| ಎಂತಾಗೆ- ಯಾಕೆ | ಹೇಳು- ಅನ್ನು |
| ಮಾಣಿ- ಹುಡುಗ | ಹೊಡಿ- ನಶ್ಯ |
| ಹೀಂಗಿದ್ದೂವು- ಹೀಗಿರುವುದು | ಹೋಗಿರೆಕ್ಕು- ಹೋಗಿರಬೇಕು |
| ರಜ- ಸ್ವಲ್ಪ | ಬತ್ತೆಯಾ- ಬರುತ್ತೀಯಾ |
| ಯೋಚುಸಡು- ಯೋಚಿಸಬೇಡ | ಪುಳ್ಳಿ- ಮೊಮ್ಮಗ |
| ಒಗವಲೆ- ತೊಳೆಯಲ | ಒಂದರಿ- ಒಮ್ಮೆ |
| ಓದುಲೆ- ಓದಲಿಕ್ಕೆ | ಗೆಂಡ- ಗಂಡು |
| ಕೆದೆ- ಹಟ್ಟಿ | ತಿಂತೆ- ತಿನ್ನುತ್ತೇನೆ |
| ಜೆಂಬಾರ- ಕೆಲಸ | ಜವ್ವನ- ತರುಣ |
| ಗುರ್ತ- ಪರಿಚಯ | ತಪ್ಪುಲೆ- ತರಲಿಕ್ಕೆ |

## ಅಡಿ ಟಿಪ್ಪಣಿ

(1). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ –364

(2). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ –364

(3). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ –192

(4). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ –223

(5). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-244

(6). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-262

(7). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-315

(8). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-313

(9). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-343

(10). ಡಾ. ನಾ. ಮೊಗಸಾಲೆಯವರ 'ಮೊಗಸಾಲೆ' ಕಾದಂಬರಿ ಸಂಪುಟ-1, ಪುಟ-314

# ಅಧ್ಯಾಯ-6

**ಸಮಾರೋಪ :**

ಅನಂತ ಮತ್ತು ಕನಸಿನ ಬಳ್ಳಿ ಕಾದಂಬರಿಗಳ ಕಥಾ ವಸ್ತುವು ವಾಸ್ತವವನ್ನು ಗಮನದಲ್ಲಿಟ್ಟುಕೊಂಡು ಬರೆದಿದಾಗಿದೆ. ಎರಡೂ ಕಾದಂಬರಿಗಳಲ್ಲಿ ವಾಸ್ತವಕತೆ, ಹೆಚ್ಚು ಒತ್ತು ಕೊಟ್ಟಿದ್ದಾರೆ. ಅನಂತ ಕಾದಂಬರಿಯಲ್ಲಿ ಬರುವ ಕಥಾವಸ್ತು ಒಂದು ಪ್ರದೇಶಕ್ಕೆ ಸೇರಿದ್ದು, ಇದು 'ಏಕಾಂಶ ವಸ್ತುವಿನ ಕಾದಂಬರಿ' ಯಾಗಿದೆ. ದಕ್ಷಿನ ಕನ್ನಡ ಜಿಲ್ಲೆಯ ಎಲ್ಲಾ ಸಮುದಾಯಗಳಲ್ಲೂ ಅಕ್ಕನ ಮಗಳನ್ನು ಮಾವ ಮದುವೆಯಾಗುವ ಪದ್ದತಿ ಇರುವುದಿಲ್ಲ. ಇದು ಸಂಪ್ರದಾಯ ವಿರೋದ. ಕಾರಣ ಸೊಸೆ ಮಗಳ ಸಮಾನ ಮಾವನಿಗೆ, ಮಗಳ ಮದುವೆ ಹೇಗೆ ಸಾಧ್ಯ? ಆದರೆ ಈ ಆಚರಣೆ ಬೇರೆ ಪ್ರದೇಶಗಳಲ್ಲಿ ಉಂಟು. ಇದೇ ಕಥಾವಸ್ತು ಹಾಗೇ ನೋಡಿದರೆ ಹೊರಗಿನವರಾದ ನಮಗೆ ಈ ಸಮಸ್ಯೆ ಎಷ್ಟರ ಮಟ್ಟಿಗೆ ಜ್ವಲಂತ ಸಮಸ್ಯೆ ಎನಿಸುವುದಿಲ್ಲ. ಆದರೆ ಲೇಖರ ದೃಷ್ಟಿಯಲ್ಲಿ ಅದು ಮುಖ್ಯ ಸಮಸ್ಯೆಯೇ ಆಗಿದೆ. ಇಲ್ಲಿ ಬಳಸಿರುವ ಭಾಷೆ ಸಹ ಹವ್ಯಕ ಬ್ರಾಹ್ಮಣರ ಭಾಷೆಯಾಗಿದೆ. ಇನ್ನೂ ಅಲ್ಲಿನ ಸಾಮಾಜಿಕ. ಪ್ರಾದೇಶಿಕ ಅಂಶಗಳನ್ನು ಗಮನಿಸಬಹುದಾಗಿದೆ. ಮಳೆನಾಡಿನ ಜೀವನ ಚಿತ್ರಣ ಅಲ್ಲಿನ ಪರಿಸರಗಳನ್ನು ಚಿತ್ರಿಸಿರುವುದು ತುಂಬಾ ಸೊಗಸಾಗಿದೆ.

ಈ ಕಥೆಯ ಮುಖ್ಯ ಅಂಶ ಪ್ರೇಮವೇ ಆದರೂ, ಅದು ಎಲ್ಲೂ ಬೇಸರ ತರಿಸುವ ಹಾಗಿಲ್ಲ. ಕಥನದ ಬೆಳವಣಿಗೆ ಮತ್ತು ನಿರೂಪಣೆಯಲ್ಲಿ ಎಲ್ಲಿಯೂ ರೊಮ್ಯಾಂಟಿಸಂನ ಭಾವತೀವ್ರತೆ ಇಲ್ಲದಿರುವುದು ಮುಖ್ಯ ಅಂಶವಾಗಿದೆ. ಪ್ರೇಮದ ಸಂಭಾಷಣೆಗಳು ಮುಜುಗರ ಪಡಿಸುವಂತಿಲ್ಲ. ಭಾಷೆಯ ಹಿಡಿತವನ್ನು ಸಾಧಿಸಿದ್ದಾರೆ. ವಿದ್ಯಾರ್ಥಿಯಾಗಿದ್ದಾಗ ತಮ್ಮ 20ನೇ ವಯಸ್ಸಿನಲ್ಲಿ ಬರೆದ ಕತೆಯಾದರೂ, ಕತೆಯಲ್ಲಿನ ಹಿತ ಸಾಧಿಸಿರುವುದು ಮೆಚ್ಚುವಂತಹದ್ದಾಗಿದೆ. ಭಾರತಿಗೆ ಬೇರೆ ಕಡೆ ಮದುವೆ ನಿಶ್ಚಯ, ಅನಂತ ಮತ್ತು ಭಾರತಿಯರ ಪ್ರೇಮದ ವಿಷಯ ಪ್ರಸ್ತಾಪಿಸಲು ಬಂದ ವೆಂಕಟರಮಣ, ಭಾರತಿಯ ಸಾವಿನ ವಿಷಯ ತಿಳಿದು ಆ ವಿಷಯ ಅವನಲ್ಲೇ ಉಳಿಯುತ್ತದೆ. ಇದು ವಾಸ್ತವಿಕತೆಯ ಮೇಲೆ ಬೆಳಕು ಬೀರುತ್ತದೆ. ಕೊನೆಗೂ ಅನಂತ ಮತ್ತು ಭಾರತಿಯರ ಪ್ರೇಮದ ವಿಷಯ ಯಾರಿಗೂ ತಿಳಿಯದೆ ಅನಂತವಾಗಿಯೇ ಉಳಿಯುತ್ತದೆ. ಅನಂತ ಎಲ್ಲವನ್ನು ಬಿಟ್ಟು ಮೊದಲೇ ನಿಶ್ಚಯಿಸಿದಂತೆ ಭಾರತಿ ಸಿಗದಿದ್ದರೆ ತಾನೂ ಬೇರೆ ಮದುವೆ ಆಗದೆ ಜನರ ಸೇವೆ ಮಾಡುತ್ತ ಜೀವನ ಸಾಗಿಸುವುದು ಎಂಬುದೇ ಕೊನೆಗೆ ಅನಂತನಿಗೆ ಗಟ್ಟಿಯಾಗಿ ನಿಂತು ತನ್ನ

ನಿರ್ಧಾರದಂತೆ ತಿರುಗಿಯೂ ನೋಡದೆ ನಡೆಯುತ್ತಾನೆ ಎಂಬಲ್ಲಿಗೆ ಕಾದಂಬರಿ ಮುಕ್ತಾಯವಾಗುತ್ತದೆ. ಇದು ವಾಸ್ತವದ ಮೇಲೆ ನಿಂತಿದೆ. ಹೀಗೆ ನಡೆಯುವುದು ಕಡಿಮೆ ಯಾದರೂ ಅದರಲ್ಲಿ ವಾಸ್ತವಿಕ ಅಂಶವು ಗಮನ ಸಳೆಯುತ್ತದೆ. ಅನಂತ ಕಾದಂಬರಿ ಮಹತ್ವದ್ದೇನನ್ನೂ ಹೇಳುವುದಿಲ್ಲವೆಂದರೂ, ಒಂದು ಪ್ರದೇಶದಲ್ಲಿ ಆಚರಣೆಯಲ್ಲಿ ಇದ್ದ ಸಂಪ್ರದಾಯವನ್ನು, ಇಟ್ಟುಕೊಂಡು ಅದನ್ನು ಧಿಕ್ಕರಿಸುವುದಾಗಲೀ, ಅದರಿಂದ ಬೇರೆಯವರಿಗೆ ನೋವಾಗುವ ರೀತಿಯಲ್ಲಿ ಕಥೆ ಹೆಣೆದಿಲ್ಲ. ಇದು ಗಮನಿಸಬೇಕಾದ ಅಂಶವಾಗಿದೆ. ವಾಸ್ತವಾಗಿ ಅನಂತ ಕಾದಂಬರಿಯಲ್ಲಿ ಹೋರಾಟ ಪ್ರಾರಂಭ ವಾಗುವ ಮೊದಲೆ ಮುಗಿದು ಹೋಗುತ್ತದೆ. ಇಲ್ಲಿ ಚಿತ್ರಿತವಾಗಿರುವುದೇನಿದ್ದರೂ ಹೋರಾಟದ ಪೂರ್ವರಂಗ ಅಷ್ಟೆ, ಬಹಿರಂಗ ಹೋರಾಟಕ್ಕೆ ಅಂದರೆ ಸಂಪ್ರದಾಯದವನ್ನು ಎದುರಿಸುವ ಮುಂದಿನ ಹೆಜ್ಜೆಯಾಗಿದೆ. ಅನಂತ – ಭಾರತಿಯ ಮನದೊಳಗಿನ ಕುರಿತ ತಲ್ಲಣಗಳೇ ಇಲ್ಲಿನ ಮುಖ್ಯ ಕಥಾವಸ್ತು. ಎಷ್ಟೇ ಸರಳವಾಗಿದ್ದರೂ ಇಲ್ಲಿ ಚಿತ್ರಿಸಿರುವ ತಲ್ಲಣಗಳು ಸಾಕಷ್ಟು ಸಶಕ್ತವಾಗಿಯೇ ಮೂಡಿ ಬಂದಿವೆ.

ಕಥೆಯ ಹಂದರ ಸರಳವಾದದ್ದು, ಅದು ಎತ್ತುವ ಪ್ರಶ್ನೆ ಕೂಡ ಅಷ್ಟೇನೂ ಮಹತ್ವದ್ದಲ್ಲ ಎನಿಸಿದರೂ ಕೂಡಾ ಕಾದಂಬರಿಯನ್ನು ಕಟ್ಟಿರುವ ರೀತಿ ಆ ಕಿರಿಯ ವಯಸ್ಸಿಗೆ ಅಸಾಧ್ಯ ಮತ್ತು ಅಪರೂಪವೆನ್ನಿಸುವಂಥದ್ದು, ಕಾದಂಬರಿಯಲ್ಲಿ ಸಂಭಾಷಣೆಯಲ್ಲೆಲ್ಲಾ ಸ್ಥಳೀಯ ಹವ್ಯಕರ ದೇಸೀ ಭಾಷೆಯನ್ನು ಬಳಸಲಾಗಿದೆ. ವಿವರಣೆ ಮತ್ತು ನಿರೂಪಣೆಗಾಗಿ ಸಾಮಾನ್ಯ ಗ್ರಾಂಥಿಕ ಭಾಷೆ ಬಳಸಲಾಗಿದೆ. ಕಥಾ ಬೆಳವಣಿಗೆಯಲ್ಲಿ ಸಂಯಮ, ಸನ್ನಿವೇಶಗಳನ್ನು ಚಿತ್ರಿಸುವಲ್ಲಿನ ಜಾಣ್ಮೆ ಮೆಚ್ಚುವಂಥದು.

ಕನಸಿನ ಬಳ್ಳಿ ಕಾದಂಬರಿಯ ಕಥಾ ವಸ್ತು ವಿಧವೆಯನ್ನು ಮೆಚ್ಚಿ ಮದುವೆಯಾಗಲೂ ಹೋರಾಟ ನಾಯಕ ಆದರೆ ತಂದೆ ತಾಯಿ ಅದಕ್ಕೆ ವಿರೋಧಿಸುತ್ತಾರೆ. ವಿಧವೆಯ ಸಮಸ್ಯೆಯ ಕುರಿತು ಅನೇಕ ಕಾದಂಬರಿಗಳು ರಚಿತವಾಗಿವೆ. ಆದರೆ ಕನಸಿನ ಬಳ್ಳಿ ಕಾದಂಬರಿಯ ವಿಧವೆಯ ಮರುಮದುವೆಯ ಅಂಶ ಮುಖ್ಯವಾಗಿದ್ದರೂ, ನಾಯಕ ಹಳ್ಳಿಗೆ ಹೋಗಿ ಹಳ್ಳಿಯ ಜೀವನ, ರೀತಿ – ನೀತಿ ತಿಳಿಯದವನು ಹಳ್ಳಿಗೆ ಹೋಗಿ ಕೃಷಿ ಚಟುವಟಿಕೆಯಲ್ಲಿ ತೊಡಗಿ ತನ್ನ ಯೋಜನೆಗಳನ್ನು ಕಾರ್ಯಗತಗೊಳಿಸಿ ಕೊಳ್ಳುವುದು. ವೈದ್ಯ–ರೈತನಾಗಲು ಸಾಧ್ಯ ಎನ್ನುವ ಅಂಶವನ್ನು ಕಾದಂಬರಿಯಲ್ಲಿ ತಿಳಿಸಿದ್ದಾರೆ. ಹಳ್ಳಿ ಎಂದರೆ ಹಿಂದೆ ಸರಿಯುವ ಎಷ್ಟೋ ವೈದ್ಯರಿಗೆ ಮಾದರಿಯಾಗುವಂತೆ ಸದಾನಂದನ ಪಾತ್ರ ಚಿತ್ರಣವಿದೆ. ಸರ್ಕಾರಿ ಕೆಲಸ ಬಿಟ್ಟು ಹಳ್ಳಿಗೆ ಬಂದು ಏನೋ ವ್ಯವಸ್ಥೆ ಇಲ್ಲದ ಕಡೆ ನೆಲಸಿ ಸಾರ್ವಜನಿಕರ ಸೇವೆ ಮಾಡುವುದು ಇಂದಿನ ವೈದ್ಯರಿಗೆ ಒಂದು ಪಾಠವಾಗಿದೆ.

ವಿದ್ಯಾವಂತರಾದ ಉನ್ನತ ಹುದ್ದೆಯಲ್ಲಿದ್ದರೂ ಸದಾನಂದನ ತಂದೆ ವಿಧವೆಯನ್ನು ಸೊಸೆಯಾಗಿ ಸ್ವೀಕರಿಸಿದರೆ ತಮ್ಮ ಅಂತಸ್ತಿಗೆ ಕುಂದು, ತಮ್ಮನ್ನು ನೆರೆಹೊರೆಯವರು, ಸಮಾಜ ಹೇಗೆ ಕಾಣುತ್ತದೆ ಎಂಬ ಅಳುಕು ಸಹ ಈ ಪಾತ್ರದ ಮೂಲಕ ತಿಳಿಸಿದ್ದಾರೆ. ವಿಚಾರವಂತರು ಸಹ 1970ರ ದಶಕದಲ್ಲಿ ವಿಧವೆಯ ಪುನರ್ ವಿವಾಹವಾಗಲು ಮುಂದು ಬರುತ್ತಿರಲಿಲ್ಲ ಎಂಬ ಅಂಶ ಗಮನಿಸ ಬಹುದಾಗಿದೆ. ವೃತ್ತಿಯು ಸಹ ಇಲ್ಲಿ ಮುಖ್ಯವಾಗುತ್ತದೆ. ತಂದೆ-ತಾಯಿ ಒಪ್ಪಿಯೇ ಮದುವೆಯಾಗಬೇಕು ಎಂಬ ಸದಾನಂದನ ಹಟದಿಂದ ಆತನ ವ್ಯಕ್ತಿತ್ವ ದೊಡ್ಡವರಿಗೆ ಅವನು ಕೊಡುವ ಗೌರವದ ಪರಿಚಯವಾಗುತ್ತದೆ. ಸದಾನಂದ ಮತ್ತು ಅವನ ತಮ್ಮ ರಾಘವನ ನಡುವಿನ ಸಹೋದರ ಪ್ರೀತಿ ವಿಶ್ವಾಸವನ್ನು ಗಮನಿಸಬಹುದಾಗಿದೆ, ಅಣ್ಣನಿಗೆ ಎಲ್ಲಾ ರೀತಿ ಸಹಾಯ ಮಾಡುವ ತಮ್ಮ, ತಮ್ಮನ ಅಪಘಾತದಿಂದ ಕಾಲು ಕಳೆದುಕೊಂಡಾಗ ತನ್ನ ಜೊತೆ ತನಗೆ ಸಹಾಯಕನಾಗಿ ಇರು ಎಂದು ಹಳ್ಳಿಗೆ ಕರೆದುಕೊಂಡು ಬರುವುದು, ನಂತರ ತಂದೆ ತಾಯಿಯೂ ಹಳ್ಳಿಗೆ ಬರುತ್ತಾರೆ. ಸದಾನಂದನ ತಾಯಿಯು ಹಳ್ಳಿಗೆ ಬರಲು ಇಷ್ಟ ಪಡದವರೂ ಕಾಲ ಹೇಗೆ ಪಾಠ ಕಲಿಸುತ್ತದೆ ಎಂಬ ಅಂಶ ತಿಳಿಯಬಹುದಾಗಿದೆ. ಕೊನೆಗೆ ಮಗನ ಮದುವೆಗೆ ಒಪ್ಪಿಗೆ ಕೊಟ್ಟರು ಅದು ವಸಂತಿಯ ಮರಣದಿಂದ ಕೊನೆಯಾಗುತ್ತದೆ. ಇದು ವಾಸ್ತವಿಕ ಅಂಶವನ್ನು ತಿಳಿಸುತ್ತದೆ.

ಇಲ್ಲಿ ಕಾಸರಗೋಡು ಸುತ್ತಮುತ್ತಲಿನ ಪರಿಸರದ ಚಿತ್ರಣ ಸಹಜ ಮತ್ತು ವಾಸ್ತವಿಕ ರೀತಿಯಲ್ಲಿದೆ. ಭಾಷೆಯು ದಕ್ಷಿಣ ಕನ್ನಡದ ಗ್ರಾಂಥಿಕ ಶೈಲಿಯ ಸಂಭಾಷಣೆಯನ್ನು ಕಾಣಬಹುದಾಗಿದೆ. ದೇಸೀ ಭಾಷೆಯನ್ನು ಮುಕ್ತವಾಗಿ ಬಳಸಲು ಇಲ್ಲಿ ಕಾದಂಬರಿಕಾರರು ಹಿಂದೆಗೆದಂತೆ ಕಾಣುತ್ತದೆ. ಕಾರಣ ಮೈಸೂರು ಮತ್ತು ಬೆಂಗಳೂರಿನಲ್ಲೂ ಕಥೆ ನಡೆಯುವುದು, ವಿದ್ಯಾವಂತ ಪಾತ್ರಗಳೂ ಹೆಚ್ಚಾಗಿರುವುದರಿಂದ ಆ ಪಾತ್ರಗಳಿಗೆ ಸರಿಹೊಂದುವಂತೆ ಬೇರೆ ಪಾತ್ರಗಳೂ ಭಾಷೆಯ ಬಳಕೆ ಮಾಡಿದ ಹಾಗಿದೆ. ಆದರೂ ಎಲ್ಲೂ ನಾಟಕೀಯತೆಯ ಬಳಕೆಯಾಗಿಲ್ಲ. ಮುಖ್ಯ ಪಾತ್ರವು ಸಾರ್ವಜನಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಿಕೆ ಪ್ರಬುದ್ಧ ರೀತಿಯದ್ದಾಗಿದೆ ಮತ್ತು ವಿವೇಕಯುತವಾಗಿದೆ.

ಕಾದಂಬರಿಯಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ವಿದ್ಯೆ ಕಲಿತು ಹಳ್ಳಿಯನ್ನು ತೊರೆದು ಹೋದ ಸದಾನಂದನ ತಂದೆ ಎಲ್ಲಾ ಸಂಬಂಧಗಳನ್ನು ಮರೆತು ಬದುಕಿರುತ್ತಾರೆ. ಸದಾನಂದ ಹಳ್ಳಿಗೆ ಹೋದಾಗ ಅಲ್ಲಿ ಮೇಳದಲ್ಲಿ ತಮ್ಮ ಸಂಬಂಧಿಕರ ಪರಿಚಯವಾಗಿ ತನ್ನ ತಾತಾನ

ತಂಗಿ ಇನ್ನೂ ಬದುಕಿರುವ ವಿಷಯ ತಿಳಿಯುತ್ತದೆ, ಕಾವೇರಜ್ಜಿಯದು ಮುಪ್ಪಿನ ಮಾಗಿದ ಜೀವ. ಸದಾನಂದ ಮೂಡು ಮನೆಯಲ್ಲಿ ತನ್ನೊಂದಿಗೆ ಬಂದಿರುವಂತೆ ಕೇಳಿದಾಗ ಕಾವೇರಜ್ಜಿಯು ಹೇಳುವ ಮಾತು ನೀನು ಈಗ ಬಂದು ಕರೆದೆ ಎಂದು ನರಸಿಂಹಮಯ್ಯನನ್ನು ಬಿಟ್ಟು ಬಂದರೆ, ಸುಖದ ಸುಪ್ಪತ್ತಿಗೆಯಲ್ಲಿ ಕೂಡಿಸುತ್ತೀಯ ನೀನು, ಆದರೆ ಅದು ಮೆಚ್ಚುವ ಮಾತಲ್ಲ. ಹೆಣ್ಣು ಮದುವೆಯಾದ ಮೇಲೆ, 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗಂತೆ', ಸಾಯೋಕೆ ನನ್ನ ನೆಲವೇ ಇರುವಾಗ ಯಾಕೆ ಮೂಡು ಮನೆಗೆ ಬರಬೇಕು, ನನ್ನ ಆರ್ಶೀವಾದ ನಿನ್ನ ಮೇಲೆ ಸದಾ ಇರುತ್ತದೆ ಎಂದು ಹರಸುತ್ತಾರೆ. ಕಾವೇರಜ್ಜಿಯ ಮೂಲಕ ಜೀವನದ ತತ್ವವನ್ನು ತಿಳಯಬಹುದಾಗಿದೆ.

ಅನಂತ ಕಾದಂಬರಿಯಲ್ಲಿ ಬಳಸಿರುವುದು ಹವ್ಯಕರ ಬ್ರಾಹ್ಮಣರ ಭಾಷೆಯಾಗಿದೆ. ಸಂಭಾಷಣೆಗಳೆಲ್ಲವೂ ಸ್ಥಳೀಯ ಹವ್ಯಕ ದೇಸೀ ಭಾಷೆಯಲ್ಲಿರುವುದು ಮುಖ್ಯವಾದ ಸಂಗತಿಯಾಗಿದೆ. ವಿವರಣೆ ಮತ್ತು ನಿರೂಪಣೆಗಾಗಿ ಸಾಮಾನ್ಯ ಗ್ರಾಂಥಿಕ ಬಾಷೆ ಬಳಸಲಾಗಿದೆ. ಹವ್ಯಕರ ದೇಸೀ ಬಾಷೆಯನ್ನು ಬಳಸಿ ಹತ್ತೊಂಬತ್ತರ ಹುಡುಗನೂಬ್ಬ ಕಾದಂಬರಿ ರಚಿಸಲು ತೋರಿರುವ ದೈರ್ಯ ಮೆಚ್ಚುವಂತಹದ್ದಾಗಿದೆ. ಭಾಷಾ ದೃಷ್ಠಿಯಿಂದಲೂ ಅನಂತ ಕಾದಂಬರಿಯು ಮುಖ್ಯವಾಗಿದೆ ಹೊರಗಿನವರಾದ ನಮಗೆ ಈ ಸಮಸ್ಯೆ ಅಷ್ಟೊಂದು ಜ್ವಲಂತವೆಂದು ಅನ್ನಿಸದಿರಬಹುದು, ಆದರೆ ಲೇಖಕರ ದೃಷ್ಟಿಯಲ್ಲಿ ಅದು ಮುಖ್ಯ ಸಮಸ್ಯೆಯೇ ಆಗಿದೆ. 1968 ರಲ್ಲಿ ಇದು ಸಂಪ್ರದಾಯ ವಿರುದ್ಧ ಎಂದು ತಿಳಿದಿದ್ದರು. ಆದರೆ ಈಗ ಕಾಲ ಬದಲಾಗಿದೆ ಅವರಲ್ಲಿಯೂ ಅಕ್ಕನ ಮಗಳನ್ನು ಮಾವ ಮದುವೆ ಆಗುತ್ತಿರುವುದನ್ನು ಕಾಣಬಹುದಾಗಿದೆ.

ಕನಸಿನಬಳ್ಳಿ ಕಾದಂಬರಿಯಲಿ ವಿದ್ಯಾವಂತ ಪಾತ್ರಗಳೇ ಹೆಚ್ಚಾಗಿರುವುದರಿಂದ ಮತ್ತು ನಗರ ಜೀವನದಲ್ಲಿ ಹೆಚ್ಚಾಗಿ ಘಟನೆಗಳು ನಡೆಯುವುದರಿಂದಲೋ ಏನೋ ಬೇರೆ ಪಾತ್ರಗಳು ಈ ಪಾತ್ರಕ್ಕೆ ತಕ್ಕಂತೆ ನಡೆಯುವುದನ್ನು ಕಾಣಬಹುದಾಗಿದೆ. ಆದರೆ ಎಲ್ಲೂ ಅಭಾಸವಾದಂತೆ ಕಾಣುವುದಿಲ್ಲ. ಸಮಯ ಸನ್ನಿವೇಶಗಳು ಮನುಷ್ಯನಿಗೆ ಹೇಗೆ ಪಾಠ ಕಲಿಸುತ್ತದೆ ಎಂಬ ಅಂಶವನ್ನು ನರ್ಸಪ್ಪಯ್ಯ-ಸರೋಜಮ್ಮನ ಪಾತ್ರಗಳ ಮೂಲಕ ತಿಳಿಯಬಹುದಾಗಿದೆ. ಹಳ್ಳಿಗೆ ಬಾರದ ಸರೋಜಮ್ಮ ಕೊನೆಗೆ ಮಕ್ಕಳಿಗಾಗಿ ಹಳ್ಳಿಗೆ ಬಂದು ನೆಲೆಸುತ್ತಾರೆ, ಇಲ್ಲಿ ಅವರ ಮೊದಲಿನ ದರ್ಪ ದುರಹಂಕಾರವೆಲ್ಲಾ ಇಳಿದು ಹೋಗಿರುತ್ತದೆ. ಇದು ವಾಸ್ತವದ ಮೇಲೆ ಬೆಳಕು ಚೆಲ್ಲುವ ಅಂಶವಾಗಿದೆ. ಕಾರಂತರ ಸ್ನೇಹಪರತೆ, ರಾಘವನ ಆತ್ಮೀಯತೆಯ ಚಿತ್ರಣ ಮನೋಜ್ಞವಾಗಿದೆ. ವಸಂತಿಯು ಆಕಸ್ಮಿಕವಾಗಿ ಸತ್ತಳು

ಎಂಬ ಅಂಶವೊಂದನ್ನು ಹೊರತಾಗಿಸಿ ಕಾದಂಬರಿಯಲ್ಲಿ ಎಲ್ಲೂ ಸಹಜತೆಗೆ ಕೊರತೆಯಿಲ್ಲ. ಆದರೆ ಸಾವು ಎಂಬುದು ಅನಿರೀಕ್ಷಿತವಾದುದರಿಂದ, ವಸಂತಿಯ ಸಾವೂ ಸಹ ವಾಸ್ತವವನ್ನು ಒಪ್ಪಿಕೊಳ್ಳುವಂತೆ ಮಾಡುತ್ತದೆ.

'ಅನಂತ' ಮತು 'ಕನಸಿನ ಬಳ್ಳಿ' ಕಾದಂಬರಿಗಳಲ್ಲಿ ಪ್ರಾದೇಶಿಕತೆ ಮತ್ತು ಸಾಮಾಜಿಕ ಅಂಶಗಳು ಕಾಣಬಹುದಾಗಿದೆ. ಕಾಸಗೂಡಿನ ಸುತ್ತಮುತ್ತಲಿನ ಪರಿಸರದ ಚಿತ್ರಣ ಸಹಜ ಹಾಗೂ ಸೋಗಸಾಗಿ ಮೂಡಿಬಂದಿದೆ.

# ಗ್ರಂಥ ಋಣ

ಪರಾಮರ್ಶಿದ ಗ್ರಂಥಗಳು


1. ಹೊಸಗನ್ನಡ ಸಾಹಿತ್ಯ ಚರಿತ್ರೆ:
   ಪ್ರೋ. ಎಲ್. ಎಸ್. ಶೇಷಗಿರಿ ರಾವ್
   ಪ್ರಕಾಶಕರು: ಅಂಕಿತ ಪುಸ್ತಕ
   ಬೆಂಗಳೂರು

2. ಕನ್ನಡ ಕಥನ ಸಾಹಿತ್ಯ ಕಾದಂಬರಿ:
   ಡಾ। ಜಿ.ಎಸ್.ಆಮೂರ
   ಪ್ರಕಾಶಕರು: ಸಪ್ನ ಬುಕ್ ಹೌಸ್
   ಬೆಂಗಳೂರು

3. ಕನ್ನಡ ಸಾಹಿತ್ಯ ಕೋಶ:
   ರಾಜಪ್ಪ ದಳವಾಯಿ
   ಪ್ರಕಾಶಕರು: ದಳವಾಯಿ ಪ್ರಕಾಶನ
   ಬೆಂಗಳೂರು

4. ಸಂಶೋಧನೆಯ ತಾತ್ವಿಕ ಆಯಾಮಗಳು:
   ಡಾ। ಬಿ. ಎಂ. ಪುಟ್ಟಯ್ಯ
   ಪ್ರಕಾಶಕರು: ಪ್ರಸಾರಂಗ
   ಕನ್ನಡ ವಿಶ್ವವಿದ್ಯಾಲಯ, ಹಂಪಿ

5. ಕನ್ನಡ ಸಂಶೋಧನೆಯ ವೈಧಾನಿಕತೆಗಳು:
   ಡಾ। ಅಮರೇಶ ನುಗಡೋಣಿ
   ಪ್ರಕಾಶಕರು: ಪ್ರಸಾರಂಗ
   ಕನ್ನಡ ವಿಶ್ವವಿದ್ಯಾಲಯ, ಹಂಪಿ

6. ಮೊಗಸಾಲೆ ಕಾದಂಬರಿ ಸಂಪುಟ–1 :
ಡಾ। ನಾ. ಮೊಗಸಾಲೆ
ಪ್ರಕಾಶಕರು: ಡಾ। ನಾ. ಮೊಗಸಾಲೆ
ಕವಿತ, ಕಾಂತಾವರ

7. ಮೊಗಸಾಲೆ ಕಾದಂಬರಿ ಸಂಪುಟ–2 :
ಡಾ। ನಾ. ಮೊಗಸಾಲೆ
ಪ್ರಕಾಶಕರು : ಸಾಹಿತ್ಯ ಸುಗ್ಗಿ
ಬೆಂಗಳೂರು

8. ಭಾಷೆ :
ನಾರಾಯಣ ಕೆ.ವಿ (ಸಂಪಾದಕರು)
ವಿಶ್ವಕೋಶ
ಕನ್ನಡ ವಿಶ್ವವಿದ್ಯಾಲಯದ ಪ್ರಕಟಣೆ

9. ಆಡುನುಡಿ ಪ್ರಯೋಗದ ಚಾರಿತ್ರಿಕ ಮಹತ್ವ
ಹರಿಕೃಷ್ಣ ಭರಣ್ಯ
ವಿಶ್ರಾಂತ ಕನ್ನಡ ಪ್ರಾಧ್ಯಾಪಕ
ಕಾಸರಗೋಡು, ಕೇರಳ

10. ಭಾಷೆ ಮತ್ತು ಬರಹ
ಭಾಷೆ ಮತು ಭಾಷಾ ವಿಜ್ಞಾನ

11. ಅಧ್ಯಯನದ ವಿಧಿ ವಿಧಾನಗಳು
ಡಾ।.ಕೆ.ರವೀಂದ್ರನಾಥ
ಪ್ರಕಾಶಕರು: ಕನ್ನಡ ವಿಶ್ವ ವಿದ್ಯಾಲಯ ಹಂಪಿ

12. ಸಂಶೋದನೆ ಏನು? ಏಕೆ? ಹೇಗೆ?
ಎಂ. ಚಂದ್ರ ಪೂಜಾರಿ
ಪ್ರಕಾಶಕರು: ಕನ್ನಡ ವಿಶ್ವ ವಿದ್ಯಾಲಯ ಹಂಪಿ

13. ಸಂಶೋಧನೆ

ಡಾ। ಎಂ. ಚಿದಾನಂದ ಮೂರ್ತಿ
ಪ್ರಕಾಶಕರು: ಡಿ.ವಿ.ಕೆ. ಮೂರ್ತಿ ಪ್ರಕಾಶನ
ಮೈಸೂರು

14. ಕನ್ನಡ ಸಂಶೋಧನ ಶಾಸ್ತ್ರ

ಎಂ.ಎಂ. ಕಲಬುರ್ಗಿ
ಪ್ರಕಾಶಕರು: ಚೇತನ ಬುಕ್ ಹೌಸ್
ಮೈಸೂರು

15. ಕನ್ನಡ ಕಾದಂಬರಿಯ ಮಾದಲ ಹೆಜ್ಜೆಗಳು

ವಿವೇಕ ರೈ [ಸಂಪಾದಕರು]
ಪ್ರಕಾಶಕರು: ಮಂಗಳೂರು ವಿಶ್ವ ವಿದ್ಯಾಲಯ
ಮಂಗಳೂರು [1987]

16. ಕನ್ನಡ ಕಾದಂಬರಿ ನಡೆದು ಬಂದ ರೀತಿ

ಶಾಂತಿನಾಥ ದೇಸಾಯಿ
ಪ್ರಕಾಶಕರು: ಕರ್ನಾಟಕ ವಿಶ್ವ ವಿದ್ಯಾನಿಲಯ
ಧಾರವಡ [1989]

17. ಮೊಗಸಾಲೆ ಸಂಪುಟ–3

ಡಾ। ನಾ. ಮೊಗಸಲೆ
ಪ್ರಕಾಶಕರು: ಸಾಹಿತ್ಯ ಸುಗ್ಗಿ
ಬೆಂಗಳೂರು

18. ಉಲಂಘನೆ

ಡಾ। ನಾ. ಮೊಗಸಾಲೆ
ಪ್ರಕಾಶಕರು: ಸುಮುಖ ಪ್ರಕಾಶನ
ಬೆಂಗಳೂರು

19. ಕಾದಂಬರಿಕಾರನಾಗಿ ಕಾರಂತ
ಜಿ. ಎಸ್. ಶಿವರುದ್ರಪ್ಪ [ಸಂಪಾದಕರು]
ಪ್ರಕಾಶಕರು: ಬೆಂಗಳೂರು ವಿಶ್ವ ವಿದ್ಯಾಲಯ
ಬೆಂಗಳೂರು [1983]

20. ಮೂಕಜ್ಜಿಯ ಕನಸುಗಳು
ಶಿವರಾಮ ಕಾರಂತ
ಪ್ರಕಾಶಕರು: ರಾಜಲಕ್ಮಿ ಪ್ರಕಾಶನ [ಪ್ರಥಮ ಮುದ್ರನ]
ಬೆಂಗಳೂರು [1968]

21. ಇಂದಿರ ಬಾಯಿ
ಗುಲ್ವಾಡಿ ವೆಂಕಟ ರಾಯರು
ಪ್ರಕಾಶಕರು: ಕನ್ನಡ ಸಾಹಿತ್ಯ ಪರಿಷತ್ತು

22. ಮಾವಿನ ತೋಪು
ಹ. ಪೀ. ಜೋಶಿ
ಜಯ ಕನ್ರಾಟಕ ಗ್ರಂಥ ಮಾಲಾ
ಧಾರವಡ [1968]

23. ಫಣಿಯಮ್ಮ
ಎಂ. ಕೆ ಇಂದಿರಾ
ಪ್ರಕಾಶಕರು: ಮನೋಹರ ಗ್ರಂಥ ಮಾಲಾ
ಧಾರವಾಡ [1976]